
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 35 ಆಗಸ್ಟ್ 28, 2005 ಬೆಲೆ ರೂ. 3.00




ಸಾರ್ವಜನಿಕ ಕೈಗಾರಿಕೆಗಳ ಸ್ಥಾಪನೆ ಮತ್ತು ಉದ್ಯೋಗ ಸೃಷ್ಟಿ




ನೆರೆ ಹಾವಳಿ : ರೈತರ ಸಾಲ ಮನ್ನಾ ಆಗಲಿ

ಸಿಖ್ ವಿರೋಧಿ ಗಲಭೆ



ಭೀಕರ ಕ್ರೌರ್ಯದ ನೆನಪು



ವೃತ್ತಿ ಶಿಕ್ಷಣ : ಕಾಡಿನ ನ್ಯಾಯ !



ಮಹಿಳೆ ಮತ್ತು ಉದ್ಯೋಗ

- ನಕ್ಸಲ್‌ವಾದದ ವಿರುದ್ಧ ಜನಜಾಗೃತಿ ಅಗತ್ಯ
- ಅರಣ್ಯ ಭೂಮಿ ಸಾಗುವಳಿ ಸಕ್ರಮಗೊಳ್ಳಲಿ
- ಜಾಗತೀಕರಣ ಲೀಲೆ - ಬಡ ಆಫ್ರಿಕಾ ದೇಶಗಳು ಹರಕೆಯ ಕುರಿಗಳೇ ?

ಇತ್ತೀಚೆಗೆ ನಿಧನರಾದ ಕಾಂ. ಟಿ.ಎಸ್.ಮಣಿಯವರು ಮುಖಂಡತ್ವಕ್ಕೆ ಬಂದಾಗಿನ ಸನ್ನಿವೇಶ ಸುಲಭವಾದುದಾಗಿರಲಿಲ್ಲ. ಸರ್ಕಾರದ ಕಾರ್ಮಿಕ ವಿರೋಧಿ ನೀತಿಯ ಧಾಳಿ - ವರ್ಗಶತ್ರುಗಳ ಆಕ್ರಮಣ - ಸಂಕೀರ್ಣವಾದ ಸಂಘಟನಾ ಪರಿಸ್ಥಿತಿ - ಪಕ್ಷದ ವಿಭಜನೆ ಇನ್ನೂ ಹಲವು ಗಂಭೀರ ಸವಾಲಿನ ಸನ್ನಿವೇಶ ಅದಾಗಿತ್ತು. ಸಂದರ್ಭದ ಸವಾಲನ್ನು ಸ್ವೀಕರಿಸಿ ಕಮ್ಯುನಿಸ್ಟ್ ಪಕ್ಷವನ್ನು - ಕಾರ್ಮಿಕ ಚಳುವಳಿಯನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ಧೀಮಂತಿಕೆಯ ಕುರಿತು ಕೆಜಿಎಫ್ ಹಿರಿಯ ಸಂಗಾತಿಗಳ ನೆನಪುಗಳನ್ನು ಲೇಖನದ ರೂಪಕ್ಕೆ ತಂದಿದ್ದಾರೆ ಕಾಂ. ಅಚ್ಯುತ



ಸಂಕಷ್ಟದ ಪರಿಸ್ಥಿತಿಯಲ್ಲಿ ಸವಾಲು ಸ್ವೀಕರಿಸಿ ನಿಂತ ಧೀಮಂತ ನಾಯಕ

ಕೆ.ಜಿ.ಎಫ್.ನಲ್ಲಿ ಕಾಂ|| ಟಿ.ಎಸ್.ಮಣಿಯವರು ಪಕ್ಷದ ಮುಖಂಡತ್ವದ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಕ್ಕೆ ಮೊದಲು ಇದ್ದಂತಹ ಪರಿಸ್ಥಿತಿ ತುಂಬಾ ಸವಾಲಿನದಾಗಿತ್ತು.

1962 ಕೆ.ಜಿ.ಎಫ್.ನ ಕಾರ್ಮಿಕ ಚಳುವಳಿಯಲ್ಲಿ ಮತ್ತು ಕಮ್ಯೂನಿಸ್ಟ್ ಚಳುವಳಿಯಲ್ಲಿ ಬಹಳ ಪ್ರಮುಖವಾದ ವರ್ಷ.

ಇದೇ ವರ್ಷ ಚಿನ್ನದ ಗಣಿಯನ್ನು ಕೇಂದ್ರ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿತು. ನಂತರ ಮೈಸೂರು ಮೈನ್ಸ್ ವಿಭಾಗದಲ್ಲಿ ನಷ್ಟ ಉಂಟಾಗಿದೆಯೆಂದು ಹೇಳಿ ಅದನ್ನು ಮುಚ್ಚುವ ಪ್ರಸ್ತಾಪ ಮಾಡಿತು.

ಈ ತೀರ್ಮಾನವನ್ನು ವಿರೋಧಿಸಿ ಚಿನ್ನದ ಗಣಿಯ ಎಲ್ಲಾ ವಿಭಾಗಗಳ ಯೂನಿಯನ್‌ಗಳನ್ನು ಒಂದುಗೂಡಿಸಿ ಜಂಟೀ ನಾಯಕತ್ವದಲ್ಲಿ 80 ದಿನಗಳ ಮುಷ್ಕರ ಇದೇ ವರ್ಷ ನಡೆಯಿತು.

ಎಸ್.ರಾಜಗೋಪಾಲ್ ರವರು ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ 'ಶೆಡ್ಯೂಲ್ಡ್ ಕಾಸ್ಟ್ ಫೆಡರೇಷನ್'ನ (ಆರ್.ಪಿ.ಐ.) ಸಿ.ಎಂ. ಆರುಗ್ಗಂರವರನ್ನು ಸೋಲಿಸಿ ಶಾಸಕರಾಗಿ ಗೆದ್ದು ಬಂದದ್ದು ಈ ವರ್ಷವೇ.

ಚುನಾವಣೆಯಲ್ಲಿ ಸೋತ ಸಿ.ಎಂ.ಆರುಗ್ಗಂ ನೇತೃತ್ವದಲ್ಲಿ, ಶೆಡ್ಯೂಲ್ಡ್ ಕಾಸ್ಟ್ ಫೆಡರೇಶನ್, ಸ್ಥಳೀಯ ಕ್ಯಾಥೋಲಿಕ್ ಸಂಘ, ಪೋಲೀಸರು (ಸರಕಾರ) ಜಂಟಿಯಗಿ ಛಾಂಪಿಯನ್ ರೀಪ್ಸ್ ಪ್ರದೇಶದಲ್ಲಿ ಪ್ರಬಲವಾಗಿದ್ದ ಎಐಟಿಯುಸಿ ಸಂಘ ಮತ್ತು ಕಮ್ಯುನಿಸ್ಟ್ ಮುಖಂಡರು ಮತ್ತು ಕಾರ್ಯಕರ್ತರ ಮೇಲೆ ಅಮಾನುಷ ಧಾಳಿ, ದೌರ್ಜನ್ಯ ನಡೆಸಿ ಮನೆಗಳನ್ನು ಸುಟ್ಟಿರುವುದು, ಕೊನೆಗೆ ಕಮ್ಯುನಿಸ್ಟ್ ಕುಟುಂಬಗಳನ್ನೇ ಆ ಪ್ರದೇಶದಿಂದ ಅಟ್ಟಿಸಿಕೊಂಡು ಹೋಗಿದ್ದು ಇದೇ ವರ್ಷ. ಮೈಸೂರು ಮೈನ್ಸ್ ಪ್ರದೇಶದ ಕಮ್ಯುನಿಸ್ಟ್ ಹಾಗೂ ಎಐಟಿಯುಸಿ ಕಾರ್ಯಕರ್ತರ ಪ್ರಬಲ ಪ್ರತಿರೋಧದಿಂದ ಆ ಧಾಳಿಯನ್ನು ಹಿಮ್ಮೆಟ್ಟಿಸಲಾಯಿತು. ಆದರೆ ಸಂಘವನ್ನು ಮುಂದೆ ನಡೆಸಲಾಗಲಿಲ್ಲ. ಓಡಿಬಂದ ಕುಟುಂಬಗಳು ಮತ್ತೆ ಛಾಂಪಿಯನ್ ಪ್ರದೇಶಕ್ಕೆ ವಾಪಾಸು ಹೋಗಲು ಸಾಧ್ಯವಾಗಲಿಲ್ಲ. ಕೆಲವು ಕುಟುಂಬಗಳು ಮೈಸೂರು ಮೈನ್ಸ್ ಪ್ರದೇಶದಲ್ಲೇ ತಂಗಿದವು. ಹಲವಾರು ಮಂದಿ ಕಾರ್ಯಕರ್ತರು ಹಾಗೂ ಅವರ ಕುಟುಂಬಗಳು ಊರನ್ನೇ ಬಿಟ್ಟು ಹೋಗಬೇಕಾಯಿತು.

ಈ ದಬ್ಬಾಳಿಕೆ, ಕಲ್ಲು ತೂರಾಟ, ಮಚ್ಚುಗಳಿಂದ ಹೊಡೆದಾಟ ಮುಂದೆ ಹಲವಾರು ವರ್ಷಗಳವರೆಗೆ ಆಗಾಗ ಮರುಕಳಿಸುತ್ತಾ ಬಂತು. ಆರ್.ಪಿ.ಐ. ಪಕ್ಷದ ಬಾವುಟದ ನೀಲಿ ಬಣ್ಣವನ್ನು ಕಂಡರೇ ಹೇಸಿಗೆ ಪಡುವಂತಾಯಿತು. ಕಮ್ಯುನಿಸ್ಟ್ ಪಕ್ಷದ ಸದಸ್ಯರು, ಯೂನಿಯನ್ ಕಾರ್ಯಕರ್ತರು ನೀಲಿ ಬಣ್ಣದ ಉಡುಪುಗಳನ್ನು ಧರಿಸುತ್ತಲೇ ಇರಲಿಲ್ಲ.

1964 ಪರಿಷ್ಕರಣವಾದಿಗಳಿಂದ ಸಿಪಿಐ(ಎಂ) ಬೇರ್ಪಟ್ಟ ವರ್ಷ. ಇಡೀ ಕೆ.ಜಿ.ಎಫ್.ನ ಕಮ್ಯೂನಿಸ್ಟ್ ಪಕ್ಷ ಸಿ.ಪಿ.ಐ.(ಎಂ) ನೊಂದಿಗೆ ಉಳಿಯಿತು. ಇದಕ್ಕೆ ಇಲ್ಲಿ ನಡೆಯುತ್ತಿದ್ದ ಸಮರಧೀರ ಹೋರಾಟಗಳು, ಆ ಹೋರಾಟಗಳನ್ನು ಮುನ್ನಡೆಸಿದ ಮುಖಂಡರಾದ ಕಾಂ. ಕೆ.ಎಸ್.ವಾಸನ್, ಕಾಂ. ವಿ.ಎಂ.ಗೋವಿಂದನ್ ಮಾತ್ರವಲ್ಲದೆ ಶಾಸಕರಾದ ಕಾಂ. ಎಸ್.ರಾಜಗೋಪಾಲ್, ಸ್ಥಳೀಯ ಘಟಕದ ಕಾರ್ಯದರ್ಶಿ ಕಾಂ. ಎಸ್.ಸವರಿದಾಸ್ ಹೀಗೆ ಎಲ್ಲಾ ಹಿರಿಯ ಮುಖಂಡರು, ಕಾರ್ಯಕರ್ತರು ಭಿನ್ನಾಭಿಪ್ರಾಯಗಳಿಲ್ಲದೆ ಒಂದಾಗಿ ನಿಂತುದು ಕಾರಣವಾಗಿದೆ.

1964ರಲ್ಲಿ ದೇಶದಾದ್ಯಂತ ಸಿಪಿಐ(ಎಂ) ಪಕ್ಷದ ಮುಖಂಡರನ್ನು ಬಂಧನಗೊಳಿಸಿದಾಗ ಕೆ.ಜಿ.ಎಫ್.ನ ಸ್ಥಳೀಯ ಸಮಿತಿ ಕಾರ್ಯದರ್ಶಿ ಕಾಂ. ಎಸ್.ಸವರಿದಾಸ್‌ರವರನ್ನು ಬಂಧಿಸಲಾಯಿತು. 1964ರಿಂದ 1966ರ ವರೆಗೆ ಕಾಂ. ಎಸ್.ಸವರಿದಾಸ್ ರವರು ಕರ್ನಾಟಕದ ಬೇರೆ ಬೇರೆ ಜೈಲುಗಳಲ್ಲಿದ್ದರು.

ಈ ವೇಳೆಗಾಗಲೇ ಕಾಂ. ಗೋವಿಂದನ್ ನಿಷ್ಕ್ರಿಯರಾಗಿದ್ದರು. ಕಾಂ. ವಾಸನ್‌ರವರು ಹಲವಾರು ಕಾರಣಗಳಿಂದಾಗಿ ಪಕ್ಷದ ಒಳಗೆ ಇದ್ದರೂ ಚಟುವಟಿಕೆ ಕಡಿಮೆಯಾಗಿತ್ತು.

1964ರಲ್ಲಿ ಬಂಧಿತರಾದ ಕಾಂ. ಎಸ್.ಸವರಿದಾಸ್‌ರವರು 1966ರಲ್ಲಿ ಬಿಡುಗಡೆಯಾಗಿ ಕೆ.ಜಿ.ಎಫ್.ಗೆ ಬಂದರೂ ಕೂಡಾ ಅವರು ಈ ಪ್ರದೇಶದಲ್ಲಿರದೆ ಆಂಧ್ರ ಪ್ರದೇಶದ ಬೂದಗೂರಿಗೆ ಹೋಗಿ 1972ರ ವರೆಗೂ ಅಲ್ಲೇ ನೆಲೆಸಿದರು.

1964ರಲ್ಲಿ ಕಲ್ಕತ್ತಾದಲ್ಲಿ ನಡೆದ ಸಿಪಿಐ(ಎಂ)ನ ಮಹಾಧಿವೇಶನದಲ್ಲಿ ಶಾಸಕರಾಗಿದ್ದ ಕಾಂ. ಎಸ್.ರಾಜಗೋಪಾಲ್‌ರವರು ಭಾಗವಹಿಸಿದರು. ಅಲ್ಲಿಂದ ಬಂದ ನಂತರ, ಆಗಿನ ಮುಖ್ಯಮಂತ್ರಿ ನಿಜಲಿಂಗಪ್ಪನವರೊಂದಿಗೆ ನಿಕಟತೆ ಬೆಳೆಸಿಕೊಂಡಿದ್ದ ಎಸ್.ರಾಜಗೋಪಾಲ್ 1965ರಲ್ಲಿ ಶಾಸಕರಾಗಿರುವಾಗಲೇ ಪಕ್ಷ ತೊರೆದು ಕಾಂಗ್ರೆಸು ಸೇರಿದರು.

1968ರಲ್ಲಿ ಕೆಜಿಎಫ್‌ನಲ್ಲಿ ಬಿಇಎಂಎಲ್ ಕಾರ್ಖಾನೆಯ ಘಟಕ ಆರಂಭವಾಗಿ ಆ ಕಾರ್ಖಾನೆಯ ಕಾರ್ಮಿಕರು ಸಂಘವನ್ನು ಕಟ್ಟಿಕೊಳ್ಳುವುದನ್ನು ವಿರೋಧಿಸಿ ಆಡಳಿತ ವರ್ಗ ಹಲವಾರು ಅಡೆತಡೆಗಳನ್ನು ಒಡ್ಡಿತು. ಕಾಂ. ಟಿ.ಎಸ್.ಮಣಿಯವರು ಕಾಂ. ಪಿ.ರಾಮಮೂರ್ತಿಯವರ ಮಾರ್ಗದರ್ಶನದಂತೆ ಬಿಇಎಂಎಲ್ ಕಾರ್ಮಿಕರಿಗೆ ಹಲವು ರೀತಿಯ ಸಹಾಯ ಮಾಡಿದುದಲ್ಲದೆ ಮುಂದೆ ಅಲ್ಲಿ ಸಿಪಿಐ(ಎಂ) ಪಕ್ಷ ಹಾಗೂ ಸಿಐಟಿಯು ಬೆಂಬಲಿಗರ ಗುಂಪನ್ನು ರಚನೆ ಮಾಡಲು ಮಾರ್ಗದರ್ಶನ ನೀಡಿದರು.

ಹೀಗೆ ಕಷ್ಟಕರವಾಗಿದ್ದ ಹಲವಾರು ಸವಾಲುಗಳನ್ನು ಎದುರಿಸಬೇಕಾಗಿದ್ದ ಸಂದರ್ಭದಲ್ಲಿ ಕಾಂ. ಟಿ.ಎಸ್.ಮಣಿಯವರು ಪಕ್ಷದ ನಾಯಕತ್ವದ ಕೇಂದ್ರ ಸ್ಥಾನಕ್ಕೆ ಬಂದರು ಹಾಗೂ ಆ ಜವಾಬ್ದಾರಿಗಳನ್ನು ಕೆಚ್ಚೆದೆಯಿಂದ ಸ್ವೀಕರಿಸಿದರು ಎಂದರೆ ಅತಿಶಯೋಕ್ತಿಯಾಗಲಾರದು. ಪಕ್ಷದ ಸ್ಥಳೀಯ ಸಮಿತಿ ಸದಸ್ಯರಾಗಿದ್ದ ಕಾಂ. ಟಿ.ಎಸ್.ಮಣಿಯವರು 1964ರ ನಂತರ ಸ್ಥಳೀಯ ಮುಖಂಡರಾಗಿ ಮುಂದೆ ಸ್ಥಳೀಯ ಘಟಕದ ಕಾರ್ಯದರ್ಶಿಯಾಗಿ ಪಕ್ಷವನ್ನು ಉಳಿಸಿ ಕೆಂಬಾವುಟದ ಸಂಘಟನೆಯನ್ನು ಎತ್ತಿ ಹಿಡಿದರು. ಕಾಂ. ಟಿ.ಎಸ್.ಮಣಿಯವರು 1968ರಲ್ಲಿ ಶಾಸಕರಾಗಿ ಸ್ಪರ್ಧಿಸಲು ಚಿನ್ನದ ಗಣಿಯ ತಮ್ಮ ಉದ್ಯೋಗಕ್ಕೆ ರಾಜಿನಾಮೆ ನೀಡಿ ಮುಂದೆ ಪೂರ್ಣಾವಧಿ ಕಾರ್ಯಕರ್ತರಾಗಿ ದುಡಿದರು.

ಚಿನ್ನದ ಗಣಿ ಕಾರ್ಮಿಕರ 45 ದಿನಗಳ ಸಮರಧೀರ ಹೋರಾಟದ ನಾಯಕರಾಗಿ :

1975 ತುರ್ತು ಪರಿಸ್ಥಿತಿ ಘೋಷಣೆಗೆ ಸ್ವಲ್ಪ ಮೊದಲು 18,000 ಚಿನ್ನದ ಗಣಿ ಕಾರ್ಮಿಕರು ವೇತನ ಪರಿಷ್ಕರಣೆಗಾಗಿ ನಡೆಸಿದ 45 ದಿನಗಳ ಮುಷ್ಕರದಲ್ಲಿ ಕಾಂ. ಟಿ.ಎಸ್. ಪ್ರಮುಖ ಪಾತ್ರ ವಹಿಸಿದರು. ಸಿಐಟಿಯು, ಐ.ಎನ್.ಟಿ.ಯು.ಸಿ., ಆರ್.ಪಿ.ಐ.ಗೆ ಸೇರಿದ ಯೂನಿಯನ್, ಆಸ್ಪತ್ರೆ ಯೂನಿಯನ್, ಇಲೆಕ್ಟ್ರಿಸಿಟಿ ಲೇಬರ್ ಯೂನಿಯನ್‌ಗಳನ್ನೊಳಗೊಂಡ ಜಂಟೀ ಕ್ರಿಯಾ ಸಮಿತಿ ನಡೆಸಿದ ಹೋರಾಟ ಇದಾಗಿತ್ತು. ಕಾಂ. ಟಿ.ಎಸ್.ಮಣಿಯವರು ಮೈಸೂರು ಮೈನ್ಸ್ ವರ್ಕರ್ಸ್ ಯೂನಿಯನ್ (ಸಿ.ಐ.ಟಿ.ಯು.)ನ ಕಾರ್ಯದರ್ಶಿಯಾಗಿ ಈ ಜಂಟೀ ಹೋರಾಟದ ಮುಂಚೂಣಿಯ ಮುಖಂಡರಾಗಿ ದುಡಿದರು.

ಹಲವು ಸುತ್ತಿನ ಮಾತುಕತೆಗಳೂ ಫಲಕಾರಿಯಾಗದಿದ್ದುರಿಂದ ಆಡಳಿತ ವರ್ಗದ ಕಛೇರಿಯಾದ ಸ್ವರ್ಣ ಭವನಕ್ಕೆ ಕಾರ್ಮಿಕರ ಬೃಹತ್ ಮೆರವಣಿಗೆಯನ್ನು ಆಯೋಜಿಸಲಾಯಿತು. ಪೋಲೀಸರು ಪ್ರತಿಬಂದಕಾಜ್ಞೆಯನ್ನು ಹೊರಡಿಸಿದರು. ಆ ಆಜ್ಞೆಯನ್ನು ಧಿಕ್ಕರಿಸಿ ಬೃಹತ್ ಮೆರವಣಿಗೆ ನಡೆಯಿತು. ಸಿಐಟಿಯು ಸಂಘದ ಅಧ್ಯಕ್ಷರಾಗಿದ್ದ ಕಾಂ. ಎ.ಕಣ್ಣನ್ ಮತ್ತು ಇತರ ಹಲವರನ್ನು ಬಂಧಿಸಲಾಯಿತು. ಹಲವು ಮಂದಿಯನ್ನು ಕೆಲಸದಿಂದ ವಜಾ ಮಾಡಲಾಯಿತು. ಸುಳ್ಳು ಮೊಕದ್ದಮೆಗಳನ್ನು ಹೂಡಲಾಯಿತು.

ಹೋರಾಟದ ಮುಂದಿನ ಘಟ್ಟವಾಗಿ ಕಾರ್ಮಿಕರ 'ಬೆಂಗಳೂರಿಗೆ ಕಾಲ್ನಡಿಗೆ ಜಾಥಾ'ವನ್ನು ಸಂಘಟಿಸಲಾಯಿತು. ಇದರಲ್ಲಿ ಸುಮಾರು 3000ಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದರು. ದಾರಿಯುದ್ದಕ್ಕೂ ಸಿಪಿಐ(ಎಂ) ಪಕ್ಷ, ಕಿಸಾನ್ ಸಭಾ ಹಾಗೂ ಸಿಐಟಿಯು ಸಂಘಟನೆಗಳು ಕಾರ್ಮಿಕರನ್ನು ಬರಮಾಡಿಕೊಂಡು ಊಟ ತಿಂಡಿಗಳನ್ನು ನೀಡಿದರು. ಮಂತ್ರಿಗಳನ್ನು ಭೇಟಿಯಾಗಿ ಮನವಿಗಳನ್ನು ಸಲ್ಲಿಸಿ ಒತ್ತಾಯಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ.

45 ದಿನಗಳು ನಡೆದ ಈ ಮುಷ್ಕರದ ಕೊನೆಯಲ್ಲಿ ಯಾವುದೇ ಬೇಡಿಕೆಗಳೂ ಈಡೇರದೆ ಹೋದರೂ ಕಾರ್ಮಿಕರು ಮುಷ್ಕರದುದ್ದಕ್ಕೂ ಹಲವಾರು ಕಷ್ಟನಷ್ಟಗಳನ್ನು ಅನುಭವಿಸಿಯೂ ಒಗ್ಗಟ್ಟಿಗೆ ಯಾವುದೇ ಚ್ಯುತಿ ಬಾರದಂತೆ ನಡೆದುಕೊಂಡರು. ಇಂತಹ ಸಮರಧೀರ ಹೋರಾಟಕ್ಕೆ ಕಾಂ. ಟಿ.ಎಸ್. ಮಣಿಯವರು ನಾಯಕತ್ವ ನೀಡಿದರು. ○

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಆಗಸ್ಟ್ 24, 2005**
  ಕಾಂ. ಸೂರಿ ಜನ್ಮದಿನ - ವಿಚಾರಸಂಕಿರಣ, ಎನ್‌ಜಿಓ ಹಾಲ್, ಬೆಂಗಳೂರು. ಸಂಜೆ 4 ಗಂಟೆಗೆ.
- **ಆಗಸ್ಟ್ 25, 2005**
  ಸೆಪ್ಟೆಂಬರ್ 29 ರ ಮುಷ್ಕರ ಯಶಸ್ಸಿಗೆ ಕರೆ ಕಾರ್ಮಿಕ ಸಂಘಟನೆಗಳ ರಾಜ್ಯಮಟ್ಟದ ಸಮಾವೇಶ. ಪುರಭವನ - ಬೆಂಗಳೂರು
- **ಆಗಸ್ಟ್ 25, 2005**
  ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣದ ವಿರುದ್ಧ ಶಾಲಾ, ಕಾಲೇಜು ಬಂದ್ - ಎಸ್‌ಎಫ್‌ಐ ಕರೆ
- **ಆಗಸ್ಟ್ 26, 2005**
  ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಪ್ರಕಾಶ್ ಕಾರಟ್ ಬೆಂಗಳೂರಿಗೆ.
  4 ಗಂಟೆಗೆ - ವಿಚಾರಸಂಕಿರಣ, ಸೆನೆಟ್‌ಹಾಲ್‌ನಲ್ಲಿ 'ಭಾರತ - ಅಮೆರಿಕಾ ಸಂಬಂಧಗಳ ಕುರಿತು'
- **ಆಗಸ್ಟ್ 27 ರಿಂದ ಸೆಪ್ಟೆಂಬರ್ 7**
  ಸೆಪ್ಟೆಂಬರ್ 21 ರ ಮುಷ್ಕರದ ಹಿನ್ನೆಲೆಯಲ್ಲಿ ಕಛೇರಿಗಳಲ್ಲಿ, ಕೈಗಾರಿಕಾ ಕೇಂದ್ರಗಳಲ್ಲಿ ಧರಣಿ, ಮೆರವಣಿಗೆ, ರ್‍ಯಾಲಿ ಇತ್ಯಾದಿ. ಜಿಲ್ಲಾ ಕೇಂದ್ರಗಳಲ್ಲಿ ರ್‍ಯಾಲಿ
- **ಸೆಪ್ಟೆಂಬರ್ 1 ಮತ್ತು 2, 2005**
  ಹಮಾಲಿ ನೌಕರರ ರಾಜ್ಯ ಸಮ್ಮೇಳನ, ಬಳ್ಳಾರಿ
- **ಸೆಪ್ಟೆಂಬರ್ 1 ರಿಂದ 15, 2005**
  ಕಿಸಾನ್ ಸಭಾಗಳಿಂದ ದೇಶದಾದ್ಯಂತ ಪ್ರಚಾರಾಂದೋಲನ. ಸೆಪ್ಟೆಂಬರ್ 29 ರಂದು ರಸ್ತೆ ತಡೆ ಚಳುವಳಿ.

ಅಗಲಿದ ಕಾಂ. ಟಿ.ಎಸ್.ಮಣಿಯವರಿಗೆ ಕೆಜಿಎಫ್‌ನಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಸಭೆ

ದಿನಾಂಕ 13.07.05 ರಂದು ನಿಧನರಾದ ಕಾಂ. ಟಿ.ಎಸ್.ಮಣಿಯವರ ನೆನಪಿನ ಶ್ರದ್ಧಾಂಜಲಿ ಸಭೆಯನ್ನು ದಿನಾಂಕ 07.08.05 ರಂದು ಕೆ.ಜಿ.ಎಫ್.ನ ಆ್ಯಂಡರ್‌ಸನ್ ಪೇಟೆಯ ಲಕ್ಷ್ಮೀ ಟಾಕೀಸಿನಲ್ಲಿ ಏರ್ಪಡಿಸಲಾಗಿತ್ತು.

ಹಿರಿಯ ಮುಖಂಡರಾದ ಕಾಂ. ಎಸ್.ಸವರಿದಾಸ್‌ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯುವಿನ ರಾಜ್ಯ ಪ್ರಧಾನ ಕಾರ್ಯದರ್ಶಿ, ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ವಿ.ಜೆ.ಕೆ.ನಾಯರ್‌ರವರು ಕಾಂ. ಟಿ.ಎಸ್.ಮಣಿಯವರ ಭಾವಚಿತ್ರವನ್ನು ಅನಾವರಣಗೊಳಿಸಿದರು.

ಈ ಶ್ರದ್ಧಾಂಜಲಿ ಸಭೆಯಲ್ಲಿ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಜಿ.ಎನ್.ನಾಗರಾಜ್, ಜಿಲ್ಲಾ ಸಮಿತಿ ಕಾರ್ಯದರ್ಶಿ ಹಾಗೂ ಶಾಸಕರಾದ ಕಾಂ. ಜಿ.ವಿ.ಶ್ರೀರಾಮರೆಡ್ಡಿ, ರಾಜ್ಯ ಸಮಿತಿ ಸದಸ್ಯರಾದ ಕಾಂ. ವರಲಕ್ಷ್ಮಿ ಕಾಂ.ಕೆ.ಎಂ. ವೆಂಕಟೇಶ್, ಕಾಂ. ಗಾಂಧೀನಗರ ನಾರಾಯಣಸ್ವಾಮಿ, ಕಾಂ. ವೆಂಕಟಸ್ವಾಮಿ ರೆಡ್ಡಿ, ಜಿಲ್ಲಾ ಸಮಿತಿ ಸದಸ್ಯ ಕಾಂ. ಪಿ.ಶ್ರೀನಿವಾಸ್ ಹಾಗೂ ಇತರ ಜಿಲ್ಲಾ ಸಮಿತಿ ಸದಸ್ಯರು ಹಾಗೂ ತಾಲೂಕು ಸಮಿತಿಗಳ ಸದಸ್ಯರು ಭಾಗವಹಿಸಿದ್ದರು. ಸ್ಥಳೀಯ ಶಾಸಕರಾದ ಆರ್.ಪಿ.ಐ. ಪಕ್ಷದ ಎಸ್.ರಾಜೇಂದ್ರನ್, ಎ.ಐ.ಎ.ಡಿ.ಎಂ.ಕೆ.ಯ ಮಾಜೀ ಶಾಸಕ ಎಂ. ಭಕ್ತವತ್ಸಲಂ, ಕಾಂಗ್ರೆ ಪಕ್ಷದ ಸಂಪತ್ ಕುಮಾರ್, ಡಿ.ಎಂ.ಕೆ. ಪಕ್ಷದ ಡಿ.ಕರುಣಾನಿಧಿ, ಜೆ.ಡಿ.ಎಸ್.ನ ಕೆ. ರಾಜೇಂದ್ರನ್, ಬಿಇಎಂಎಲ್‌ನ ಜೆಎಸಿಯ ಮುಖಂಡರಾದ ಕಾಂ. ಸಿ.ವೇಣುಗೋಪಾಲನ್, ಬಿಇಎಂಎಲ್ ಎಸ್.ಸಿ./ಎಸ್.ಟಿ. ಅಸೋಸಿಯೇಷನ್ನಿನ ಅಧ್ಯಕ್ಷ ಕಾಂ. ಗೋಪಾಲ್ ಹಾಗೂ ಇನ್ನಿತರ ಬೇರೆ ಬೇರೆ ಜನ ವಿಭಾಗಗಳ ಮುಖಂಡರು ಭಾಗವಹಿಸಿದರು.

ಸುಮಾರು ಒಂದು ಸಾವಿರಕ್ಕೂ ಹೆಚ್ಚು ಸಂಖ್ಯೆಯಲ್ಲಿ ಸಂಗಾತಿಗಳು, ಹಿತೈಷಿಗಳು, ಅಭಿಮಾನಿಗಳು ಭಾಗವಹಿಸಿದ ಈ ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾಂ. ಎಸ್.ಸವರಿದಾಸ್‌ರವರು ಮಾತಾಡಿ ಕಾಂ. ಟಿ.ಎಸ್. ಮಣಿಯವರು ಬಾಲ್ಯದಿಂದ ಮುಖಂಡರಾಗಿ ರೂಪುಗೊಂಡ ಕೆ.ಜಿ.ಎಫ್.ನ ಕಾರ್ಮಿಕ ಚಳುವಳಿ ಹಾಗೂ ಕಮ್ಯುನಿಸ್ಟ್ ಚಳುವಳಿಯ ಪರಂಪರೆಯನ್ನು ಮುಂದಿಟ್ಟರು. ಇಂತಹ ಹೋರಾಟಗಳ ಪರಂಪರೆಯಲ್ಲಿ ಬೆಳೆದುಬಂದ ಕಾಂ. ಟಿ.ಎಸ್.ಮಣಿಯವರು ಮುಂದೆ ಹಲವಾರು ಹೋರಾಟಗಳಿಗೆ ಮುಖಂಡತ್ವ ನೀಡಿದುದನ್ನು ನೆನಪಿಸಿಕೊಂಡರು.

ಕಾಂ. ವಿ.ಜೆ.ಕೆ.ನಾಯರ್‌ರವರು 1970ರಲ್ಲಿ ನಡೆದ ಸಿಐಟಿಯು ರಾಜ್ಯ ಸಮ್ಮೇಳನದಲ್ಲಿ ಕಾಂ. ಟಿ.ಎಸ್.ಮಣಿಯವರ ಪರಿಚಯ ಆದಾಗಿನಿಂದ ಕೊನೆಯವರೆಗಿನ ಅವರೊಂದಿಗಿನ ಒಡನಾಟದ ಅನುಭವಗಳನ್ನು ಬಿಚ್ಚಿಟ್ಟರು. ಕಾಂ. ಕೆ.ಎಸ್.ವಾಸನ್, ಕಾಂ. ವಿ.ಎಂ. ಗೋವಿಂದನ್‌ರವರ ನಂತರ ಕೆ.ಜಿ.ಎಫ್.ನಲ್ಲಿ ಬಲಿಷ್ಠವಾದ ಸಂಘಟನೆಯನ್ನು ಕಟ್ಟಿದವರು ಕಾಂ.ಟಿಎಸ್.ಮಣಿ. ಕರ್ನಾಟಕಕ್ಕೆ ಮುಖಂಡತ್ವ ಕೊಟ್ಟ, ಭಾರತಕ್ಕೆ ಮಾದರಿಯಾಗಿದ್ದ ಕೆ.ಜಿ.ಎಫ್.ನಲ್ಲಿ ಸದ್ಯಕ್ಕೆ ಚಳುವಳಿಗೆ ಹಿನ್ನಡೆಯಾಗಿದೆ. ಇಲ್ಲಿನ ಗಣಿ ಮುಚ್ಚಿದೆ. ಇಲ್ಲಿ ರಾಶಿರಾಶಿಯಾಗಿ ಬಿದ್ದಿರುವ ಸೈನ್ಡ್ ಮಣ್ಣಿನಲ್ಲಿ ಟನ್‌ಗೆ 0.70 ಗ್ರಾಂ ಬಂಗಾರ ಈಗಲೂ ಸಿಗುತ್ತದೆ. ಇದು ಕೆ.ಜಿ.ಎಫ್.ನ ಮಣ್ಣು. ಇದನ್ನು ಆಸ್ಟ್ರೇಲಿಯಾದವರಿಗೆ ಬಿಡಕೂಡದು. ಗಣಿಯನ್ನು ಕೇಂದ್ರ ಸರಕಾರ ನಡೆಸಬೇಕು. ಕಾರ್ಮಿಕರಿಗೆ ಕೂಡಲೇ ಪರಿಹಾರ ನೀಡಬೇಕು. ಹೋರಾಟ ಬಿಟ್ಟರೆ ಕಾರ್ಮಿಕರಿಗೆ ಬೇರೆ ದಾರಿಯಿಲ್ಲ. ಆದುದರಿಂದ ಇಲ್ಲಿನ ಜನತೆಯ ಸಂಕಷ್ಟ ಪರಿಹಾರಕ್ಕಾಗಿ ಒಂದು ದೊಡ್ಡ ಹೋರಾಟವನ್ನು ಎಲ್ಲರನ್ನು ಒಳಗೊಂಡು ನಡೆಸಬೇಕಾಗಿದೆಯೆಂದರು.

ಡಿ.ಎಂ.ಕೆ. ಪಕ್ಷದ ಡಿ.ಕರುಣಾನಿಧಿಯವರು ಕಾಂ. ಟಿ.ಎಸ್.ರವರ ನಾಯಕತ್ವದಲ್ಲಿ ಹಲವಾರು ಬಾರಿ ನಡೆದ ಜಂಟೀ ಹೋರಾಟಗಳನ್ನು ನೆನೆಸಿಕೊಂಡರು. ಎಸ್.ಸಿ./ಎಸ್.ಟಿ. ಅಸೋಸಿಯೇಷನ್ನಿನ ಗೋಪಾಲ್ ರವರು ಕಾಂ.ಟಿ.ಎಸ್.ರವರು ಶಾಸಕರಾಗಿದ್ದಾಗ ಶೈಕ್ಷಣಿಕ ರಂಗದ ಬಗ್ಗೆ ಅವರು ತೋರಿದ ಕಾಳಜಿ

ಪುಟ 9 ಕ್ಕೆ

ಕೃಷ್ಣಾ ಕಣಿವೆಯಲ್ಲಿ ನೆರೆ ಹಾವಳಿ

ರೈತರ ಸಾಲ ಮನ್ನಾ ಮಾಡಲು ಸಿಪಿಐ(ಎಂ) ಆಗ್ರಹ

ಈದೇ ಆಗಸ್ಟ್ ಮೊದಲ ವಾರದಲ್ಲಿ ಕೃಷ್ಣ ಕಣಿವೆಯಲ್ಲಿ ಸುಮಾರು 100 ವರ್ಷಗಳ ದಾಖಲೆ ನಿರ್ಮಿಸುವ ಭೀಕರ ಪ್ರವಾಹ ಉಂಟಾಗಿದೆ. ಈ ಪ್ರವಾಹದಿಂದ ಬೆಳಗಾಂ, ಬಾಗಲಕೋಟೆ, ಗುಲ್ಬರ್ಗಾ, ರಾಯಚೂರು ಮತ್ತು ಬಿಜಾಪುರ ಜಿಲ್ಲೆಗಳ ನದಿ ತೀರದ ಗ್ರಾಮಗಳು ತತ್ತರಿಸಿ ಹೋಗಿವೆ. ಈ ಜಿಲ್ಲೆಗಳಲ್ಲಿ ಈ ವರ್ಷ ವಾಡಿಕೆಗಿಂತ ಸುಮಾರು 25ರಿಂದ 60 ಪ್ರತಿಶತ ಮಳೆ ಹೆಚ್ಚಾಗಿದೆ. ಆದರೆ ಈ ಪ್ರದೇಶಗಳಲ್ಲಿ ನೆರೆದ ಮಹಾಪೂರ ಅಲ್ಲಿ ಬಿದ್ದ ಮಳೆಗಿಂತ ಹತ್ತು ಪಟ್ಟು ಹೆಚ್ಚಿನ ಗಾತ್ರದ್ದಾಗಿದೆ. ಇದಕ್ಕೆ ಮುಖ್ಯ ಕಾರಣ ಎಂದರೆ ಮಹಾರಾಷ್ಟ್ರದ ಸಾತಾರ, ಸಾಂಗ್ಲಿ, ಕೊಲ್ಲಾಪುರ ಮತ್ತು ರತ್ನಗಿರಿ ಜಿಲ್ಲೆಗಳಲ್ಲಿ ಜುಲೈ ತಿಂಗಳ ಕೊನೆಯ ವಾರದಿಂದ ಆಗಸ್ಟ್ ತಿಂಗಳ ಮೊದಲ ವಾರದವರೆಗೆ ಬಿದ್ದ ಪ್ರಳಯಕಾರಿ ಮಳೆ. ಸಾತಾರಾ ಜಿಲ್ಲೆಯಲ್ಲಿ ಸತತ ಎರಡು ವಾರ ಪ್ರತಿ ದಿನ 500ರಿಂದ 880 ಮಿಲಿ ಮೀಟರ್‌ವರೆಗೆ ಮಳೆಯಾಗಿದೆ. ಇದರಿಂದಾಗಿ ಈ ಜಿಲ್ಲೆಗಳಲ್ಲಿ ಹುಟ್ಟಿ ಹರಿಯುವ 6 ನದಿಗಳು ಅಂದರೆ ಕೊಯ್ನಾ, ವಾರ್ಣಾ, ಯರ್ಲಾ, ದೂದ್‌ಗಂಗಾ, ವೇದ್‌ಗಂಗಾ ಮತ್ತು ಕೃಷ್ಣಾ ನದಿಗಳಲ್ಲಿ ಭೀಕರ ಪ್ರವಾಹ ಬಂದು ಮಹಾರಾಷ್ಟ್ರದಲ್ಲಿಯ ಕೊಯ್ನಾ, ಉಜನಿ, ವೀರ್‌ಭಟ್ಕಳ್, ದೂದ್‌ಗಂಗಾ ಇತ್ಯಾದಿ, ಜಲಾಶಯಗಳೆಲ್ಲಾ ತುಂಬಿ ಸುಮಾರು 5 ಲಕ್ಷ ಕ್ಯೂಸೆಕ್ಸ್‌ಗೂ ಮೀರಿದಷ್ಟು ನೀರು ಹರಿದು ಕೃಷ್ಣ ನದಿಯಲ್ಲಿ ಬಂದು ಪ್ರವಾಹ ಉಂಟಾಗಿದೆ. ಇಂತಹ ಅಗಾಧ ಪ್ರಮಾಣದ 100 ವರ್ಷಕ್ಕೊಮ್ಮೆ ಆಗುವ ಮಳೆಯಿಂದಾಗಿ ಕರ್ನಾಟಕದ 5 ಜಿಲ್ಲೆಗಳು ಭೀಕರ ಪ್ರವಾಹಕ್ಕೆ ಒಳಗಾಗಿವೆ.

ಐದು ಜಿಲ್ಲೆಗಳಲ್ಲಿ ಗಂಭೀರ ಸ್ಥಿತಿ:

ಈ 5 ಜಿಲ್ಲೆಗಳಲ್ಲಿ 115 ಗ್ರಾಮಗಳು ಜಲಾವೃತವಾದವು. 300ಕ್ಕೂ ಮಿಕ್ಕಿದ ನದಿ ತೀರದ ಗ್ರಾಮಗಳಲ್ಲಿ ಸುಮಾರು 3 ಲಕ್ಷ ಎಕರೆಯಲ್ಲಿ ಬೆಳೆದು ನಿಂತ ಪೈರುಗಳು ಮುಳುಗಿವೆ. 65,000 ಮನೆಗಳಿಗೆ ಹಾನಿಯಾಗಿದೆ. ಈ 5 ಜಿಲ್ಲೆಗಳಲ್ಲಿ 65 ಜನರು ಸಾವನ್ನಪ್ಪಿದ್ದಾರೆ, 10,000ದಷ್ಟು ದನ-ಕರುಗಳು ನೀರು ಪಾಲಾಗಿವೆ.

ರಾಜ್ಯದಲ್ಲಿಯ ಇತರ 14 ಜಿಲ್ಲೆಗಳಲ್ಲಿ :

ಈ 5 ಜಿಲ್ಲೆಗಳಲ್ಲದೆ ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ ಮತ್ತು ಕೂರ್ಗ್ ಜಿಲ್ಲೆಗಳಲ್ಲೂ ಪ್ರವಾಹದ ಸಮಸ್ಯೆ ಉದ್ಭವಿಸಿದೆ. ಹೀಗೆ ಒಟ್ಟು 9 ಜಿಲ್ಲೆಗಳು ಕರ್ನಾಟಕದಲ್ಲಿ ಪ್ರವಾಹದ ಸಮಸ್ಯೆಯನ್ನು ಎದುರಿಸುತ್ತಿವೆ. 19 ಜಿಲ್ಲೆಗಳಲ್ಲಿ ಈ ಸಲ ವಾಡಿಕೆಗಿಂತ ಅತಿ ಹೆಚ್ಚು ಮಳೆಯಾಗಿದೆ. 19 ಜಿಲ್ಲೆಗಳ 63 ತಾಲ್ಲೂಕುಗಳಲ್ಲಿ 1290 ಗ್ರಾಮಗಳ ರಸ್ತೆಗಳು, ಸೇತುವೆಗಳು, ಮನೆಗಳು, ವಿದ್ಯುತ್ ಸ್ಥಾವರಗಳು ಹಾಗೂ ನೀರು ಪೂರೈಕೆ ವ್ಯವಸ್ಥೆಗಳಿಗೆ ಸಾಕಷ್ಟು ಹಾನಿಯಾಗಿದೆ. ಈವರೆಗೆ ಇಡಿ ರಾಜ್ಯದಲ್ಲಿ ಪ್ರವಾಹ ಹಾಗೂ ಅತಿವೃಷ್ಟಿಯಿಂದ ಸತ್ತವರ ಸಂಖ್ಯೆ 126, ಪ್ರವಾಹಕ್ಕೊಳಗಾದ ಒಟ್ಟು ಜಮೀನಿನ ಕ್ಷೇತ್ರ ಸುಮಾರು 4 ಲಕ್ಷ ಎಕರೆ, ಹಾನಿಗೊಳಗಾದ ಮನೆಗಳು 85601, ಸತ್ತ ಜಾನುವಾರುಗಳ ಸಂಖ್ಯೆ 11610.

ರಾಜ್ಯದ ಪ್ರವಾಹ ಪೀಡಿತ ಪ್ರದೇಶಗಳ ಸ್ಥಿತಿಗತಿ ಕುರಿತಂತೆ ಚರ್ಚಿಸಿ ಕ್ರಮ ಕೈಗೊಳ್ಳಲು 19.8.2005ರಂದು ವಿಧಾನಸೌಧದಲ್ಲಿ ಸರ್ವಪಕ್ಷಗಳ ಸಭೆಯನ್ನು ಕರೆಯಲಾಗಿತ್ತು. ಮುಖ್ಯಮಂತ್ರಿ ಧರ್ಮಸಿಂಗ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ನೆರೆಹಾವಳಿ ಪೀಡಿತ ಪ್ರದೇಶಗಳಲ್ಲಿ ಉಂಟಾಗಿರುವ ಹಾನಿ ಹಾಗೂ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಕಂದಾಯ ಇಲಾಖೆಯ ಕಾರ್ಯದರ್ಶಿ ಎಸ್.ಎಂ.ಜಾಮದಾರ್ ವಿವರಣೆ ನೀಡಿದರು.

ಪ್ರವಾಹದಿಂದ ರಾಜ್ಯದಲ್ಲಿ ಸುಮಾರು ರೂ.3272 ಕೋಟಿ ಹಾನಿಯಾಗಿದೆ. ಪರಿಹಾರ


ಪ್ರವಾಹದಿಂದಾಗಿ ಜಾನುವಾರಗಳ ಮಾರಣಹೋಮ

ಕ್ರಮಗಳಿಗಾಗಿ ಈಗಾಗಲೇ ರಾಜ್ಯ ಸರ್ಕಾರ 136 ಕೋಟಿ ರೂ ಬಿಡುಗಡೆ ಮಾಡಿದೆ. ಬೆಳಗಾವಿ ಜಿಲ್ಲೆಗೆ 22 ಕೋಟಿ ರೂ, ಬಾಲಕೋಟೆ ಜಿಲ್ಲೆಗೆ 12 ಕೋಟಿ ರೂ. ಗುಲ್ಬರ್ಗಾ ಜಿಲ್ಲೆಗೆ 11 ಕೋಟಿ ರೂ. ಬಿಜಾಪುರ ಜಿಲ್ಲೆಗೆ 5 ಕೋಟಿ ರೂ. ಹಾಗೂ ರಾಯಚೂರು ಜಿಲ್ಲೆಗೆ 8 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ಸಭೆಗೆ ವರದಿ ಮಾಡಲಾಯಿತು. ಕೇಂದ್ರ ಸರ್ಕಾರ ಒಟ್ಟು 400 ಕೋಟಿ ರೂ. ನೀಡುವ ಭರವಸೆ ನೀಡಿದೆ ಎಂದು ತಿಳಿಸಲಾಯಿತು.

ಸಭೆಯಲ್ಲಿ ಭಾಗವಹಿಸಿದ್ದ ಬಿಜೆಪಿಯ ಡಿ.ಎಚ್.ಶಂಕರಮೂರ್ತಿ, ಜಗದೀಶ್ ಶೆಟ್ಟರ್, ಗೋವಿಂದ ಕಾರಜೋಳ, ಜನತಾದಳ(ಯು)ನ ಬಸವರಾಜ ಬೊಮ್ಮಾಯಿ,


ಸರ್ವಪಕ್ಷಗಳ ಸಭೆ

ಡಾ.ಎಂ.ಪಿ.ನಾಡಗೌಡ, ಸಿಪಿಐನ ಡಾ.ಸಿದ್ಧನಗೌಡ ಪಾಟೀಲ್, ಜನತಾ ಪಕ್ಷದ ಮುಸ್ತಫ್‌ಬೇಗ್ ಸರ್ಕಾರ ಕೈಗೊಂಡಿರುವ ಪರಿಹಾರ ಕ್ರಮಗಳ ಬಗ್ಗೆ ತಮ್ಮ ಅಸಮಾಧಾನ ವ್ಯಕ್ತಪಡಿಸಿದರಲ್ಲದೆ ತಮ್ಮ ತಮ್ಮ ಪರ್ಯಾಯ ಸಲಹೆಗಳನ್ನು ನೀಡಿದರು.

ಸಿಪಿಐ(ಎಂ) ಆಗ್ರಹ : ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪರವಾಗಿ ಶಾಸಕರಾದ ಕಾಂ.ಜಿ.ವಿ.ಶ್ರೀರಾಮರೆಡ್ಡಿ ಮತ್ತು ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ನಿತ್ಯಾನಂದಸ್ವಾಮಿ ಮತ್ತು ಕಾಂ.ಜಿ.ಸಿ.ಬಯ್ಯಾರೆಡ್ಡಿ ಭಾಗವಹಿಸಿದ್ದರು. ಕಾಂ.ಶ್ರೀರಾಮರೆಡ್ಡಿ ಹಾಗೂ ಕಾಂ.ಬಯ್ಯಾರೆಡ್ಡಿ ಅವರು ಸಭೆಯಲ್ಲಿ ಮಾತನಾಡಿ ಪಕ್ಷದ ಸಲಹೆಗಳನ್ನು ಸರ್ಕಾರದ ಮುಂದೆ ಇಟ್ಟರು.

ರಾಜ್ಯ ಸರ್ಕಾರವು ಕೇಂದ್ರದಿಂದ ಅಗತ್ಯ ಹಾಗೂ ತುರ್ತು ನೆರವು ಪಡೆಯಲು ಗಂಭೀರ ಪ್ರಯತ್ನ ಪಡಬೇಕೆಂದೂ ಅದುವರೆಗೆ ರಾಜ್ಯ ಬೊಕ್ಕಸದಿಂದ ಅಗತ್ಯ ಹಣವನ್ನು ಬಿಡುಗಡೆ ಮಾಡಿ ಪರಿಹಾರ ಕಾರ್ಯಗಳನ್ನು ಇನ್ನೂ ಹೆಚ್ಚು ಸಮರೋಪಾದಿಯಲ್ಲಿ ಕೈಗೊಳ್ಳಬೇಕೆಂದು ಸಿಪಿಐ(ಎಂ) ಪರವಾಗಿ ಒತ್ತಾಯಿಸಲಾಯಿತು. ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಸಂತ್ರಸ್ತರಾಗಿರುವ ಜನಗಳಿಗೆ ಪರಿಹಾರ ನೀಡುವುದನ್ನು ಸರಳಗೊಳಿಸಿ ಅದಕ್ಕಾಗಿ ಜನರನ್ನು ಗೋಳಾಡಿಸಬಾರದೆಂದು ಒತ್ತಾಯಿಸಲಾಯಿತು. ಬೆಳೆಹಾನಿ ಅನುಭವಿಸಿದ ರೈತರಿಗೆ ಪರಿಹಾರ ಕೊಡುವುದು ಮಾತ್ರವಲ್ಲ ಅವರ ಬೆಳೆಸಾಲವನ್ನು ಮನ್ನಾ ಮಾಡಬೇಕು. ನೀರಾವರಿ ಪಂಪ್‌ಸೆಟ್‌ಗಳು ಹಾನಿಗೊಳಗಾಗಿದ್ದು ಅದಕ್ಕೂ ಅಗತ್ಯ ಪರಿಹಾರ ನೀಡಬೇಕು. ಉದ್ಯೋಗವಿಲ್ಲದೆ ಕೈಚೆಲ್ಲಿ ಕುಳಿತಿರುವ ಕೃಷಿ ಕೂಲಿಕಾರರಿಗೆ ಕೂಡಲೇ ಉದ್ಯೋಗ ಒದಗಿಸುವುದು ಆಗಬೇಕು ಎಂದು ಆಗ್ರಹಪಡಿಸಲಾಯಿತು.

ಪರಿಹಾರ ಕ್ರಮಗಳನ್ನು ಜಾರಿಗೊಳಿಸುವಲ್ಲಿ ನಡೆಯಬಹುದಾದ ಭ್ರಷ್ಟಾಚಾರ ಮತ್ತು ಹಣದ ದುರುಪಯೋಗದ ಬಗ್ಗೆ ಸಿಪಿಐ(ಎಂ) ತಂಡ ಆತಂಕ ವ್ಯಕ್ತಪಡಿಸಿತಲ್ಲದೇ ಪರಿಹಾರ ಕ್ರಮಗಳ ಉಸ್ತುವಾರಿಗಾಗಿ ತಾಲ್ಲೂಕು ಮಟ್ಟದಲ್ಲಿ ವಿವಿಧ ರಾಜಕೀಯ ಪಕ್ಷಗಳ ಮತ್ತು ಸಾಮೂಹಿಕ ಸಂಘಟನೆಗಳ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿಗಳನ್ನು ರಚಿಸಬೇಕೆಂದು ಒತ್ತಾಯಿಸಿತು.

■ ನಿತ್ಯಾನಂದಸ್ವಾಮಿ

ರಾಮದುರ್ಗ ಸಿಪಿಐ(ಎಂ) ಘಟಕದಿಂದ ರೊಟ್ಟಿ ವಿತರಣೆ

ನೆರೆಹಾವಳಿಯಿಂದ ಅತಿ ಹೆಚ್ಚು ಹಾನಿಗೊಳಗಾದ ಬೆಳಗಾವಿ ಜಿಲ್ಲೆಯ ಒಂದು ಲಕ್ಷಕ್ಕೂ ಹೆಚ್ಚು ಕುಟುಂಬಗಳು ಸಂತ್ರಸ್ತಗೊಂಡಿವೆ. ಜಿಲ್ಲೆಯ ರಾಮದುರ್ಗದ ಸಿಪಿಐ(ಎಂ) ಘಟಕವು ಪಕ್ಷದ ರಾಜ್ಯಸಮಿತಿ ಸದಸ್ಯರಾದ ಕಾಂ.ವಿ.ಪಿ.ಕುಲಕರ್ಣಿ ಅವರ ನೇತೃತ್ವದಲ್ಲಿ ರಾಮದುರ್ಗ ನಗರದಲ್ಲಿ 46 ಸಾವಿರ ಜೋಳದ ರೊಟ್ಟಿಗಳನ್ನು ಮನೆ ಮನೆಗಳಿಂದ ಸಂಗ್ರಹಿಸಿ ಅಥಣಿ ತಾಲ್ಲಕಿನ ಸಂತ್ರಸ್ಥರಿಗೆ ವಿತರಣೆ ಮಾಡಲು ತಾಲ್ಲೂಕು ತಹಶೀಲ್ದಾರರಿಗೆ ನೀಡಿದ್ದು ವರದಿಯಾಗಿದೆ. ರೊಟ್ಟಿಗಳ ಜೊತೆಯಲ್ಲಿ 100 ಕಂಬಳಿಗಳನ್ನು ಒದಗಿಸಲಾಗಿದೆ. ಪಕ್ಷದ ರಾಮದುರ್ಗ ಘಟಕದ ಈ ಕಾರ್ಯ ಅತ್ಯಂತ ಶ್ಲಾಘನೀಯವಾಗಿದ್ದು ಎಲ್ಲರಿಗೂ ಮಾದರಿಯಾಗಿದೆ.

ಓದುಗರ ಗಮನಕ್ಕೆ

ಆತ್ಮೀಯ ಓದುಗರೇ,

ಕಳೆದ ವಾರದ ಸಂಚಿಕೆಯಲ್ಲಿ ತಾಂತ್ರಿಕ ಸಮಸ್ಯೆಯಿಂದಾಗಿ ಸಿದ್ಧಗೊಂಡಿದ್ದ ಮುಖಪುಟ ಪೂರ್ಣವಾಗಿ ಮುದ್ರಣಗೊಳ್ಳದೇ ಅದರ ಹಿಂದಿನ ಸಂಚಿಕೆ ಚಿತ್ರ ಹಾಗೂ ಬರಹ ಕಾಣಿಸಿಕೊಂಡಿದೆ. ಸಂಚಿಕೆ 34 ರ ಬದಲಿಗೆ 33 ಎಂದು ಮತ್ತು ದಿನಾಂಕ ಆಗಸ್ಟ್ 21 ರ ಬದಲು ಆಗಸ್ಟ್ 14 ಎಂದು ತಪ್ಪಾಗಿ ಮುದ್ರಣಗೊಂಡಿದೆ. ಆಗಿರುವ ದೋಷಕ್ಕೆ ವಿಷಾಧಿಸುತ್ತೇವೆ.

- ಸಂ

ನೆರೆಹಾವಳಿ ಪೀಡಿತರಿಗೆ ಅಥಣಿ ವಿಮಾ ಸಂಗಾತಿಗಳಿಂದ ಪರಿಹಾರ ಕಾರ್ಯ

ಕಳೆದ 15 ದಿನಗಳಿಂದ ಧಾರಾಕಾರವಾಗಿ ಸುರಿಯುತ್ತಿರುವ ಮಳೆ ಹಾಗೂ ಕೊಯನಾ ಜಲಾಶಯದಿಂದ ಹಠಾತ್ತನೆ ಬಿಡುಗಡೆಯಾದ ನೀರಿನ ಪರಿಣಾಮದಿಂದ ಕೃಷ್ಣಾನದಿಯ ದಡದಲ್ಲಿ ಇರುವ ಬೆಳಗಾವಿ ಜಿಲ್ಲೆಯ ಅಥಣಿ ಹಾಗೂ ರಾಯಭಾಗ ತಾಲ್ಲೂಕುಗಳ ಸುಮಾರು 52 ಹಳ್ಳಿಗಳನ್ನು ನೀರು ಆವರಿಸಿದ್ದು, ಹಿಂದೆಂದೂ ಕಾಣದ ತೊಂದರೆಯಲ್ಲಿ 4 ಲಕ್ಷಕ್ಕೂ ಹೆಚ್ಚು ಜನ ಸಿಲುಕಿದ್ದಾರೆ. ಕೆಲವೊಂದು ಹಳ್ಳಿಯ ಜನ ಉಟ್ಟ ಬಟ್ಟೆಯಲ್ಲಿಯೇ ಮನೆಯನ್ನು ತ್ಯಜಿಸಿದ್ದು ಒಮ್ಮೆ ಆಕಾಶ ಇನ್ನೊಮ್ಮೆ ನೀರು ನೋಡುತ್ತಾ ಕಾಲ ಕಳೆಯುತ್ತಿದ್ದಾರೆ. ಇದಲ್ಲದೇ ಲಕ್ಷಾಂತರ ಮನೆಗಳು ನೀರು ಪಾಲಾಗಿದ್ದು ಸುಮಾರು 5ರಿಂದ 6 ಸಾವಿರ ದನಕರುಗಳು ಕೊಚ್ಚಿ ಹೋಗಿವೆ. ಬೆಳೆ ಮತ್ತು ಆಸ್ತಿಗೆ ಅಪಾರ ಹಾನಿಯಾಗಿದೆ.

ತೊಂದರೆಗೊಳಗಾದ ಜನರಿಗೆ ಪರ್ಯಾಯ ವಸತಿ ಕಟ್ಟಿಸಲು ರಾಜ್ಯ ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಸಾಕಷ್ಟು ಶ್ರಮ ವಹಿಸುತ್ತಿವೆ. ಅಲ್ಲಲ್ಲಿ ಗಂಜಿಕೇಂದ್ರಗಳನ್ನು ತೆರೆಯಲಾಗಿದೆ. ಶಾಲೆ ಮತ್ತು ಕಾಲೇಜು ಮಕ್ಕಳು ತಮ್ಮ ತಮ್ಮ ಮನೆಗಳಿಂದ ಆಹಾರ ಪೊಟ್ಟಣಗಳನ್ನು ತೆಗೆದುಕೊಂಡು ಕಂದಾಯ ಅಧಿಕಾರಿಗಳ ಮೂಲಕ ಸಂತ್ರಸ್ತರಿಗೆ ಆಹಾರ ಪೂರೈಸುತ್ತಿದ್ದಾರೆ. ಎಲ್ಲಿ ನೋಡಿದಲ್ಲೆಲ್ಲಾ ನೀರಿದ್ದರೂ ಜನರಿಗೆ ಕುಡಿಯುವ ನೀರಿನ ಬರ ಮಹಾಮಾರಿ ರೋಗಗಳ ಭೀತಿ, ನಾಳೆಯ ಚಿಂತೆ. ಅವರೆಲ್ಲ ಪರಿಹಾರಕ್ಕಾಗಿ ಚಾತಕ ಪಕ್ಷಿಗಳಂತೆ ನಿರೀಕ್ಷಿಸುತ್ತಿದ್ದಾರೆ.

ಇಂತಹ ಒಂದು ಪರಿಸ್ಥಿತಿಯಲ್ಲಿ ಯಾವತ್ತೂ ಸಾಮಾಜಿಕ ಪ್ರಜ್ಞೆ ಹೊಂದಿದ ಅಖಿಲ ಭಾರತ ವಿಮಾ ನೌಕರ ಸಂಘದ ಅಥಣಿ ಶಾಖಾ ಘಟಕದ ವಿಮಾ ಸಂಗಾತಿಗಳು ಕಾರ್ಯೋನ್ಮುಖರಾಗಿ ದಿ.2.08.05ರಂದು ಅಥಣಿ ತಾಲ್ಲೂಕಿನ ಕತ್ರಾಳ ಬಣಜವಾಡ, ಐನಾಪುರ ಹಾಗೂ ಉಗಾರಬದ್ರುಕ ಹಳ್ಳಿಗಳಿಗೆ ಮಳೆ ನೀರು ಕೆಸರನ್ನೂ ಲೆಕ್ಕಿಸದೇ ಆ ಸ್ಥಳಕ್ಕೆ ಖುದ್ದಾಗಿ ಹೋಗಿ 500ಕ್ಕೂ ಹೆಚ್ಚು ಜನರಿಗೆ ಆಹಾರ ಸಾಮಗ್ರಿಗಳನ್ನು ಒದಗಿಸಿದ್ದಾರೆ. ಈ ಪರಿಹಾರ ಕಾರ್ಯದಲ್ಲಿ ಇಬ್ಬರು ಮಹಿಳಾ ಸಂಗಾತಿಗಳನ್ನೊಳಗೊಂಡು 20 ಸಂಗಾತಿಗಳು ಬಾಡಿಗೆ ವಾಹನದೊಂದಿಗೆ ಭಾಗವಹಿಸಿದ್ದಾರೆ. ಈ ಸಂದರ್ಭದಲ್ಲಿ ಕಂದಾಯ ಅಧಿಕಾರಿಗಳು ನಮ್ಮ ಸಂಗಾತಿಗಳ ಜೊತೆಗಿದ್ದು ನೈತಿಕ ಬೆಂಬಲ ನೀಡಿದರು. ನಮ್ಮ ಸಂಗಾತಿಗಳ ಮಾನವೀಯತೆ, ಅಳಿಲು ಸೇವೆಯಾಗಿದ್ದರೂ ಕೂಡ ಸ್ಥಳೀಯರ ಹಾಗೂ ಅಧಿಕಾರಿಗಳ ಅಪಾರ ಮೆಚ್ಚುಗೆಗೆ ಪಾತ್ರವಾಗಿದೆ.



ಅಕ್ಷರ ದಾಸೋಹ ನೌಕರರ ಗದಗ್ ಜಿಲ್ಲಾ ಸಮಾವೇಶ

ಸ್ವತಂತ್ರ ಬ್ಯಾಂಕ್ ಖಾತೆ ಮುಖಾಂತರ ವೇತನ ನೀಡಲು ಒತ್ತಾಯ

ರಾಜ್ಯದ ಅಕ್ಷರದಾಸೋಹಯೋಜನೆಯಡಿಯಲ್ಲಿಅಡುಗೆದಾರರಾಗಿ ಕಾರ್ಯನಿರ್ವಹಿಸುತ್ತಿರುವವರ ವೇತನ ಪ್ರತಿ ತಿಂಗಳು ಸಮಯಾನುಸಾರ ಅವರ ಸ್ವತಂತ್ರ ಬ್ಯಾಂಕ್ ಖಾತೆಯ ಮೂಲಕವೇ ಬಟವಡೆ ಆಗಬೇಕೆಂದು ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ರಾಜ್ಯಾಧ್ಯಕ್ಷೆ ಎಸ್.ವರಲಕ್ಷ್ಮಿ ಸರ್ಕಾರವನ್ನು ತೀವ್ರವಾಗಿ ಒತ್ತಾಯಿಸಿದರು.



ಅವರು ನಗರದ ನಗರಸಭಾ ಭವನದಲ್ಲಿ ನಡೆದ ಜಿಲ್ಲಾ ಅಕ್ಷರ ದಾಸೋಹ ನೌಕರರ ಸಂಘ(ಸಿಐಟಿಯು)ದ ಪ್ರಥಮ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ,ಇಲ್ಲಿಯವರೆಗೂ ಅಡುಗೆಯವರ ವೇತನ ಎಸ್.ಡಿ.ಎಂ.ಸಿ.ಅಧ್ಯಕ್ಷಹಾಗೂ ಮುಖ್ಯ ಅಡುಗೆದಾರರ ಜಂಟಿ ಖಾತೆಯಮೂಲಕವೇಬಟವಡೆಯಾಗುತ್ತಿದ್ದುಇದು ನೌಕರರ ಶೋಷಣೆ ಕಿರಿಕಿರಿಗೆ ದಾರಿಯಾಗುತ್ತಿದ್ದು ಇದನ್ನು ಸಂಘಟನೆ ವಿರೋಧಿಸುತ್ತದೆ ಎಂದರು. ಯೋಜನೆಯನ್ನುಸ್ವಯಂಸೇವಾಸಂಸ್ಥೆಗಳಿಗೆ,ಖಾಸಗಿ ಏಜೆಂಟರಿಗೆವಹಿಸಿಕೊಡುವಸರ್ಕಾರದನೀತಿಯನ್ನು ಸಹಅವರುವಿರೋಧಿಸಿಇಂಥಜನವಿರೋಧಿಕ್ರಮಕ್ಕೆ ಸರ್ಕಾರ ಮುಂದಾಗಬಾರದೆಂದು, ಬಾಕಿ ಇರುವ ವೇತನಕೂಡಲೇಬಿಡುಗಡೆಗೊಳಿಸಲುಆಗ್ರಹಿಸಿದರು.

ಮುಖ್ಯಅತಿಥಿಯಾಗಿಪಾಲ್ಗೊಂಡಿದ್ದಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ನಿತ್ಯಾನಂದಸ್ವಾಮಿಮಾತನಾಡುತ್ತಾಅಕ್ಷರದಾಸೋಹ ನೌಕರರಿಗೆ ದಿನಕ್ಕೆ 10-15 ರೂ.ಗಳಂತೆ ವೇತನ ನೀಡುತ್ತಿರುವುದು ಅವರ ಮೇಲೆ ನಡೆಯುತ್ತಿರುವ ಶೋಷಣೆಯಾಗಿದ್ದುಇದುಖಂಡನಾರ್ಹ.ಸರ್ಕಾರ ತಾನೇ ನಿಗದಿಪಡಿಸಿದ ದಿನದ ಕನಿಷ್ಠ ಕೂಲಿ 62 ರೂ.ಯಾದರೂ ಇವರಿಗೆ ಅನ್ವಯಗೊಳಿಸದೇ ಇರುವುದುಯಾವನ್ಯಾಯ?ಈಬಗ್ಗೆಸರ್ಕಾರಸೂಕ್ತ ರೀತಿಯಲ್ಲಿಗಮನಹರಿಸಬೇಕು,ಅನಿವಾರ್ಯವಾಗಿ ಗತ್ಯಂತರವಿಲ್ಲದೇ ಈ ನೌಕರರು ದುಡಿದೇ ದುಡಿಯುತ್ತಾರೆಂದುಭಾವಿಸಿಕೊಳ್ಳಬಾರದೆಂದುಅವರು ಎಚ್ಚರಿಸಿದರು. ನೌಕರರು ನ್ಯಾಯಕ್ಕಾಗಿ ಸಂಘಟಿತ ಹೋರಾಟ ನಡೆಸಬೇಕೆಂದು, ರಾಷ್ಟ್ರದ ಕಾರ್ಮಿಕರ ಬೃಹತ್ ಸಂಘಟನೆಯಾಗಿರುವ ಸಿಐಟಿಯು ನಿಮ್ಮ ಜೊತೆಗಿರುತ್ತದೆಂದು ಸೇರಿದ್ದ ನೌಕರರಿಗೆ ಭರವಸೆ ನೀಡಿದರು.

ಸಮಾವೇಶದಲ್ಲಿಭಾಗವಹಿಸಿದ್ದಜಿಲ್ಲಾಪ್ರಾ.ಶಾ. ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಎಸ್.ಹಿರೇಮಠ, ಉಪಾಧ್ಯಕ್ಷ ಎಸ್.ಎನ್.ಬಳ್ಳಾರಿ, ರಾಜ್ಯ ಸರಕಾರಿ ನೌಕರರ ಒಕ್ಕೂಟದ ಜಿಲ್ಲಾಧ್ಯಕ್ಷ ಎಸ್.ಬಿ.ಬೊಮ್ಮಸಾಗರ, ಸಹ ಕಾರ್ಯದರ್ಶಿ ಜಿ.ಸಿ.ಯಲಬುರ್ಗಿಮಠ ಅತಿಥಿ ಸ್ಥಾನದಿಂದ ಮಾತನಾಡಿದರು.

ವೇದಿಕೆಮೇಲೆಎಲ್ಲಾತಾಲೂಕಿನಅಕ್ಷರದಾಸೋಹ ನೌಕರರ ಸಂಘದ ಅಧ್ಯಕ್ಷೆ, ಕಾರ್ಯದರ್ಶಿಗಳಾದ ಪವಿತ್ರಮ್ಮಪಾಟೀಲ,ಯಶೋಧಾಬೆಟಗೇರಿ(ಗದಗ), ಕುಸುಮಾ ಜೋಗಣ್ಣವರ, ಶೇಖವ್ವ ಪಾಟೀಲ (ನರಗುಂದ), ಮಲ್ಲವ್ವ ಕೆರೂರು, ಯಲ್ಲಮ್ಮ ದುರಗಣ್ಣವರ(ಶಿರಹಟ್ಟಿ), ರೇಖಾ ಮಾನೆ, ರತ್ನಾ ನೆಲ್ಲೂರ(ರೋಣ)ಇವರೆಲ್ಲಾಉಪಸ್ಥಿತರಿದ್ದುನೌಕರ ಸಮಸ್ಯೆ ಸಂಘಟನೆ ಕುರಿತು ಮಾತನಾಡಿದರು. ಅಧ್ಯಕ್ಷತೆ ವಹಿಸಿ ಅಬ್ದುಲ್ ರಜಾಕ್ ಮುಲ್ಲಾ ಮಾತನಾಡಿದರು.

ಸೆಪ್ಟೆಂಬರ್ 29 ರಂದು ನಡೆಯಲಿರುವ ಅಖಿಲ ಭಾರತ ಕಾರ್ಮಿಕರ ಮುಷ್ಕರವನ್ನು ಬೆಂಬಲಿಸಲು ಸಮಾವೇಶದಲ್ಲಿ ನಿರ್ಧರಿಸಲಾಯಿತು. ಅಕ್ಷರ ದಾಸೋಹಯೋಜನೆಯನ್ನುಖಾಸಗಿ ಏಜೆಂಟರಿಗೆ, ಸ್ವಯಂಸೇವಾ ಸಂಸ್ಥೆಗಳಿಗೆ ವಹಿಸುವುದನ್ನು ವಿರೋಧಿಸಿ,ನೌಕರರಬಾಕಿಇರುವ ವೇತನ ಬಿಡುಗಡೆಗೆ ಆಗ್ರಹಿಸಿ ನಿರ್ಣಯತೆಗೆದುಕೊಳ್ಳಲಾಯಿತು. ಅನೇಕ ನೌಕರರು ಸಮಾವೇಶದಲ್ಲಿ ಮಾತನಾಡಿದರು.

ಸಮಾವೇಶವು ಜಿಲ್ಲಾ ಅಕ್ಷರ ದಾಸೋಹನೌಕರರಸಂಘದನೂತನ ಸಮಿತಿಯನ್ನು ಒಮ್ಮತ್ರದಿಂದ ಆಯ್ಕೆಗೊಳಿಸಿತು. ಅಧ್ಯಕ್ಷರಾಗಿ ಅಬ್ದುಲ್ ರಜಾಕ್ ಮುಲ್ಲಾ, ಉಪಾಧ್ಯಕ್ಷರಾಗಿ ಯಶೋಧಾ ಬೆಟಗೇರಿ (ಗದಗ), ರೇಖಾ ಮಾನೆ(ರೋಣ),ಕುಸುಮಾ ಜೋಗಣ್ಣವರ (ನರಗುಂದ), ಮಲ್ಲಮ್ಮ ಕೆರೂರು (ಶಿರಹಟ್ಟಿ) ಕಾರ್ಯದರ್ಶಿಯಾಗಿ ಪವಿತ್ರಮ್ಮಪಾಟೀಲ (ಗದಗ) ಸಹಕಾರ್ಯದರ್ಶಿಗಳಾಗಿರತ್ನಾನೆಲ್ಲೂರ(ರೋಣ), ಪಾರಮ್ಮ ದಾನರಡ್ಡಿ (ನರಗುಂದ), ಯಲ್ಲಮ್ಮ ದುರಗಣ್ಣನವರ(ಶಿರಹಟ್ಟಿ), ಶರಣಬಸವ ಮರದ (ರೋಣ),ನಿರ್ಮಲಾದೊಡ್ಡಮನಿ(ಗದಗ)ಇವರೆಲ್ಲ ಆಯ್ಕೆಗೊಂಡರು.

ಸ್ವಾಗತಹಾಗೂನಿರೂಪಣೆಯನ್ನುಶರಣಬಸವ ಮರದ,ವಂದನಾರ್ಪಣೆಯನ್ನುಎಂ.ಎಸ್.ಹಡಪದ ಗೈದರು.ಆರಂಭದಲ್ಲಿರವೀಂದ್ರಹೊನವಾಡಹಾಗೂ ಸಂಗಡಿಗರುಹೋರಾಟದಹಾಡುಗಳನ್ನುಹಾಡಿದರು. ಏಳನೂರಕ್ಕೂಹೆಚ್ಚುನೌಕರರುಸಮಾವೇಶದಲ್ಲಿದ್ದರು.

- ಅಬ್ದುಲ್ ರಜಾಕ್ ಇ. ಮುಲ್ಲಾ

ಆಟೋ ಚಾಲಕರ ಯಶಸ್ವಿ ಸರ್ವಸದಸ್ಯ ಸಭೆ

ಆಗಸ್ಟ್ 14 ರಂದು ಬೆಂಗಳೂರಿನ ಆಟೋರಿಕ್ಷಾ ಚಾಲಕರ ಸಂಘದ 30ನೇ ವಾರ್ಷಿಕ ಸರ್ವಸದಸ್ಯರ ಸಭೆ ರಾಜಾಜಿನಗರದ 6ನೇ ಬ್ಲಾಕ್ ಸಮುದಾಯ ಭವನದಲ್ಲಿ ಯಶಸ್ವಿಯಾಗಿ ನಡೆಯಿತು.

ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಸಿ.ಐ.ಟಿ.ಯು. ನ ಕಾಂ. ಕೆ.ಪ್ರಕಾಶ್, ಸಾರಿಗೆ ಆಯುಕ್ತರಾದ ಓಂಪ್ರಕಾಶ್ ಮತ್ತು ಸಂಚಾರಿ ಆಯುಕ್ತರಾದ ಕೆ.ವಿ.ಆರ್. ಟ್ಯಾಗೋರ್ ಇವರುಗಳು ಆಗಮಿಸಿದ್ದರು.

ಸಾರಿಗೆ ಆಯುಕ್ತರು 'ಡಿ.ಎಲ್. ಡಿಸ್‌ಪ್ಲೇ ಫಲಕ' ಬಿಡುಗಡೆಗೊಳಿಸಿದರು. ಸಂಚಾರಿ ಆಯುಕ್ತರಾದ ಕೆ.ವಿ.ಆರ್. ಟ್ಯಾಗೋರ್ ಚಾಲಕರಿಗೆ ಕಿವಿ ಮಾತು ಹೇಳಿದರು.

ಸಂಘದ ತೀರ್ಮಾನಗಳು :

1) ಆಟೋರಿಕ್ಷಾ ಚಾಲಕರಿಗೆ ಇ.ಎಸ್.ಐ, ಸೌಲಭ್ಯ, ಪಿಂಚಣಿ ಸೌಲಭ್ಯ, ಆಟೋಚಾಲಕರ ಕಲ್ಯಾಣ ಮಂಡಳಿ ರಚನೆಗೆ ಒತ್ತಾಯಿಸಲು ನಿರ್ಣಯ ಕೈಗೊಳ್ಳಲಾಯಿತು.

2) ಮೆಟ್ರೋ ಟ್ರೈನ್‌ಗೆ ಸ್ವಾಗತಿಸಲು ಹಾಗೂ ಮೆಟ್ರೋ ಟ್ರೈನ್ ಓಡಾಡುವ ಸ್ಥಳಗಳಲ್ಲಿ ಆಟೋರಿಕ್ಷಾ ಮತ್ತು ಸಾರ್ವಜನಿಕ ಸೇವೆಯಲ್ಲಿರುವ ಸಾರಿಗೆ ವಾಹನಗಳು ಪ್ರವೇಶಿಸಲು ಇರುವ ನಿರ್ಬಂಧವನ್ನು ತೀವ್ರವಾಗಿ ವಿರೋಧಿಸಲು ನಿರ್ಣಯ ಕೈಗೊಳ್ಳಲಾಯಿತು.

ಆಯ್ಕೆಯಾದ ಪದಾಧಿಕಾರಿಗಳು

ಅಧ್ಯಕ್ಷರು : ಮೀನಾಕ್ಷಿ ಸುಂದರಂ
ಕಾರ್ಯಾಧ್ಯಕ್ಷರು: ಹೆಚ್.ಜಿ.ಶ್ರೀನಿವಾಸಮೂರ್ತಿ
ಉಪಾಧ್ಯಕ್ಷರು: ಎಂ.ಜಗನ್ನಾಥರಾವ್, ಪುಟ್ಟಲಿಂಗಯ್ಯ, ಸದಾಶಿವ, ಟಿ.ಶೇರಿಗಾರ್
ಪ್ರ. ಕಾರ್ಯದರ್ಶಿಗಳು : ಬಿ.ವಿ.ರಾಘವೇಂದ್ರ
ಸಂಘಟನಾ ಕಾರ್ಯದರ್ಶಿಗಳು : ರುದ್ರಮೂರ್ತಿ
ಜಂಟಿ ಕಾರ್ಯದರ್ಶಿಗಳು : ಎನ್.ಶ್ರೀನಿವಾಸ, ವಿ.ಬಾಲರಾಜ್, ಆರ್. ನವೀನ್ ಶೆಣೈ, ಎಂ.ಆರ್. ರಾಮಕೃಷ್ಣ
ಸಹಕಾರ್ಯದರ್ಶಿಗಳು :ಲೋಕೇಶ್ ಮಣಿ, ಎಂ.ವೆಂಕಟೇಗೌಡ, ಸಯ್ಯದ್ ಅತೀಕ್ ಅಹಮ್ಮದ್, ಮಹಮ್ಮದ್ ರಿಯಾಜ್
ಖಜಾಂಚಿ : ಸಿ.ಎನ್.ಶ್ರೀನಿವಾಸ್
ಮತ್ತು ಪ್ರದೇಶವಾರು 48 ಜನ ಕಾರ್ಯಕಾರಿ ಸಮಿತಿ ಸದಸ್ಯರುಗಳನ್ನು ಆಯ್ಕೆ ಮಾಡಲಾಯಿತು.

ಬೀಡಿ ಕಾರ್ಮಿಕರ ಮಕ್ಕಳಿಗೆ ಸ್ಕಾಲರ್‌ಶಿಪ್ ಹಣ ಕಳುಹಿಸುವಂತೆ ಒತ್ತಾಯಿಸಿ ಪ್ರತಿಭಟನೆ

ಬೀಡಿ ಕಾರ್ಮಿಕರ ಶಾಲಾ ಕಾಲೇಜುಗಳಿಗೆ ಹೋಗುವ ಮಕ್ಕಳಿಗೆ ಕಾರ್ಮಿಕರ ಕಲ್ಯಾಣನಿಧಿಯಿಂದ ಬರುತ್ತಿರುವ ಸ್ಕಾಲರ್‌ಶಿಪ್, ಸಹಾಯಧನ ಕಳೆದ ಮೂರು ವರ್ಷಗಳಿಂದ ತೀರಾ ಕಡಿಮೆ ಪ್ರಮಾಣದಲ್ಲಿ ಬರುತ್ತಿದೆ. ಈ ವರ್ಷವಂತೂ ತೀರಾ ಅತ್ಯಲ್ಪ ವಿದ್ಯಾರ್ಥಿಗಳಿಗೆ ಮಾತ್ರ ಬಂದಿದೆ. ಇದನ್ನು ಪ್ರತಿಭಟಿಸಿ ಬೀಡಿ ಕಾರ್ಮಿಕರು ತಾ. 02.08.2005ರಂದು ಬೀಡಿ ಕಾರ್ಮಿಕರ ಕಲ್ಯಾಣ ಇಲಾಖೆಗೆ ಸೇರಿದ ಉಡುಪಿ ಕಿನ್ನಿಮೂಲ್ಕಿಯಲ್ಲಿರುವ ಬೀಡಿ ಕಾರ್ಮಿಕರ ಆಸ್ಪತ್ರೆಯ ಮುಂದೆ ಪ್ರತಿಭಟನೆ ನಡೆಸಿ ವೈದ್ಯಾಧಿಕಾರಿಯವರಿಗೆ ಮನವಿ ಸಲ್ಲಿಸಿದರು.

ಉಡುಪಿ ಬೀಡಿ ಎಂಡ್ ಟೊಬೆಕೊ ಲೇಬರ್ ಯೂನಿಯನ್ (ಸಿಐಟಿಯು) ಇದರ ಕೋಶಾಧಿಕಾರಿ ರಮೇಶ ಮೆಂಡನ್‌ರವರು ಮಾತನಾಡಿ ಮೂರು ವರ್ಷಗಳ ಮೊದಲು ಈ ಸ್ಕಾಲರ್‌ಶಿಪ್ ಮತ್ತು ಸಹಾಯಧನ ಉತ್ತಮ ರೀತಿಯಲ್ಲಿ ಬರುತ್ತಿದ್ದವು. ಇದರಿಂದ ಬೀಡಿ ಕಾರ್ಮಿಕರ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಂದುವರಿಸಿ ನಂತರ ಆರೋಗ್ಯಕ್ಕೆ ಮಾರಕವಾದ ಬೀಡಿ ಕೆಲಸವನ್ನು ಅವಲಂಬಿಸದೆ ಇತರ ಉದ್ಯೋಗಕ್ಕೆ ಸೇರಲು ಅನುಕೂಲವಾಗುತ್ತಿತ್ತು. ಆದರೆ ಕೇಂದ್ರ ಸರಕಾರದ ಈಗಿನ ಕ್ರಮದಿಂದ ಹಣ ಬರುವುದು ಕಡಿಮೆಯಾಗಿದೆ. ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಮುಂದುವರಿಯುವುದು ಸಾಧ್ಯವಾಗುತ್ತಿಲ್ಲ. ಬೀಡಿ ಕೆಲಸವೂ ವಾರಕ್ಕೆ ಒಂದೆರಡು ದಿನ ಮಾತ್ರ ಇದೆ. ಸರಕಾರ ಮತ್ತು ಬೀಡಿ ಕಾರ್ಮಿಕರ ಕಲ್ಯಾಣ ಇಲಾಖೆ ಈ ಬಡ ಕಾರ್ಮಿಕರಿಗೆ ಅನ್ಯಾಯ ಮಾಡುತ್ತಿದೆ. ಈ ಸ್ಕಾಲರ್‌ಶಿಪ್‌ಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಜುಲೈ 31 ಎಂದು ನಿಗದಿಪಡಿಸಿರುವುದರಿಂದ ವೃತ್ತಿಪರ ಮತ್ತು ಡಿಪ್ಲೋಮಾ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಲು ಸಾಧ್ಯವಾಗದೆ ಅವರಿಗೆ ಈ ಸವಲತ್ತುಗಳನ್ನು ವಂಚಿಸಲಾಗುತ್ತಿದೆ. ಆದ್ದರಿಂದ ಕೊನೆಯ ದಿನಾಂಕವನ್ನು ಆಗಸ್ಟ್ 31ರ ವರೆಗೆ ಮುಂದುವರಿಸಬೇಕು. ಉಡುಪಿಯ ಬೀಡಿ ಕಾರ್ಮಿಕರ ಆಸ್ಪತ್ರೆಯಲ್ಲಿ ಖಾಯಂ ವೈದ್ಯಾಧಿಕಾರಿ ಇಲ್ಲ. ಈಗ ವಾರಕ್ಕೆ ಒಮ್ಮೆ ವೈದ್ಯಾಧಿಕಾರಿಗಳು ಬರುವುದರಿಂದ ಬೀಡಿ ಕಾರ್ಮಿಕರಿಗೆ ಏನೇನೂ ಪ್ರಯೋಜನ ಸಿಗುತ್ತಿಲ್ಲ. ಇಲ್ಲಿಗೆ ಖಾಯಂ ವೈದ್ಯಾರ್ಥಿಯವರನ್ನು ನೇಮಿಸಬೇಕು ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಸಿಐಟಿಯು, ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವಿಶ್ವನಾಥ ರೈ, ಬೀಡಿ ಎಂಡ್ ಟೊಬೆಕೊ ಲೇಬರ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ಎಸ್.ಸಾಧು ಅಮೀನ್, ಸಿಐಟಿಯು. ಮುಖಂಡ ಎಚ್.ವಿಠಲ ಪ್ರಚಾರಿ, ಕೃಷ್ಣ ಎಸ್., ಅಮೀನ್, ಶ್ರೀಮತಿ ಜಲಜ, ಶ್ರೀಮತಿ ನಿರ್ಮಲ, ಶ್ರೀಮತಿ ಕಲ್ಯಾಣಿ ಮೊದಲಾದವರು ನೇತೃತ್ವ ವಹಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಸಾಧು ಅಮೀನ್ ವೈದ್ಯಾಧಿಕಾರಿಯವರಿಗೆ ಮನವಿ ಸಲ್ಲಿಸಿದರು.

- ರಮೇಶ್ ಮೆಂಡನ್


ಬಸ್ ಪ್ರಯಾಣದ ದರ ಏರಿಕೆಯ ವಿರುದ್ಧ ಸಿಪಿಐ(ಎಂ) ರಸ್ತೆ ತಡೆ-ಪ್ರತಿಭಟನೆ

ಬಸ್ ಪ್ರಯಾಣ ದರ ಏರಿಕೆಯ ವಿರುದ್ಧ ಆಗಸ್ಟ್ 12ರಂದು ಮಧ್ಯಾಹ್ನ 3 ಗಂಟೆಗೆ ಸರಿಯಾಗಿ ಕುಂದಾಪುರ ಶಾಸ್ತ್ರಿ ಸರ್ಕಲಿನ ಬಳಿ ಬಸ್‌ಗಳನ್ನು ತಡೆದು ಪ್ರತಿಭಟಿಸಲಾಯಿತು. ಹಂಚು ಕಾರ್ಮಿಕರು, ಯುವಕರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಬಸ್ ಪ್ರಯಾಣ ದರ ಏರಿಕೆಯನ್ನು ಹಿಂತೆಗೆದುಕೊಂಡು, ಸರಕಾರಿ ಬಸ್‌ಗಳನ್ನು ಕಡಿಮೆ ಪ್ರಯಾಣ ದರ ನಿಗದಿಗೊಳಿಸಿ ಓಡಿಸಿ, ಬಸ್ ಸೌಕರ್ಯ ಹೆಚ್ಚಿಸಬೇಕೆಂದು ಘೋಷಣೆ ಕೂಗಿದರು.

ಸಿಪಿಐ(ಎಂ)ನ ಉಡುಪಿ ಜಿಲ್ಲಾ ಕಾರ್ಯದರ್ಶಿ ಯವರಾದ ಶ್ರಿಯುತ ಕೆ.ಶಂಕರ್‌ರವರು ಪ್ರತಿಭಟನೆ ನಡೆಸುವವರನ್ನು ಉದ್ದೇಶಿಸಿ ಮಾತನಾಡಿ ಜನಸಾಮಾನ್ಯರು ಬಹಳ ಕಷ್ಟದಲ್ಲಿರುವಾಗ ಅವರ ಮೇಲೆ ಹೊರೆ ಹೊರಿಸುವ ಬಸ್ ಮಾಲಕರ ಜನ ವಿರೋಧಿ ನೀತಿಯನ್ನು ಖಂಡಿಸಿದರು.

ಸಂಬಂಧಪಟ್ಟ ಅಧಿಕಾರಿಗಳು ಜನ ಸಾಮಾನ್ಯರ ಹಿತದೃಷ್ಟಿಯಲ್ಲಿ ಪ್ರಯಾಣದರವನ್ನು ಹಿಂತೆಗೆದು ಕೊಂಡು, ಸರಕಾರಿ ಬಸ್ ಸೌಕರ್ಯ ಹೆಚ್ಚಿಸಬೇಕೆಂದು ಹೇಳಿದರು.

ರಸ್ತೆ ತಡೆ ಪ್ರತಿಭಟನಾ ಕಾರ್ಯಕ್ರಮದ ನೇತೃತ್ವವನ್ನು ಶ್ರೀಯುತ ಮಹಾಬಲ ವಡೇರಹೋಬಳಿ ಜಿ.ಬಿ.ಮಹ್ಮದ್ ಸಿ.ನಾರಾಯಣ, ಹೆಚ್.ನರಸಿಂಹ, ಡಿ.ಲಕ್ಷ್ಮಣ, ಮುತ್ತಯ್ಯ ಕನ್ಯಾನ, ಗೋಪಾಲ ಕುಲಾಲ, ಗೋಪಾಲ ಶೆಟ್ಟಿಗಾರ, ರಮಾನಾಥ ಭಂಡಾರಿ, ಅಶ್ವತ ಕುಮಾರ್ ಮತ್ತು ಸುಧಾಕರರವರು ವಹಿಸಿದ್ದರು.



ಶ್ರೀಮತಿ ಇಂದಿರಾಗಾಂಧಿಯವರ ಹತ್ಯೆಯ ನಂತರದ ಭಯಾನಕ ಹಿಂಸಾಚಾರಗಳನ್ನು ನೇರವಾಗಿ ಕಂಡ ಅನುಭವ ನನಗಿದೆ. ಅಷ್ಟು ಮಾತ್ರವಲ್ಲ ಈ ಹಿಂಸಾಚಾರಕ್ಕೆ ನಾನೂ ಒಬ್ಬ ಬಲಿಪಶುವಾಗುವ ಸಾಧ್ಯತೆ ಸಹ ಇತ್ತು. ನವೆಂಬರ್ 1,1984ರಂದು ಅಂದರೆ ಇಂದಿರಾಗಾಂಧಿಯವರ ಹೀನ ಹತ್ಯೆಯ ನಂತರ ದಿನ ನಾನು ತೀನ್ ಮೂರ್ತಿ ಭವನಕ್ಕೆ ಮಡಿದ ನಾಯಕಿಗೆ ಅಂತಿಮ ಗೌರವ ಸಲ್ಲಿಸಲು ಹೋಗಿದ್ದೆ. ಆಗಿನ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ.ಇ.ಎಂ.ಎಸ್. ನಂಬೂದರಿಪಾಡ್ ಮತ್ತು ಪಾಲಿಟ್‌ಬ್ಯೂರೋ ಸದಸ್ಯರಾಗಿದ್ದ ಕಾಂ.ಬಸವ ಪುನ್ನಯ್ಯ ಮತ್ತು ಕಾಂ. ಸಮರ್ ಮುಖರ್ಜಿಯವರು ಸಹ ನನ್ನ ಜೊತೆಗಿದ್ದರು.

ಆದರೆ ನಾವು ಆ ಸ್ಥಳವನ್ನು ತಲುಪುತಿದ್ದಂತೆ ಎಂತಹವರನ್ನು ಸಹ ಸ್ತಂಭಿಭೂತರನ್ನಾಗಿ ಮಾಡುವ ಭಯಾನಕ ದೃಶ್ಯವನ್ನು ಕಂಡೆವು. ಸರಿ ಸುಮಾರು ಐದು ಸಾವಿರಕ್ಕಿಂತಲೂ ಹೆಚ್ಚು ಇದ್ದ ಉದ್ರಿಕ್ತ ಜನರ ಗುಂಪು ಸಿಖ್ ವಿರೋಧಿ ಘೋಷಣೆಯನ್ನು ಚೀರುತ್ತಿರುತ್ತಿದ್ದರು. ಈ ದೃಶ್ಯವನ್ನು ನೋಡಿದರೆ ಆ ಗುಂಪು ತಾನೇತಾನಾಗಿ ಸೇರಿರುವಂತದ್ದಲ್ಲ, ಆ ಘೋಷಣೆಗಳೂ ಸಹ ಆ ತತ್‌ಕ್ಷಣದ ಸಿಟ್ಟಿನಿಂದಾಗಿ ಹೊರಹೊಮ್ಮುತ್ತಿರುವುದಲ್ಲ ಎಂಬುದು ಸ್ಪಷ್ಟವಾಗಿತ್ತು. ತೆರೆ ಮರೆಯಲ್ಲಿರುವ ಕೆಲವು ಗುಂಪುಗಳು ಅತ್ಯಂತ ಯೋಜಿತವಾಗಿ ಒಂದುಗೂಡಿಸಿರುವ ವ್ಯವಸ್ಥಿತ ಜನರ ಹಿಂಡು ಅದು ಎನ್ನುವುದು ಯಾರಿಗೇ ಆದರೂ ಅರ್ಥವಾಗುವಂತಿತ್ತು.

ಇದು ತೀರಾ ಅನಿರೀಕ್ಷಿತವಾದುದಾಗಿರಲಿಲ್ಲ. ಅಕ್ಟೋಬರ್ 31,1984ರಂದು ಇಂದಿರಾ ಗಾಂಧಿಯ ಹತ್ಯೆಯಾದ ದಿನದ ಮಧ್ಯಾಹ್ನದಿಂದಲೇ ಇಂತಹ ವರದಿಗಳು ಹರಿದು ಬರುತ್ತಿದ್ದವು. ಆದರೂ ಸಹ ಪರಿಸ್ಥಿತಿಯು ಇಷ್ಟೊಂದು ವಿಕೃತ ರೂಪ ಪಡೆದುಕೊಳ್ಳುತ್ತದೆಂದು ನಿರೀಕ್ಷಿಸಿರಲಿಲ್ಲ. ತೀನ್‌ಮೂರ್ತಿ ಭವನವನ್ನು ತಲುಪಿದಾಗಲೇ ಪರಿಸ್ಥಿತಿಯ ತೀವ್ರತೆ ಅರಿವಾಗಿದ್ದು.

ತೀನ್ ಮೂರ್ತಿ ಭವನದೊಳಕ್ಕೆ ನಾವು ಹೋಗಬೇಕೆಂದಿರುವಾಗಲೇ ಜನರ ಗುಂಪಿನಿಂದ ಕೆಲವರು ನನ್ನತ್ತ ನುಗ್ಗಿ ಬರಲಾರಂಭಿಸಿದರು. ಅವರಿಂದ ತಪ್ಪಿಸಿಕೊಳ್ಳುವುದು ಸಾಧ್ಯವೇ ಎಲ್ಲ ಎಂದು ನನಗನ್ನಿಸಿತು. ನಾನು ಇಎಂಎಸ್ ಮತ್ತು ಇತರ

1984 ರ ಸಿಖ್ ವಿರೋಧಿ ಹಿಂಸಾಚಾರಗಳ ಭಯಾನಕ ಸ್ವರೂಪ ಅದನ್ನು ಅನುಭವಿಸಿದವರಿಗೇ ಗೊತ್ತು. ಭಾರತ ದೇಶದ ಪೊಲೀಸು, ಸೈನ್ಯ, ರಕ್ಷಣಾ ವ್ಯವಸ್ಥೆಯ ನಿಯಂತ್ರಣ ಕೇಂದ್ರವೇ ಆಗಿರುವ ದೆಹಲಿಯಲ್ಲಿ ಸ್ವತಃ ರಾಷ್ಟ್ರಪತಿಗಳೇ ರಾಷ್ಟ್ರಪತಿ ಭವನದಿಂದ ಹೊರಗೆ ಬರಲು ಹೆದರಿದ್ದರೆಂದರೆ ಇನ್ನು ಜನಸಾಮಾನ್ಯರ ಪಾಡೇನು. ವ್ಯವಸ್ಥಿತ ಯೋಜನೆಯಿಂದ ಪ್ರಚೋದಿತರಾದ ಗಲಭೆಗೋರರ ಗುಂಪಿನ ಧಾಳಿಯಿಂದ ಸ್ವಲ್ಪದರಲ್ಲಿ ಪಾರಾದ ಸಿಪಿಐ(ಎಂ) ಪಕ್ಷದ ಹಿರಿಯ ನೇತಾರ ಕಾಂ. ಹರಿಕಿಷನ್‌ಸಿಂಗ್ ಸುರ್ಜಿತ್ ತಮ್ಮ ನೆನಪಿನ ಸುರಳಿಯನ್ನು ಬಿಚ್ಚಿಟ್ಟಿದ್ದಾರೆ.

ಸಿಖ್ ವಿರೋಧಿ ಗಲಭೆ


'ಆ ಭೀಕರ ಕ್ರೌರ್ಯದ ನೆನಪು'

ಹರಿಕಿಶನ್ ಸಿಂಗ್ ಸುರ್ಜಿತ್



ಸಂಗಾತಿಗಳಿಗೆ ನನ್ನನ್ನು ಬಿಟ್ಟು ತೆರಳಲು ಸೂಚಿಸಿದೆ. ಏಕೆಂದರೆ ನನ್ನ ಜೊತೆಗೆ ಅವರೂ ಸಹ ಧಾಳಿಗೆ ಗುರಿಯಾಗುವ ಅಪಾಯವಿತ್ತು. ಇದೇ ಸಮಯಕ್ಕೆ ಸರಿಯಾಗಿ ಸಿಐಡಿ ಅಧಿಕಾರಿಯೊಬ್ಬರು ನನ್ನ ಹತ್ತಿರ ಓಡೋಡಿ ಬಂದು, ನಾನು ಹೇಗಾದರೂ ಮಾಡಿ ಸ್ವಲ್ಪ ದೂರದಲ್ಲಿ ನಿಲ್ಲಿಸಲಾಗಿದ್ದ ಅವರ ಪೊಲೀಸ್ ಜೀಪ್‌ನಲ್ಲಿ ಹೋಗಿ ಕೂರಬೇಕೆಂದು, ಅಲ್ಲಿಂದ ನನ್ನನ್ನು ಅವರು ಹೇಗಾದರೂ ರಕ್ಷಿಸಿ ದೂರ





ಕೊಂಡೊಯ್ಯುವುದಾಗಿ ಸೂಚಿಸಿದರು. ನಾನು ಇಎಂಎಸ್ ಮತ್ತು ಇತರರನ್ನು ಮತ್ತೊಂದು ದಾರಿಯಿಂದ ತಪ್ಪಿಸಿಕೊಳ್ಳುವಂತೆ ಒತ್ತಾಯಿಸಿ ಕಳುಹಿಸಿದೆ. ಕೊನೆಗೂ ಆ ಸಿಐಡಿ ಅಧಿಕಾರಿಯ ಧೈರ್ಯ ಮತ್ತು ಸಾಹಸದಿಂದಾಗಿ ನಾನು ಆ ಉದ್ರಿಕ್ತ ಗುಂಪಿನ ಧಾಳಿಯಿಂದ ಪಾರಾದೆ.

ತೀನ್‌ಮೂರ್ತಿ ಭವನಕ್ಕೆ ಮನೆ ಹತ್ತಿರವೇ ಇದ್ದರೂ ನಾನು ನನ್ನ ಮನೆಗೆ ಹೋಗುವ ಪ್ರಶ್ನೆಯೇ ಇರಲಿಲ್ಲ. ನಾನು ನಂ.14, ಅಶೋಕ ರಸ್ತೆಯಲ್ಲಿದ್ದ ನಮ್ಮ ಪಕ್ಷದ ಕಛೇರಿಗೆ ತೆರಳಿದೆ. ನಂತರ ಮೂರು ದಿನಗಳೂ ಸಹ ಕಛೇರಿಯಿಂದ ಹೊರ ಬರುವುದು ಸಾಧ್ಯವಾಗದಂತಹ ಪರಿಸ್ಥಿತಿಯನ್ನು ಎದುರಿಸಬೇಕಾಯಿತು.

ಪಕ್ಷದ ಕಛೇರಿಯನ್ನು ತಲುಪಿದ ಕೂಡಲೇ ನಾನು ಮಾಡಿದ ಕೆಲಸವೆಂದರೆ ಅಂದು ರಾಷ್ಟ್ರಪತಿಗಳಾಗಿದ್ದ ದಿ. ಗ್ಯಾನಿ ಜೇಲ್‌ಸಿಂಗ್‌ರಿಗೆ ಫೋನ್ ಮಾಡಿದ್ದು. ಅತ್ಯಂತ ದುಃಖದ ವಿಷಯವೆಂದರೆ ಸ್ವತಃ ರಾಷ್ಟ್ರದ ರಾಷ್ಟ್ರಪತಿಯವರು ಈ ವಿಚಾರದಲ್ಲಿ ಸಂಪೂರ್ಣ ಅಸಹಾಯಕತೆಯನ್ನು ತೋಡಿಕೊಂಡದ್ದು. ಸ್ವತಃ ರಾಷ್ಟ್ರಪತಿಗಳಿಗೆ ರಾಷ್ಟ್ರಪತಿ ಭವನದಿಂದ ಹೊರಗೆ ಬರಲು ಧೈರ್ಯ ಸಾಲುತ್ತಿಲ್ಲವೆಂದು ಅವರೇ ನನಗೆ ತಿಳಿಸಿದರು.

ನಾನು ಕಲ್ಕತ್ತಾದಲ್ಲಿ ಕಾಂ.ಜ್ಯೋತಿಬಸುರವರನ್ನು ಸಂಪರ್ಕಿಸಲು ಪ್ರಯತ್ನಿಸಿದೆ. ಆದರೆ ಅವರು ಆಗ ಮದ್ರಾಸ್‌ನಿಂದ ದೆಹಲಿಗೆ ರಾಜೀವ್ ಗಾಂಧಿಯವರನ್ನು ಭೇಟಿಯಾಗಲು ಹೊರಟಿದ್ದಾಗಿ ಸುದ್ದಿ ತಿಳಿಯಿತು. ಆದರೆ ಪಶ್ಚಿಮ ಬಂಗಾಳದಲ್ಲಿ ಉಸ್ತುವಾರಿ ಮುಖ್ಯಮಂತ್ರಿಯಾಗಿದ್ದ ಕಾಂ.ಬಿನೋಯ್ ಕೃಷ್ಣ ಚೌಧರಿಯವರು ಆದಾಗಲೇ ಗಲಭೆ ಸೃಷ್ಟಿಸುವ ದುಷ್ಕರ್ಮಿಗಳ ವಿರುದ್ಧ 'ಕಂಡಲ್ಲಿ ಗುಂಡು' ಹಾರಿಸಲು ಆಜ್ಞೆ ನೀಡಿದ್ದರು. ಸಮಸ್ಯೆ ಸೃಷ್ಟಿಸುವ ಗಲಭೆಕೋರರ ವಿರುದ್ಧ ರಾಜ್ಯವ್ಯಾಪಿಯಾಗಿ ಕಠಿಣಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಯ ಮತ್ತು ಆಡಳಿತದ ಎಲ್ಲಾ ಅಧಿಕಾರಿಗಳಿಗೆ ಕಟ್ಟಪ್ಪಣೆ ಮಾಡಲಾಗಿತ್ತು, ಆ ಕ್ರಮ ತುಂಬಾ ಅಗತ್ಯವಾಗಿತ್ತು, ಏಕೆಂದರೆ ಬಂಗಾಳದ ಬೆಂಕಿಯ ಚೆಂಡು ಎನ್ನಲಾದ ಮಹಿಳೆಯೂ ಸೇರಿದಂತೆ ಹಲವು ರಾಜಕೀಯ ಮುಖಂಡರು ತಮ್ಮ ಅನುಯಾಯಿಗಳಿಗೆ ಶಾಂತಿ- ಸುವ್ಯವಸ್ಥೆ ಕಾಪಾಡಬೇಕೆಂದು ಹೇಳಲಿಲ್ಲ, ಅದೇನೇ ಇದ್ದರೂ ಇಡೀ ಪಶ್ಚಿಮ ಬಂಗಾಳದಲ್ಲಿ ಸಿಖ್‌ರನ್ನು ರಕ್ಷಿಸಿದ ಕೀರ್ತಿ ಸಿಪಿಐ(ಎಂ) ನೇತೃತ್ವದ ಎಡರಂಗಕ್ಕೆ ಸಲ್ಲುತ್ತದೆ.

ನಾನು ಅದೇ ರೀತಿ ಪಕ್ಷದ ಎಲ್ಲ ರಾಜ್ಯ ಘಟಕಗಳನ್ನು ಸಂಪರ್ಕಿಸಿ ಪರಿಸ್ಥಿತಿಯ ಬಗೆಗೆ ಎಚ್ಚರದಿಂದಿರಬೇಕೆಂದೂ, ಸಿಖ್ ಜನಾಂಗದ ರಕ್ಷಣೆಗೆ ಶ್ರಮಿಸಬೇಕೆಂದು ಸೂಚಿಸಿದೆ.

ಏನಿದೆಲ್ಲವೂ ಆಕಸ್ಮಿಕವಾಗಿ ಆದದ್ದೇ? ಖಂಡಿತ ಅಲ್ಲ. ಹೀಗೆ ಸಿಖ್ ಸಮುದಾಯವನ್ನು ರಕ್ಷಿಸಲು ಸಾಧ್ಯವಾದದ್ದು ನಮ್ಮ ಪಕ್ಷದ ಬದ್ಧ ಜಾತ್ಯಾತೀತ ನೀತಿಯಿಂದಾಗಿ. 1963- 1967 ರಲ್ಲಿ ನಮ್ಮ ಬಂಗಾಳದ ಸಂಗಾತಿಗಳು ಪ್ರತಿದಿನ ರಾತ್ರಿ ಸ್ಥಳೀಯ ಮುಸ್ಲಿಮರನ್ನು ರಕ್ಷಿಸಲು ಹೇಗೆ ಶ್ರಮಿಸಿದರು ಮತ್ತು ಈ ಕೆಲಸದಲ್ಲಿ ಹೇಗೆ ಪಕ್ಷದವರಲ್ಲವರನ್ನು ಹೇಗೆ ತೊಡಗಿಸಿಕೊಂಡರು ಎಂಬುದು ನನಗೆ ಈಗಲೂ ಚೆನ್ನಾಗಿ ನೆನಪಿದೆ. ಈ ಧೀಮಂತ ಪರಂಪರೆಯೇ ಪಶ್ಚಿಮ ಬಂಗಾಳದಲ್ಲಿ ಪಕ್ಷದ ಬೆಳವಣಿಗೆ ಮತ್ತು ಕ್ರೋಢೀಕರಣಕ್ಕೆ ಕಾರಣವಾದ ಪ್ರಮುಖ ಅಂಶವಾಗಿದೆ.

ವಿದ್ಯುತ್ ಖಾಸಗೀಕರಣ ಕೊಟ್ಟಿದ್ದೇನು? ದಿಲ್ಲಿ, ಮುಂಬೈಗಳ ಅನುಭವ

ರಾಷ್ಟ್ರದ ರಾಜಧಾನಿಯಲ್ಲಿ ಹಾಗೂ ಇತ್ತೀಚೆಗೆ ಭಾರೀ ಪ್ರವಾಹಗಳಿಂದ ತತ್ತರಿಸಿದ ಮುಂಬೈಯಲ್ಲಿನ ಅನುಭಗಳು ವಿದ್ಯುತ್ ವಲಯದ ಖಾಸಗೀಕರಣ ಎಷ್ಟು ಸರಿ ಎಂಬ ಪ್ರಶ್ನೆಯನ್ನು ಮತ್ತೆ ಎತ್ತಿವೆ. ದಿಲ್ಲಿ ನಿವಾಸಿಗಳ ಕಲ್ಯಾಣಸಂಘಗಳ ಜಂಟಿ ರಂಗ ಹಾಗೂ ಮುಂಬೈಯ ಜನವಿಭಾಗಗಳು ಈಗ ಸಾರ್ವಜನಿಕ ವಲಯದ ವಿದ್ಯುತ್ ಪೂರೈಕೆಯೇ(ರಾಜ್ಯ ವಿದ್ಯುತ್ ಮಂಡಳಿಗಳ ಮೂಲಕ) ಮೇಲು ಎಂಬ ಬಲವಾದ ಅಭಿಪ್ರಾಯಕ್ಕೆ ಬಂದಿದ್ದಾರೆ, ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಏಕೆ ವಿದ್ಯುತ್ ಖಾಸಗೀಕರಣವನ್ನು ಒತ್ತಾಯಿಸಬೇಕು ಎಂದು ಪ್ರಶ್ನಿಸುತ್ತಿದ್ದಾರೆ.

ದಿಲ್ಲಿಯಲ್ಲಿ ಅಂಬಾನಿ 'ರಿಲಯನ್ಸ್ ಎನರ್ಜಿ' ಮತ್ತೆ-ಮತ್ತೆ ದರ ಏರಿಸುತ್ತಲೇ ಇರುವುದನ್ನು ಹಾಗೂ ಮತ್ತೆ-ಮತ್ತೆ ಮಾತುಗಳನ್ನು ಬದಲಿಸುತ್ತಲೇ ಇರುವುದನ್ನು ಕಂಡ ಜನ ರೋಸಿಹೋಗಿದ್ದರೆ, ಅತ್ತ ಮುಂಬೈಯಲ್ಲಿ ಇದೇ 'ರಿಲಯನ್ಸ್ ಎನರ್ಜಿ' ಗೆ ಪ್ರವಾಹದಿಂದಾಗಿ ಅಸ್ತವ್ಯಸ್ತಗೊಂಡ ವಿದ್ಯುತ್ ಪೂರೈಕೆಯನ್ನು ಸರಿಪಡಿಸಲು ಹಲವ ದಿನಗಳೇ ಬೇಕಾಯಿತು. ಆದರೆ ಮಹಾರಾಷ್ಟ್ರ ವಿದ್ಯುತ್ ಮಂಡಳಿಯ ವಿದ್ಯುತ್ ಪೂರೈಕೆಯಿದ್ದಲ್ಲಿ ತ್ವರಿತವಾಗಿ ಅದನ್ನು ಸರಿಪಡಿಸಲಾಯಿತು.

ರಾಜ್ಯ ಸರ್ಕಾರಗಳು ವಿದ್ಯುತ್ ವಲಯದಲ್ಲಿ ಸುಧಾರಣೆಗಳನ್ನು (ಅಂದರೆ ಖಾಸಗೀಕರಣವನ್ನು) ತರಬೇಕು ಎಂಬ ಒತ್ತಡವನ್ನು ಹೇರುವಾಗ ದಿಲ್ಲಿ ಹಾಗೂ ಮುಂಬೈ ನಿವಾಸಿಗಳ ಅನುಭವಗಳ ಆಧಾರದಲ್ಲಿ ವಿದ್ಯುತ್ ನಿರ್ವಹಣೆಯ ಬಗ್ಗೆ ನಿಲುವಿನ ಸಮಗ್ರ ಪರಾಮರ್ಶೆಯಾಗಬೇಕಿದೆ ಎಂದು ತಜ್ಞರು ಹೇಳುತ್ತಿದ್ದಾರೆ.

ವೃತ್ತಿಶಿಕ್ಷಣ: ಸುಪ್ರಿಂ ಕೋರ್ಟ್ ತೀರ್ಪು ವಿರೋಧಿಸಿ ಎಸ್.ಎಫ್.ಐ.ನಿಂದ ಭೂತದಹನ

ವೃತ್ತಿಶಿಕ್ಷಣ ಬಿಕ್ಕಟ್ಟಿಗೆ ಸಂಬಂಧಿಸಿ ಕೇಂದ್ರೀಯ ಶಾಸನ ಜಾರಿಗಾಗಿ ಒತ್ತಾಯಿಸಿ ಜನವಿರೋಧಿ ಸುಪ್ರಿಂಕೋರ್ಟ್ ತೀರ್ಪು ವಿರೋಧಿಸಿ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ)ನಿಂದ ಬಳ್ಳಾರಿ ರಾಯಲ್‌ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಿ ಭೂತದಹನ ಮಾಡಲಾಯಿತು.
ಬೆಂಗಳೂರಿನಲ್ಲಿ ಸಹ ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನಾ ಪ್ರದರ್ಶನ, ಭೂತ ದಹನ ನಡೆದಿದೆ.


ಬಳ್ಳಾರಿ ಪ್ರತಿಭಟನೆಯ ಸಂದರ್ಭದಲ್ಲಿ ಮಾತನಾಡಿದ ಎಸ್.ಎಫ್.ಐ.ನ ರಾಜ್ಯಕಾರ್ಯದರ್ಶಿ ಹೆಚ್.ಆರ್.ನವೀನ್ ಕುಮಾರ್‌ರವರು ಬಡ ಹಾಗು ಪ್ರತಿಭಾನ್ವಿತ ವಿದ್ಯಾರ್ಥಿಗಳು ವೃತ್ತಿಶಿಕ್ಷಣವನ್ನು ಪಡೆಯಲು ಈ ಬಂದಿರುವ ಸುಪ್ರೀಂ ಕೋರ್ಟ್ ತೀರ್ಪಿನಿಂದಾಗಿ ಸಾಧ್ಯವಾಗುವುದಿಲ್ಲ. ಈ ತೀರ್ಪು ಸಂಪೂರ್ಣವಾಗಿ ಖಾಸಗಿ ಆಡಳಿತ ಮಂಡಳಿಗಳ ಪರವಾಗಿದ್ದು ಬಡಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ಹಣ ಸುಲಿಗೆ ಮಾಡಲು ಸುಪ್ರಿಂಕೋರ್ಟ್ ಖಾಸಗೀ ಆಡಳಿತ ಮಂಡಳಿಗಳಿಗೆ ಲೈಸೆನ್ಸ್ ನೀಡಿದಂತಾಗಿದೆ. ಇದು ಸಂಪೂರ್ಣವಾಗಿ ಶಿಕ್ಷಣದ ವ್ಯಾಪಾರೀಕರಣಕ್ಕೆ ಕುಮ್ಮಕ್ಕು ನೀಡುತ್ತದೆ.

ಇದೇ ಸಂದರ್ಭದಲ್ಲಿ ನಡೆಯುವ ಸ್ವಾತಂತ್ರ್ಯದ ದಿನಾಚರಣೆ ಖಾಸಗಿ ಆಡಳಿತ ಮಂಡಳಿಗಳಿಗೆ ಮಾತ್ರ ಸಂಭ್ರಮದಿಂದ ಕೂಡಿದ್ದು ದೇಶದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರಿಗೆ ಸುಪ್ರಿಂ ಕೋರ್ಟ್ ತೀರ್ಪಿನಿಂದಾಗಿ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮವನ್ನು ಕಿತ್ತುಕೊಂಡಂತಾಗಿದೆ ಎಂದರು.

ರಾಜ್ಯದಲ್ಲಿ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವ ಭರವಸೆಯೊಂದಿಗೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾದಳದ ಸಮ್ಮಿಶ್ರ ಸರ್ಕಾರ ನಿಜವಾಗಿಯೂ ಜನ ಸಾಮಾನ್ಯರ ಪರವಾಗಿದ್ದರೆ ವೃತ್ತಿಶಿಕ್ಷಣ ಬಿಕ್ಕಟ್ಟಿನ ಶಾಶ್ವತ ಪರಿಹಾರಕ್ಕಾಗಿ ಕೇಂದ್ರೀಯ ಶಾಸನ ಜಾರಿಗೊಳಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಎಸ್.ಎಫ್.ಐ.ನ ಜಿಲ್ಲಾಧ್ಯಕ್ಷರಾದ ಆಲಂಭಾಷ, ಕಾರ್ಯದರ್ಶಿ ಹುಳ್ಳಿ ಉಮೇಶ್, ಜಿಲ್ಲಾ ಉಪಾಧ್ಯಕ್ಷರುಗಳಾದ ಮಂಜುಳಪ್ಪರಾಂಪುರ.ಎಂ., ಬಿ.ಸುಜಾತ, ಹುಳ್ಳಿ ಪ್ರಕಾಶ್, ಅಂಜನಯ್ಯ, ವೆಂಕಟೇಶಲು, ಹುಲುಗಪ್ಪರಾಮುಡು, ಬಸವರಾಜ್ ಇನ್ನೂ ಮುಂತಾದವರು ಭಾಗವಹಿಸಿದರು.





ಸಾರ್ವಜನಿಕ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರಗಳು ಬಂಡವಾಳ ಹೂಡಬೇಕೆಂಬ ಪರಿಕಲ್ಪನೆಯೇ ಮರೆತುಹೋಗುವಂತೆ ವರ್ತಿಸುತ್ತಿರುವ ಇಂದಿನ ಧೋರಣೆ ಮೂಲಭೂತವಾಗಿ ಬದಲಾಗದಿದ್ದಲ್ಲಿ ದಿನೇ ದಿನೇ ಉಲ್ಬಣಗೊಳ್ಳುತ್ತಿರುವ ನಿರುದ್ಯೋಗ ಪರಿಸ್ಥಿತಿಯನ್ನು ಶಮನಗೊಳಿಸುವುದು ಸಾಧ್ಯವಿಲ್ಲ. ಆರೋಗ್ಯಕರವಾದ ಸಾಮಾಜಿಕ, ಆರ್ಥಿಕ ಪ್ರಗತಿಯನ್ನು ಸಾಧಿಸುವುದೂ ಸಹ ಸಾಧ್ಯವಿಲ್ಲ

ಉದ್ಯೋಗ-ಭೂಮಿ-ಆಹಾರಗಳು ಸಮಾಜ ಮೂಲಭೂತ ಅಗತ್ಯಗಳಾಗಿವೆ. ಈ ಪ್ರಶ್ನೆ ಆಧಾರದಲ್ಲಿ ರಾಷ್ಟ್ರವ್ಯಾಪಿ ಚಳುವಳಿ ನಡೆಸ ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿ ಕರ ನೀಡಿದೆ. ಈ ಆಂದೋಲನಕ್ಕೆ ಪೂರಕವಾಗಿ ಸಂಚಿಕೆಯಲ್ಲಿ 'ಸಾರ್ವಜನಿಕ ಕೈಗಾರಿಕೆಗಳ ಸ್ಥಾಪನೆ', 'ಉದ್ಯೋಗ ಮತ್ತು ಮಹಿಳೆ' ಲೇಖನಗಳನ್ನು ಪ್ರಕಟಿಸಲಾಗಿದೆ.

ಸಾರ್ವಜನಿಕ ಕೈಗಾರಿಕೆಗಳ ಸ್ಥಾಪನೆ ಮತ್ತು ಉದ್ಯೋಗ ಸೃಷ್ಟಿ

■ ಆರ್.ರಾಮಕೃಷ್ಣ

ಕೆಲವು ವರ್ಷಗಳ ಹಿಂದೆ ರಾಜ್ಯದ ಪ್ರಮುಖ ದೂರದರ್ಶನ ವಾಹಿನಿಯಲ್ಲಿ ಒಂದು ಧಾರಾವಾಹಿ. ವಿದ್ಯಾವಂತ ನಿರುದ್ಯೋಗಿಗಳನ್ನು ವಾರವಾರವು ವಿವಿಧ ರೀತಿಯಲ್ಲಿ ತೇಜೋವಧೆ ಮಾಡುವ ಅಪಹಾಸ್ಯ ಮಾಡುವ ಕಂತುಗಳು."ದಂಡ ಪಿಂಡಗಳು" ಎಂಬುದು ಧಾರಾವಾಹಿಯ ಹೆಸರು. ತಮಗೆ ಉದ್ಯೋಗವಿಲ್ಲದೆ ನಿರುದ್ಯೋಗಿಗಳಾಗಿರುವುದಕ್ಕೆ ಸ್ವತಃ ಆ ಯುವಜನರೇ ಹೊಣೆ ಎಂಬಂತಹ ಧೋರಣೆಯ ಎಳೆಯನ್ನು ಇಂತಹ ಧಾರಾವಾಹಿಗಳಲ್ಲಿ ಯಾರೇ ಆದರೂ ಗುರುತಿಸಬಹುದು.

ಸಿನಿಮಾ, ಧಾರಾವಾಹಿಗಳಲ್ಲಿ ಮಾತ್ರವಲ್ಲ ನಮ್ಮ ಸಮಾಜದಲ್ಲಿ ಬಹಳ ಜನ ಇಂತಹ ಅಭಿಪ್ರಾಯ ವ್ಯಕ್ತಪಡಿಸುವುದಿದೆ. "ಸರ್ಕಾರ ಎಷ್ಟು ಜನರಿಗೆ ಉದ್ಯೋಗ ಕೊಡಲು ಸಾಧ್ಯ", "ಎಲ್ಲರಿಗೂ ಉದ್ಯೋಗ ಕೊಡುವುದು ಅಸಾಧ್ಯವಾದ ಮಾತು", "ಅದರಲ್ಲಿಯೂ ಭಾರತದಂತಹ ದೇಶದಲ್ಲಿ ಎಲ್ಲರಿಗೂ ಉದ್ಯೋಗ ಕೊಡುವುದು ಸಾಧ್ಯವೇ ಇಲ್ಲದ ಮಾತು'' ಇಂತಹ ದೃಢವಾದ ಪ್ರತಿಪಾದನೆಗಳಿಗೂ ಕೊರತೆಯಿಲ್ಲ.

ತನ್ನ ಪ್ರಜೆಗಳಿಗೆ ಜೀವನಾಸರೆಯ ಉದ್ಯೋಗವನ್ನು ನೀಡಲಾಗದ ಆಳುವ ಜನರ ಮತ್ತು ವ್ಯವಸ್ಥೆಯ ವೈಫಲ್ಯವನ್ನು ಮರೆ ಮಾಚುವ ದೃಷ್ಟಿಯಿಂದ ಹುಟ್ಟು ಹಾಕಿರುವ ಇಂತಹ ವಾದಗಳನ್ನು ಸ್ವತಃ ನಿರುದ್ಯೋಗಿ ಯುವಜನತೆಯು ಪ್ರಶ್ನಿಸದೇ ಇಂತಹ ವಾದಗಳ ಪ್ರಭಾವದಲ್ಲೇ ಇರುವುದು ಇಲ್ಲಿನ ಮತ್ತೊಂದು ಬಗೆಯ ಸಮಸ್ಯೆ.

ನಮ್ಮ ದೇಶದಲ್ಲಿ ನಮ್ಮ ರಾಜ್ಯದಲ್ಲಿ ದುಡಿಯುವ ಸಾಮರ್ಥ್ಯ-ಉತ್ಸಾಹ-ವಯಸ್ಸು-ಅಗಾಧ ಸಂಖ್ಯೆಯ ಯುವಜನತೆಯ ಶಕ್ತಿ-ಬಳಕೆಯಾಗದೆ ವ್ಯರ್ಥವಾಗಿ ಹೋಗುತ್ತಿದೆ. ಈ ಬೃಹತ್ ಸಂಖ್ಯೆಯ ನಿರುದ್ಯೋಗಿ ಯುವಜನತೆಯನ್ನು ಸೆಳೆದುಕೊಂಡು ಅವರನ್ನು ಉದ್ಯೋಗಿಗಳನ್ನು ಮಾಡುವ ಆ ಮೂಲಕ ಒಟ್ಟು ಸಮಾಜದ ಅಭಿವೃದ್ಧಿಗೆ ಹೊಸ ಚಾಲನೆ ನೀಡಬಲ್ಲ ಚೈತನ್ಯವುಳ್ಳ ಕ್ಷೇತ್ರ ಕೈಗಾರಿಕಾ ಕ್ಷೇತ್ರ. ಆದರೆ ಇಂದು ರಾಜ್ಯದ ಕೈಗಾರಿಕಾ ಕ್ಷೇತ್ರದಲ್ಲಿ ಏನಾಗುತ್ತಿದೆ. ವಿಶಾಲ ಸಾಧ್ಯತೆಗಳಿದ್ದರೂ ಸಹ ನಮ್ಮ ರಾಜ್ಯದ ಮತ್ತು ದೇಶದ ಕೈಗಾರಿಕಾ ರಂಗಗಳು ತೀವ್ರ ಗತಿಯ ಬೆಳವಣಿಗೆಯ ಪ್ರವೃತ್ತಿಯನ್ನೇಕೆ ತೋರುತ್ತಿಲ್ಲ ಎಂಬ ಪ್ರಶ್ನೆಗಳಿಗೆ ನಾವು ಉತ್ತರಗಳನ್ನು ಕಂಡುಕೊಳ್ಳಬೇಕಿದೆ.

ಜಾಗತೀಕರಣದ ಯುಗದಲ್ಲಿ ಉದ್ಯೋಗ ಸೃಷ್ಟಿಸುವ ಮತ್ತು ಕೈಗಾರಿಕೆಗಳನ್ನು ಸ್ಥಾಪಿಸುವ ಹೊಣೆಗಾರಿಕೆ ತಮ್ಮ ಮೇಲೆ ಏನೇನೂ ಇಲ್ಲ ಎಂದು ಭಾವಿಸುತ್ತಿರುವ ರಾಜ್ಯ-ಕೇಂದ್ರ ಸರ್ಕಾರಗಳ ಧೋರಣೆ ನಿರುದ್ಯೋಗದ ಪರಿಸ್ಥಿತಿ ವಿಕೋಪಕ್ಕೆ ತಲುಪಲು ಇರುವ ಒಂದು ಪ್ರಧಾನ ಕಾರಣವಾಗಿದೆ.

ಒಂದು ಹಂತದಲ್ಲಿ ಕರ್ನಾಟಕ ರಾಜ್ಯವು ಕೈಗಾರಿಕೆಗಳ ಪ್ರಶ್ನೆಯಲ್ಲಿ ದೇಶದಲ್ಲಿಯೇ ಮುಂಚೂಣಿಯಲ್ಲಿತ್ತು. ಸ್ವಾತಂತ್ರ್ಯಕ್ಕೂ ಮುಂಚಿನ ಅವಧಿಯಲ್ಲೇ ಅಂದಿನ ಮೈಸೂರು ಸರ್ಕಾರ ಹಲವಾರು ಸಾರ್ವಜನಿಕ ಕೈಗಾರಿಕೆಗಳನ್ನು ಸ್ಥಾಪಿಸಿತ್ತು. ಮೈಸೂರು ಲ್ಯಾಂಪ್ಸ್, ಭದ್ರಾವತಿ ಉಕ್ಕು ಕಾರ್ಖಾನೆ, ಕಾಗದ ಕಾರ್ಖಾನೆ, ಮೈಸೂರು ಸೋಪ್ಸ್ ಮತ್ತು ಡಿಟರ್ಜೆಂಟ್ ಕಾರ್ಖಾನೆ, ಎನ್‌ಜಿಇಎಫ್, ಇತ್ಯಾದಿ ಹಲವು ಕಾರ್ಖಾನೆಗಳನ್ನು ಸರ್ಕಾರ ಸ್ಥಾಪಿಸಿತ್ತು.

ಟಿಪ್ಪು ಸುಲ್ತಾನ ಕಾಲದಲ್ಲಿಯೇ ಜನರು ಮತ್ತು ಪ್ರಭುತ್ವದ ನಡುವೆ ಮಧ್ಯವರ್ತಿಗಳಂತೆ ರಾಜಶಾಹಿ ವ್ಯವಸ್ಥೆಯ ಏಜೆಂಟರಂತೆ ಇದ್ದ ಪಾಳೆಯಗಾರರನ್ನು ಮಟ್ಟ ಹಾಕಿ ಟಿಪ್ಪು ತಂದ ಸುಧಾರಣೆ, ಈ ಹಿನ್ನೆಲೆಯಲ್ಲಿ ಭೂಮಿಯ ಕೇಂದ್ರೀಕರಣ ತಪ್ಪಿ ಜನರ ನಡುವೆ ಭೂಮಿ ಹಂಚಿಕೆಗೆ ಕಾರಣವಾಗಿದ್ದರಿಂದ ಈ ಮೈಸೂರು ಪ್ರಾಂತ್ಯದಲ್ಲಿ ಜನ ಸಮುದಾಯದ ಆದಾಯದ ಸ್ಥಿತಿಯಲ್ಲಿ ಇತರ ಭಾಗಗಳಿಗಿಂತ ಬಹಳ ಭಿನ್ನವಾದ ಸ್ಥಿತಿ ನಿರ್ಮಾಣವಾಗಿತ್ತು.

ಇದರ ಜೊತೆಗೆ ರಾಜ್ಯ ಸರ್ಕಾರವೇ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿ ಆರಂಭಿಸಿದ ಕೈಗಾರಿಕೆಗಳು ಈ ಪ್ರದೇಶದ ಅಭಿವೃದ್ಧಿಯಲ್ಲಿ ಗಣನೀಯ ಕೊಡುಗೆ ನೀಡಿದವು. ಇದರಿಂದಾಗಿ ಮೈಸೂರು ರಾಜ್ಯ ಮಾದರಿ ರಾಜ್ಯ ಎಂಬ ಹೆಸರನ್ನು ಪಡೆಯುವಂತಾಗಿತ್ತು.

ಖಾಸಗೀಕರಣ - ಉದಾರೀಕರಣಗಳೇ ಮಂತ್ರವಾಗಿರುವ ಇಂದಿನ ರಾಜ್ಯ ಸರ್ಕಾರಗಳು ಕರ್ನಾಟಕ ರಾಜ್ಯದ ಇಂತಹ ಪರಂಪರೆಯನ್ನೇ ಬುಡಮೇಲು ಮಾಡಿ ಕುಳಿತಿವೆ. ಸಾರ್ವಜನಿಕ ಉದ್ದಿಮೆಗಳ ಸ್ಥಾಪನೆ - ಕೈಗಾರಿಕಾ ಸ್ಥಾಪನೆಯಲ್ಲಿ ಸರ್ಕಾರದ ಬಂಡವಾಳ ಹೂಡಿಕೆ ಎಂಬ ಪರಿಕಲ್ಪನೆಗಳೇ ಮರೆತು ಹೋಗುವಂತಾಗಿದೆ.


ಕೈಗಾರಿಕೆಗಳ ಸ್ಥಾಪನೆ - ಕೈಗಾರಿಕಾ ಅಭಿವೃದ್ಧಿಯನ್ನು ಪೂರ್ಣವಾಗಿ ಖಾಸಗಿ ಬಂಡವಾಳಶಾಹಿ ಮರ್ಜಿಗೆ ಒಪ್ಪಿಸಿ ಬಿಡಲಾಗಿದೆ. ಸಾರ್ವಜನಿಕರ ತೆರಿಗೆಯಿಂದ ಸಂಗ್ರಹವಾದ ಅಗಾಧ ಪ್ರಮಾಣದ ಹಣವನ್ನು ಖಾಸಗಿ ಬಂಡವಾಳಿಗರ ಅಣತಿಯಂತೆ ವೆಚ್ಚ ಮಾಡುವುದೇ ತಮ್ಮ ಪರಮ ಕರ್ತವ್ಯ - ಇಂತಹ ಖಾಸಗಿ ಧಣಿಗಳ ಅಣಿ ಮುತ್ತುಗಳೇ ವೇದವಾಕ್ಯ ಎಂದೂ ಸರ್ಕಾರಗಳು ಭಾವಿಸಿಬಿಟ್ಟಿವೆ.

ಸಾರ್ವಜನಿಕ ರಂಗದಲ್ಲಿರುವ ಸಾರಿಗೆ - ವಿದ್ಯುತ್ - ಇತ್ಯಾದಿ ಅತ್ಯಂತ ಆಯಕಟ್ಟಿನ ಸಂಸ್ಥೆಗಳನ್ನು ಖಾಸಗೀಕರಿಸಲು ಟೊಂಕ ಕಟ್ಟಿ ನಿಂತಿರುವ ಸರ್ಕಾರ ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಬಂಡವಾಳ ಹೂಡುವುದನ್ನು ಕನಸಿನಲ್ಲಿಯೂ ಯೋಚಿಸಲಾರದ ಸ್ಥಿತಿಗೆ ತಲುಪಿ ಬಿಟ್ಟಿದೆ.

ಐತಿಹಾಸಿಕ ಕಾರಣಗಳಿಗಾಗಿ ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಯಿಂದ ತುಲನಾತ್ಮಕವಾಗಿ ಪ್ರಗತಿ ಸಾಧಿಸಿರುವ ರಾಜ್ಯದ ಕರಾವಳಿ ಮತ್ತು ಹಳೇ ಮೈಸೂರು ಪ್ರಾಂತಗಳಂತೆ ಉತ್ತರ ಕರ್ನಾಟಕದಲ್ಲಿ ಸಹ ಅಭಿವೃದ್ಧಿಗೆ ಚಾಲನೆ ನೀಡಬೇಕಾದ ಮಹತ್ತರ ಹೊಣೆಗಾರಿಕೆ ರಾಜ್ಯ ಸರ್ಕಾರಗಳ ಮೇಲಿತ್ತು. ಕೈಗಾರಿಕೆಗಳ ಸ್ಥಾಪನೆ ಇಂತಹ ಪ್ರಾದೇಶಿಕ ಅಸಮತೋಲನ ನಿವಾರಿಸುವಲ್ಲಿ ಇರುವ ಒಂದು ಪ್ರಮುಖ ಸಾಧನ. ಸರ್ಕಾರವೇ ಕೈಗಾರಿಕೆಗಳಲ್ಲಿ ಬಂಡವಾಳ ತೊಡಗಿಸುವಂತಹ ಪರಿಸ್ಥಿತಿಯಲ್ಲಿ ಇಂತಹ ಪ್ರಾದೇಶಿಕ ಅಸಮಾನತೆ ನಿವಾರಣೆಯ ಅಂಶವನ್ನು ಗಮನದಲ್ಲಿಟ್ಟುಕೊಂಡು ಯೋಜಿಸ ಬಹುದು.

ಆದರೆ ಉತ್ತರ ಕರ್ನಾಟಕ ಪ್ರದೇಶ ಹಿಂದುಳಿದಿದ್ದರೆ ಖಾಸಗಿ ಬಂಡವಾಳದಾರರಿಗೆ ಆಗುವ ದುಃಖವೇನು. ಅವರಿಗೆ ಹೆಚ್ಚು ಲಾಭ ಕಾಣುವ - ಸುಲಭ ಕಾಣುವ ದಾರಿಯೇ ಸಾಕು. ಹೀಗಾಗಿ ಆರಂಭವಾಗುತ್ತಿರುವ ಕೈಗಾರಿಕೆಗಳೂ ಸಹ ಬೆಂಗಳೂರು ಮತ್ತು ಅಂತಹ ಕೆಲವೇ ಸ್ಥಳಗಳಲ್ಲಿ ಕೇಂದ್ರೀಕರಣಗೊಳ್ಳುತ್ತ ಪ್ರಾದೇಶಿಕ ಅಸಮಾನತೆಯ ಹೆಚ್ಚಳಕ್ಕೆ ಮತ್ತಷ್ಟು ಕಾಣಿಕೆ ನೀಡುತ್ತಿವೆ.

ವಿನಾಶಕಾರಿ ಜಾಗತೀಕರಣ ನೀತಿಗಳನ್ನು ಜಾರಿ ಮಾಡಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಪರಸ್ಪರ ಪೈಪೋಟಿಗೆ ಬಿದ್ದಂತೆ ವರ್ತಿಸುತ್ತಿರುವುದು ಎಲ್ಲರೂ ಗಮನಿಸಿರುವ ಸತ್ಯ. ಹಿಂದೊಮ್ಮೆ ದೇಶದ ಸ್ವಾವಲಂಬನೆಗೆ ಕಾರಣವಾಗಿರುವ ಸಾರ್ವಜನಿಕ ಉದ್ದಿಮೆಗಳ ಆರಂಭಕ್ಕೆ ಸರ್ಕಾರ ತಕ್ಕ ಮಟ್ಟಿನ ಆದ್ಯತೆ ನೀಡಿತ್ತು. ಆದರಿಂದಾಗಿ ಸಾರ್ವಜನಿಕ ಉಕ್ಕು ಕಾರ್ಖಾನೆಗಳು ಆರಂಭವಾದವು. ಬಿ.ಇ.ಎಲ್., ಬಿಹೆಚ್‌ಇಎಲ್., ಹೆಚ್.ಎ.ಎಲ್., ಐ.ಟಿ.ಐ., ಇಂತಹ ಹತ್ತಾರು ಸಾರ್ವಜನಿಕ ಕಾರ್ಖಾನೆಗಳು ಆರಂಭವಾದವು. ಕರ್ನಾಟಕ ಮತ್ತು ಬೆಂಗಳೂರು ಸಹ ಕೇಂದ್ರ ಸರ್ಕಾರದ ಬಂಡವಾಳ ಹೂಡಿಕೆಯ ಒಂದು ಪ್ರಮುಖ ಕೇಂದ್ರವಾಯಿತು. ಇಂದು ಬೆಂಗಳೂರು ಅಂತರರಾಷ್ಟ್ರೀಯ ಗಮನ ಸೆಳೆಯುವಂತಹ ಸಾಧನೆಗಳನ್ನು ಮಾಡಿದೆ ಎಂದು ಯಾವ ಯಾವ ಬಗ್ಗೆ ಹೇಳಲಾಗುತ್ತಿದೆಯೊ ಆ ಎಲ್ಲ ಸಾಧನೆಗಳಿಗೆ ಮೂಲ ಈ ಸಾರ್ವಜನಿಕ ಕಾರ್ಖಾನೆಗಳು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗಿದೆ.



ಖಾಸಗಿ ಉದ್ದಿಮೆದಾರರಿಂದ ಆಗುತ್ತಿದ್ದ ಅಗಾಧ ವಂಚನೆ, ಮೋಸ - ಸಾರ್ವಜನಿಕ ಹಿತಾಸಕ್ತಿ - ದೇಶದ ಹಿತಾಸಕ್ತಿಗಳನ್ನು ಗಾಳಿಗೆ ತೂರುವ ನೀತಿಗಳಿಂದಾಗಿ ದೇಶದ ವಿಮೆ-ಬ್ಯಾಂಕುಗಳನ್ನು ಪೆಟ್ರೋಲಿಯಂ ಇತ್ಯಾದಿ ರಂಗಗಳನ್ನು, ಉದ್ದಿಮೆಗಳನ್ನು ರಾಷ್ಟ್ರೀಕರಿಸಲಾಯಿತು.

ಉಕ್ಕು - ವಿದ್ಯುತ್- ಕಲ್ಲಿದ್ದಲು - ಇತ್ಯಾದಿ ದೇಶದ ಮೂಲಭೂತ ಕೈಗಾರಿಕಾ ರಂಗಗಳಲ್ಲಿ ಸರ್ಕಾರ ಬಂಡವಾಳ ಹೂಡುವುದು ಚಾರಿತ್ರಿಕವಾಗಿ - ಅಂದಿನ ಬಂಡವಾಳಶಾಹಿಯ ಅಗತ್ಯವೂ ಆಗಿತ್ತು. ಅವರಲ್ಲಿ ಅಂತಹ ಅಗಾಧ - ಬಂಡವಾಳವೂ ಇರಲಿಲ್ಲ. ಲಾಭಕ್ಕಾಗಿ ಸುದೀರ್ಘ ಅವಧಿ ಕಾಯುವ ತಾಳ್ಮೆಯೂ ಇರಲಿಲ್ಲ.

ಸುಮಾರು ಅರ್ಧ ಶತಮಾನಗಳ ಕಾಲ ದೇಶದ ಕಾರ್ಮಿಕ ವರ್ಗವನ್ನು - ಜನ ಸಾಮಾನ್ಯರನ್ನು - ಹಿಂಡಿ - ನಿರ್ದಯವಾಗಿ ಶೋಷಿಸಿ ಬೃಹತ್ತಾಗಿ ಬೆಳೆದಿರುವ ದೇಶದ ಖಾಸಗಿ ಬಂಡವಾಳಶಾಹಿ ಇಂದು ಎಲ್ಲ ಸಾರ್ವಜನಿಕ ಸಂಸ್ಥೆಗಳನ್ನು ನುಂಗಿ ನೀರು ಕುಡಿಯಲು ಸಜ್ಜಾಗಿ ನಿಂತಿದೆ. ದೇಶದ ಬಂಡವಾಳಶಾಹಿ - ವಿದೇಶಿ ಸಾಮ್ರಾಜ್ಯಶಾಹಿ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವ ಕೇಂದ್ರ ಸರ್ಕಾರಗಳು ತಕ್ಕ ಮಟ್ಟಿಗಿನ ಸ್ವಾವಲಂಬನೆಗೆ ಕಾರಣವಾಗಿರುವ ನೀತಿಯನ್ನೇ ತಲೆಕೆಳಗು ಮಾಡಲು ನಿಂತಿವೆ.

ನಮ್ಮ ಸಮಾಜದ ಬೆಳೆಯುತ್ತಿರುವ ಹೊಸ ಹೊಸ ಅಗತ್ಯಗಳಿಗೆ ತಕ್ಕಂತೆ ಹೊಸ ಹೊಸ ಸಾರ್ವಜನಿಕ ಕಾರ್ಖಾನೆ ಸ್ಥಾಪಿಸುವ, ಸಾರ್ವಜನಿಕ ಬಂಡವಾಳ ಹೂಡುವ ತನ್ನ ಚಾರಿತ್ರಿಕ ಕರ್ತವ್ಯವನ್ನೇ ಕೈಬಿಟ್ಟು ಕೂತಿವೆ.

'ವಿಜಯನಗರದ ಉಕ್ಕು - ಕರ್ನಾಟಕದ ಹಕ್ಕು' ಎಂಬ ರಾಜ್ಯದ ಜನತೆಯ ಘೋಷಣೆ, ಅವಿರತ ಚಳುವಳಿ ಕೇಂದ್ರ ಸರ್ಕಾರದ ಕಣ್ಣು ತೆರೆಸಲೇ ಇಲ್ಲ. ದಶಕಗಳ ಕಾಲದ ವಿಳಂಬದ ನಂತರ ಈಗ ಅಲ್ಲಿ ಖಾಸಗಿ ಜಿಂದಾಲ್ ಕಂಪನಿಯು ಸ್ಥಾಪಿತವಾಗಿ ತನ್ನ ಕಾರು ಬಾರು ನಡೆಸುತ್ತಿದೆ. ಕಾರ್ಖಾನೆ ಕಾರ್ಮಿಕರ ಜೀವ ರಕ್ಷಣೆಗೆ ಸಂಬಂಧಿಸಿದ ಸುರಕ್ಷಾ ಕ್ರಮಗಳನ್ನು ಕೈಗೊಳ್ಳಲು ಸಿದ್ಧವಿಲ್ಲದ ಕಂಪನಿಯು, ರಾಜ್ಯದ ನೈಸರ್ಗಿಕ ಸಂಪನ್ಮೂಲದ ಲೂಟಿ ನಡೆಸುತ್ತಿದೆ.

ಸಮಾಜದ ಅಭಿವೃದ್ಧಿಯ ಆಧಾರ ಸ್ಥಂಭವಾದ ಕೈಗಾರಿಕೆಗಳ ಸ್ಥಾಪನೆಗಾಗಿ ಬಂಡವಾಳ ಹೂಡಲು ಸಿದ್ಧವಿಲ್ಲದ ರಾಜ್ಯ -ಕೇಂದ್ರ ಸರ್ಕಾರಗಳು ತಮ್ಮ ನೀತಿಗಳಲ್ಲಿ ತಮ್ಮ ಬಜೆಟ್‌ಗಳಲ್ಲಿ ಖಾಸಗಿ ಬಂಡವಾಳ ಶಾಹಿಗಳಿಗೆ ನೀಡುತ್ತಿರುವ ರಿಯಾಯಿತಿ ಮತ್ತು ವಿನಾಯಿತಿಗಳು ಮಾತ್ರ ಎಂತಹವರನ್ನು ದಂಗು ಬಡಿಸುವಂತಿವೆ.

ಅಂತರರಾಷ್ಟ್ರೀಯ ಗಮನ ಸೆಳೆದಿದೆ ಎಂದು ಹೇಳಲಾದ ರಾಜ್ಯದ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಒಟ್ಟು ವಹಿವಾಟು 2005-06 ರಲ್ಲಿ 28 ಸಾವಿರ ಕೋಟಿಗಳಷ್ಟು ಆಗಲಿದೆ ಎಂದು ಅಂದಾಜು ಮಾಡಲಾಗಿದೆ. ಈ ಅಗಾಧ ಮೊತ್ತದ ವಹಿವಾಟು ನಡೆಸುತ್ತಿರುವ ಮಾಹಿತಿ ತಂತ್ರಜ್ಞಾನದ ಕ್ಷೇತ್ರಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಯಾವುದೇ ರೀತಿಯ ತೆರಿಗೆಯನ್ನು ಹಾಕುವುದಿಲ್ಲ. 'ತೆರಿಗೆ ರಜೆ'ಯನ್ನು ಘೋಷಿಸಿಬಿಟ್ಟಿವೆ.

ಈ ಐಟಿ ಕ್ಷೇತ್ರದ ದೊರೆಗಳ ಅಣತಿಯಂತೆ ಬೆಂಗಳೂರಿನಲ್ಲಿ ಫ್ಲೈಓವರ್‌ಗಳು - ಮೇಲ್ಸೇತುವೆಗಳು ಗ್ರೇಡ್ ಸೆಪರೇಟರ್‌ಗಳು ಇತ್ಯಾದಿಗಳನ್ನು ನಿರ್ಮಿಸಲು, ಅಗತ್ಯವಿರುವ ಕಡೆ ಮತ್ತು ಅನಗತ್ಯವಾಗಿರುವ ಕಡೆಯೂ ಸಹ ಇಂತಹ ನಿರ್ಮಾಣಗಳಿಗಾಗಿ ಸಹಸ್ರಾರು ಕೋಟಿ ರೂಪಾಯಿಗಳ ಬಂಡವಾಳವನ್ನು ಸರ್ಕಾರ ತೊಡಗಿಸುತ್ತಿದೆ.

ಇಷ್ಟೆಲ್ಲಾ ಆದ್ಯತೆ ಮತ್ತು ಪ್ರಚಾರ ಪಡೆದಿರುವ ಈ ಮಾಹಿತಿ ತಂತ್ರಜ್ಞಾನ ಕ್ಷೇತ್ರವು ರಾಜ್ಯದಲ್ಲಿ ಸೃಷ್ಟಿಸಿರುವ ಒಟ್ಟು ಉದ್ಯೋಗದ ಸಂಖ್ಯೆ ಕೇವಲ 2.5 ಲಕ್ಷ ಮಾತ್ರ. ಅದೂ ಸಹ ಬಹುತೇಕ ಸಮಾಜದ ಮೇಲ್‌ಸ್ತರದ ವಿಭಾಗದ ಅಭ್ಯರ್ಥಿಗಳಿಗೆ ಮಾತ್ರ ಇಲ್ಲಿ ಉದ್ಯೋಗ.

ಸಮಾಜದ ಸಮಗ್ರ ಅಭಿವೃದ್ಧಿಗೆ ಪೂರಕವಾದ ಮೂಲಭೂತ ಕೈಗಾರಿಕೆಗಳಲ್ಲಿ ಕೇಂದ್ರ - ರಾಜ್ಯ ಸರ್ಕಾರಗಳೂ ಬೃಹತ್ ಬಂಡವಾಳ ಹೂಡಿ ಕೈಗಾರಿಕೀಕರಣಕ್ಕೆ ಚಾಲನೆ ನೀಡದಿದ್ದಲ್ಲಿ ನಿರುದ್ಯೋಗ ಪರಿಸ್ಥಿತಿ ಸುಧಾರಿಸುವುದೂ ಸಾಧ್ಯವಿಲ್ಲ. ವಿಷಮ ಅಸಮಾನತೆಗಳಿಂದ ಮುಕ್ತವಾದ ಸಾಮಾಜಿಕ ಆರ್ಥಿಕ ಪ್ರಗತಿ ಸಾಧಿಸುವುದು ಸಹ ಸಾಧ್ಯವಿಲ್ಲ. ○

ನಮ್ಮ ಸಮಾಜದಲ್ಲಿ ಅಂತರ್ಗತವಾಗಿರುವ ವಿಷಮ ಅಸಮಾನತೆಗಳಿಂದ ಮಾತ್ರವಲ್ಲ ಜಾಗತೀಕರಣ-ಉದಾರೀಕರಣ-ಖಾಸಗೀಕರಣಗಳ ನೀತಿಗಳ ಪರಿಣಾಮವಾಗಿ ಬಹುಮುಖ ದಾಳಿಗೆ ತುತ್ತಾಗಿರುವ ವಿಭಾಗ ಮಹಿಳಾ ವಿಭಾಗ. ಮಹಿಳೆಯರ ಉದ್ಯೋಗಾವಕಾಶಗಳ ಪ್ರಶ್ನೆ - ದುಡಿಯುವ ಮಹಿಳೆಯರ ಉದ್ಯೋಗದ ಪರಿಸ್ಥಿತಿಯಲ್ಲಿನ ಸ್ಥಿತ್ಯಂತರದ ಕುರಿತ ಲೇಖನ ಇಲ್ಲಿದೆ.



ಮಹಿಳೆ ಮತ್ತು ಉದ್ಯೋಗ

■ ಕೆ.ಎಸ್.ವಿಮಲ

ಉದಾರೀಕರಣದ ಪ್ರಕ್ರಿಯೆಯಿಂದಾಗಿ ದುಡಿಯುವ ಮಹಿಳೆಯರ ಜೀವನ ಮಟ್ಟ ಸಂಪೂರ್ಣ ಕುಸಿಯುತ್ತಿದೆ. ಜಾಗತಿಕ ಉದ್ಯೋಗ ಪರಿಸ್ಥಿತಿಯ ಕುರಿತ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐ.ಎಲ್.ಓ.)ಯ 2004ರ ವರದಿಯಲ್ಲಿ ಇದನ್ನು ಸರಿಯಾಗಿ ಗುರುತಿಸಲಾಗಿದೆ. ಅದರ ಪ್ರಕಾರ 'ಉದ್ಯೋಗ ರಹಿತ ಅಭಿವೃದ್ಧಿ' - ವಿಶ್ವದ ಹಲವು ರಾಷ್ಟ್ರಗಳ ಮಹಿಳೆಯರ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ವಿಶ್ವದ 2.8 ಬಿಲಿಯನ್ ದುಡಿಯುವ ಜನರಲ್ಲಿ ಶೇ.40 ರಷ್ಟು ಮಹಿಳೆಯರು. ಇತ್ತೀಚಿಗೆ ಇದಕ್ಕೆ ಇನ್ನೂ 200 ಮಿಲಿಯನ್ ಮಹಿಳೆಯರ ಸೇರ್ಪಡೆಯಾಗಿದೆ ಎಂಬ ಅಭಿಪ್ರಾಯವಿದೆ. ಎಂದರೆ ದುಡಿಯುವ ಮಹಿಳೆಯರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ ಎಂದರ್ಥವಲ್ಲ. ನಿಜವಾಗಿ ಎಂದರೆ ಕೆಲಸದ ಅವಶ್ಯಕತೆ ಇರುವ ಮಹಿಳೆಯರ ಸಂಖ್ಯೆಗೆ ಹೋಲಿಸಿದಲ್ಲಿ ಕೆಲಸದಲ್ಲಿರುವ ಮಹಿಳೆಯರ ಸಂಖ್ಯೆ ಅತ್ಯಂತ ಕಡಿಮೆ. ವಿಶ್ವದಾದ್ಯಂತ - ಎಲ್ಲ ಕ್ಷೇತ್ರಗಳಲ್ಲಿ ತಲೆದೋರಿರುವ ಬಿಕ್ಕಟ್ಟಿನಿಂದಾಗಿ ಮಹಿಳೆಯರು ಕಳೆದುಕೊಂಡ ಕೆಲಸಗಳಿಗೆ ಹೋಲಿಸಿದರೆ ಮಹಿಳೆಯರಿಗಾಗಿಯೇ ಸೃಷ್ಟಿಯಾದ ಕೆಲಸಗಳು ಅತ್ಯಂತ ಕಡಿಮೆಯೇ. ಅವರಿಗೆ ಕೊಡಲ್ಪಡುವ ವೇತನವೂ ಕಡಿಮೆಯೇ. ಇಂದಿಗೂ ಸಂಘಟಿತ ವಲಯವನ್ನು ಹೊರತು ಪಡಿಸಿ ಉಳಿದೆಡೆ ಸಮಾನ ಕೆಲಸಕ್ಕೆ ಸಮಾನ ವೇತನವಿಲ್ಲದ, ಕೊನೆಗೆ ಕನಿಷ್ಟ ವೇತನವೂ ಇಲ್ಲದ ಪರಿಸ್ಥಿತಿಯೇ ಇದೆ. ಐ.ಎಲ್.ಓ.ದ ವರದಿಯೇ ಹೇಳುವಂತೆ ಇಂದಿಗೂ ಇಡೀ ವಿಶ್ವದಲ್ಲಿ ರಫ್ತು ವಲಯಗಳಲ್ಲಿ ಕೆಲಸ ಮಾಡುವವರಲ್ಲಿ ಶೇಕಡಾ 90 ಮಹಿಳೆಯರು ಮತ್ತು ಅವರ ವೇತನ ದಿನವೊಂದಕ್ಕೆ 25/- ರೂ.ಗಳ ಆಸುಪಾಸು ಮಾತ್ರ. ಇದು ಕನಿಷ್ಟ ವೇತನದ ಹತ್ತಿರವೂ ಇರದ ದರವಾಗಿದೆ. ಮುಕ್ತ ಮಾರುಕಟ್ಟೆಯ ಮಂತ್ರ ಜಪಿಸುವ ಈ ದಿನಮಾನದಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳ ಮಧ್ಯೆ ಬಹುರಾಷ್ಟ್ರೀಯ ಕಂಪನಿಗಳನ್ನು ಆಹ್ವಾನಿಸಲು ಪೈಪೋಟಿ ನಡೆಯುತ್ತಿದೆ. ಕಂಪನಿಗಳನ್ನು ಆಕರ್ಷಿಸಲು ಅವರು ಬಳಸುವ ಹಲವು ತಂತ್ರಗಳಲ್ಲಿ ಅತ್ಯಂತ ಕಡಿಮೆ ಕೂಲಿ/ ವೇತನಕ್ಕೆ ಅವಕಾಶ ನೀಡುತ್ತೇವೆನ್ನುವುದು ಒಂದು ಅತಿ ಮುಖ್ಯ ತಂತ್ರ. ಉದಾ: ವಿಶ್ವದ ಸಿದ್ಧ ಪಡಿಸಿದ ಉಡುಪುಗಳು ತಯರಾಗುವುದು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿಯೆ. ಅಮೇರಿಕಾದ ಪ್ರತಿಷ್ಠಿತ ಕಂಪನಿಗಳ ಉಡುಪುಗಳು ತಯಾರಾಗುವುದು ಭಾರತದಂತಹ ರಾಷ್ಟ್ರಗಳಲ್ಲಿಯೇ. ಅಲ್ಲಿಯ ಕಾರ್ಮಿಕರಿಗೆ ಒಟ್ಟು ದರದ ಶೇ.1 ರಷ್ಟು ಮಾತ್ರ ಹೋಗುತ್ತದೆ. ಶೇ.75 ರಷ್ಟು ಕಂಪನಿಯ ಬ್ರಾಂಡ್‌ಗಳಿಗೆ ಹೋಗುತ್ತದೆ. ಇಂತಹ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು ಸಾಮಾನ್ಯವಾಗಿ ಮಹಿಳೆಯರೇ ಇರುತ್ತಾರೆ. ಹೀಗೆ ಕೆಲಸ ಮಾಡುವ ಮಹಿಳೆಯರಿಗೆ ಕನಿಷ್ಟ ಸೌಲಭ್ಯಗಳೂ ಇರುವುದಿಲ್ಲ ಮತ್ತು ಸಮಾನ/ ಕನಿಷ್ಟ ವೇತನಗಳೂ ಇರುವುದಿಲ್ಲ. ಆರ್ಥಿಕವಾಗಿ ಮುಂದುವರಿದಂತಹ ಬ್ರಿಟನ್‌ನಂತಹ ರಾಷ್ಟ್ರಗಳಲ್ಲಿಯೂ ಇದೇ ಪರಿಸ್ಥಿತಿ ಇದೆ ಎಂದರೆ ಭಾರತದಂತಹ ದೇಶದ ಮಹಿಳೆಯರ ಪಾಡೇನು?

ಭಾರತದ ಸಂದರ್ಭದಲ್ಲಿ - ದುಡಿಯುವ ಮಹಿಳೆಯರ ಪರಿಸ್ಥಿತಿ ಅತ್ಯಂತ ಶೋಚನೀಯ ಸ್ಥಿತಿಗೆ ಬಂದು ತಲುಪಿದೆ. ಅನಾರೋಗ್ಯಕರ ಪೈಪೋಟಿ, ಔದ್ಯೋಗಿಕ ಬಿಕ್ಕಟ್ಟಿನಿಂದ ನಗರ ಪ್ರದೇಶದ ನೂರಾರು ಕಾರ್ಖಾನೆಗಳು ಮುಚ್ಚಿ ಸಾವಿರಾರು ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಅದರಲ್ಲಿ ಬಹುತೇಕ ಮಹಿಳೆಯರು ಸಿಗುತ್ತಾರೆ. ಗ್ರಾಮೀಣ ಕ್ಷೇತ್ರದಲ್ಲಿ ತಲೆದೋರಿರುವ ಕೃಷಿ ಕ್ಷೇತ್ರದ ಬಿಕ್ಕಟ್ಟಿನಿಂದಾಗಿ ರೈತ ಕೃಷಿ ಕೂಲಿಕಾರ ಮಹಿಳೆಯರು ಸಂಪೂರ್ಣ ಹತಾಶೆಯ ಅಂಚಿಗೆ ತಲುಪಿದ್ದಾರೆ. ಹುಟ್ಟೂರಿನಲ್ಲಿ ನಿಲ್ಲಲು ನೆಲೆ ಇಲ್ಲದೆ, ದುಡಿಯಲು ಕೆಲಸವಿಲ್ಲದೇ ನಗರಗಳಿಗೆ ಕೆಲಸ ಅರಸಿ ವಲಸೆ ಬರುವುದು ಇಂದು ಸಾಮಾನ್ಯ ಸಂಗತಿಯಾಗಿದೆ.

80ರ ದಶಕದಲ್ಲಿ ಮಹಿಳೆಯರ ಉದ್ಯೋಗ ಲಭ್ಯತೆಯ ಪ್ರಮಾಣ ಶೇ.8 ಇದ್ದುದು 90ರ ದಶಕದಲ್ಲಿ ಶೇ.2 ಕ್ಕೆ ಇಳಿದಿದೆ. ರಾಷ್ಟ್ರೀಯ ಮಾದರಿ ಸಮೀಕ್ಷೆ -1999-2000 ರ ಪ್ರಕಾರ ಒಟ್ಟು ನಿರುದ್ಯೋಗ ಪ್ರಮಾಣದಲ್ಲಿ ಮಹಿಳಾ ನಿರುದ್ಯೋಗದ ಪ್ರಮಾಣ ಅತಿ ಹೆಚ್ಚು ಇದೆ. ಔದ್ಯೋಗಿಕ ಕೇಂದ್ರಗಳಾದ ನಗರ ಪ್ರದೇಶಗಳಲ್ಲಿ ಮಹಿಳಾ ಉದ್ಯೋಗಿಗಳ ಪ್ರಮಾಣ ಹೆಚ್ಚಿದೆಯೆಂದು ಕಂಡುಬರುವುದಾದರೂ ಅದಕ್ಕೇ ಕಾರಣ ಕೆಲವು ನಿರ್ದಿಷ್ಟ ಕ್ಷೇತ್ರಗಳಲ್ಲಿ ತಾತ್ಕಾಲಿಕ ಸಂದರ್ಭಕ್ಕೆ ಮಹಿಳೆಯರಿಗೆ ಆದ್ಯತೆ ನೀಡಲಾಗುತ್ತದೆ. ಅದಕ್ಕೆ ಕೂಡ ಕಾರಣಗಳುಂಟು.

ಮಹಿಳೆಯರೆಂದರೆ ಕಡಿಮೆ ಕೂಲಿ ಕೊಟ್ಟು ಹೆಚ್ಚು ಕೆಲಸ ಮಾಡಿಸಿ, ಸುಲಭವಾಗಿ ಶೋಷಿಸಬಹುದೆಂಬ ಅಂದಾಜಿನಲ್ಲಿ ಹೀಗೆ ಆದ್ಯತೆ ನೀಡಲಾಗುತ್ತದೆ.

2003ರ ಆರ್ಥಿಕ ಸಮೀಕ್ಷೆಯ ಪ್ರಕಾರ ಸಂಘಟಿತ ಕ್ಷೇತ್ರದಲ್ಲಿ ಕೇವಲ ಶೇ.18.4 ಮಹಿಳೆಯರು ಉದ್ಯೋಗಸ್ಥರಿದ್ದಾರೆ. ಒಂದು ಮಟ್ಟದವರೆಗಿನ ಸುರಕ್ಷಿತ ಉದ್ಯೋಗವೆನಿಸಬಲ್ಲ ಸಂಘಟಿತ ಕ್ಷೇತ್ರದಲ್ಲಿ ಸಿಗುವ ಉದ್ಯೋಗಾವಕಾಶ ನೀಡಬಲ್ಲ ಬದುಕಿನ ಮಟ್ಟದಿಂದ ಮಹಿಳೆಯರು ದೊಡ್ಡ ಮಟ್ಟದಲ್ಲಿ ವಂಚಿತರಾಗುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಉದ್ಯೋಗ ಲಭ್ಯತೆಯ ಮಾದರಿ ಕೂಡ ಬದಲಾಗುತ್ತಿದೆ. ಹಿಂದಿನ ನಿಶ್ಚಿತ ಉದ್ಯೋಗಕ್ಕೆ ಬದಲಾಗಿ ಕಾಂಟ್ರಾಕ್ಟ್ (ಒಪ್ಪಂದದ) ಉದ್ಯೋಗಗಳು ಸೃಷ್ಟಿಯಾಗುತ್ತಿದೆ. ಹೊರಗುತ್ತಿಗೆ (ಔಟ್ ಸೋರ್ಸಿಂಗ್) ಹೆಸರಿನಲ್ಲಿ-ಕಛೇರಿಯಿಂದಾಚೆ ಕೆಲಸಗಳು ನೂಕಲ್ಪಡುತ್ತಿದ್ದು ಅಲ್ಲಿ ಯಾವುದೇ ಸೌಲಭ್ಯಗಳಾಗಲಿ ಕೆಲಸದ ಭದ್ರತೆಯಾಗಲೀ ದೊರೆಯಲು ಸಾಧ್ಯವೇ ಇಲ್ಲ. ಬೇರೊಂದು ಮಾತಿನಲ್ಲಿ ಹೇಳುವುದಾದರೆ ಸಂಘ ಕಟ್ಟುವ ಹಕ್ಕಿನಿಂದ ವಂಚಿಸುವ ಮತ್ತು ಮಾಡಿದ ಕೆಲಸಗಳಿಗೆ ದುಡಿದ ದುಡಿಮೆಗೆ ಸಿಗಬೇಕಾದ ಸವಲತ್ತುಗಳನ್ನು ನಿರಾಕರಿಸಲೆಂದೇ ತಂದ ವ್ಯವಸ್ಥೆ ಇದಾಗಿದೆ.

ಗೃಹಿಣಿಯರೇ ಮನೆಯಲ್ಲೇ ಕುಳಿತು ಗಳಿಸಿ ಎಂಬ ದೊಡ್ಡ ದೊಡ್ಡ ಕಂಪನಿಗಳ ಜಾಹಿರಾತಿನ ಹಿಂದಿರುವ ಅತಿ ದೊಡ್ಡ ಕುತಂತ್ರವೇ ಇದು. ಬಿಡುವಿನ ವೇಳೆಯ ಕೆಲಸವೆಂಬ ಹೆಸರಿನಲ್ಲಿ ಕೊಡುವ ಈ ಕೆಲಸದ ಮೂಲಕ- ಅತ್ಯಂತ ಕಡಿಮೆ ವೆಚ್ಚದಲ್ಲಿ ಕೆಲಸ ತೆಗೆಯುವುದು ಒಂದಾದರೆ, ಹೆರಿಗೆ ರಜಾ, ಸಾಂದರ್ಭಿಕ ರಜಾ, ಮುಂತಾದ ಕೊಡಬೇಕಾದ ಕಾನೂನುದತ್ತ ಸೌಲಭ್ಯಗಳನ್ನು ಯಾವುದೇ ತೊಂದರೆಯಿಲ್ಲದೇ ನಿವಾರಿಸಿಕೊಳ್ಳುವ ನಯ ವಂಚಕತನ ಇದಾಗಿದೆ ಮತ್ತು ಈ ಕೆಲಸ ಹಲವು ಸಂದರ್ಭಗಳಲ್ಲಿ ಮನೆಯಲ್ಲಿರುವ ಅಪ್ರಾಪ್ತ ವಯಸ್ಕ ಮಕ್ಕಳೂ ಮಾಡುತ್ತಾರಾದರೂ ಅವರ ದುಡಿಮೆ ಗಣನೆಗೆ ಬರುವುದಿಲ್ಲ.

ಇಂತಹ ಹಲವು ಕಾರ್ಮಿಕ ವಿರೋಧಿ ನೀತಿಗಳಿಗೆ ಕಾನೂನಿನ ಮನ್ನಣೆ ಪಡೆದುಕೊಳ್ಳಲೆಂದೇ ಆಳುವ ಸರ್ಕಾರಗಳು ಹಲವು ಆಯೋಗಗಳನ್ನು ರಚಿಸಿ ತಮಗೆ ಬೇಕಾದ ಶಿಫಾರಸ್ಸುಗಳನ್ನು ಬರೆಸಿಕೊಳ್ಳುತ್ತವೆ. ಅಂತಹುದರಲ್ಲೊಂದು ಎರಡನೇ ಕಾರ್ಮಿಕ ಆಯೋಗ. ಈ ಆಯೋಗ ಹೈರ್ ಅಂಡ್ ಫೈರ್ ನೀತಿಗೆ ತನ್ನ ಸಮ್ಮತಿ ಸೂಚಿಸಿ ಕಾರ್ಮಿಕ ಸಂಘ ರಚಿಸಿಕೊಳ್ಳಲು ಅವಕಾಶವಿಲ್ಲದಂತೆ ಮಾಡುವ ಸಂಚಿಗೆ ತೈಲವೆರೆದಿದೆ.

ಆದರೆ ಎಚ್ಚೆತ್ತ ದುಡಿಯುವ ಜನ ಸಮುದಾಯ ನೀಡುವ ಪ್ರತಿರೋಧ ಇವೆಲ್ಲವನ್ನೂ ಬಗ್ಗುಬಡಿಯಬಲ್ಲುದೆಂಬುದಕ್ಕೆ ಕಾರ್ಮಿಕವರ್ಗದ ಇತಿಹಾಸವೇ ಸಾಕ್ಷಿ.

ಅರಣ್ಯ ಅತಿಕ್ರಮಣ ಭೂಮಿ ಸಕ್ರಮಗೊಳ್ಳಬೇಕು

ಅರಣ್ಯವೆಂದರೆ ಅದೇನು ಗೊಂಡಾರಣ್ಯವೇನಲ್ಲ. ಅರಣ್ಯ ಇಲಾಖೆಯ ವಶದಲ್ಲಿದ್ದ ಭೂಮಿಯಷ್ಟೇ. ಆದರೆ ಅದು ಅಸಂಖ್ಯಾತ ಬಡಜನರ ಬದುಕಿನ ಆಸರೆ. ಬಡರೈತರ ಗುಡಿಸಲು-ಸೂರಿಗೊಂದು ನೆಲೆ. ಬಹುರಾಷ್ಟ್ರೀಯ ಕಂಪನಿಗಳಿಗೆ ಲಕ್ಷ-ಲಕ್ಷ ಎಕರೆ ಭೂಮಿಯನ್ನು ಬಗೆದು ಬರೆದು ಕೊಡುತ್ತಿರುವ ಸರ್ಕಾರಗಳಿಗೆ ಛೀಮಾರಿ ಹಾಕದ ಸುಪ್ರೀಂಕೋರ್ಟಿಗೆ ಬಡವರನ್ನು ಒಕ್ಕಲೆಬ್ಬಿಸುವುದರಲ್ಲಿ ಏನೋ ಭಾರಿ ಸಂಭ್ರಮ. ಈ ಆದೇಶವನ್ನು ಜಾರಿ ಮಾಡಲೂ ಅಷ್ಟೇ - ಸರ್ಕಾರಗಳಿಗೆ ಸಂತಸ. ಈ ಜನವಿರೋಧಿ ನೀತಿಗಳ ವಿರುದ್ಧ ಮತ್ತೊಂದು ಹಂತದ ಹೋರಾಟದ ಅಗತ್ಯದ ಬಗೆಗಿನ ಲೇಖನ ಇದು.

ಒಂದಿದ್ದ ಮನೆ(ಕುಟುಂಬ) ಎರಡಾಗಿದೆ; ಎರಡು ನಾಲ್ಕಾಗಿವೆ; ನಾಲ್ಕು ಹದಿನಾರಾಗಿವೆ. ಇರಲು ಮನೆ ಇಲ್ಲ; ಸ್ವಂತದ್ದೆನುವ ಭೂಮಿ ಇಲ್ಲ. ಕುಟುಂಬಕ್ಕೊಂದು ಉದ್ಯೋಗವಿಲ್ಲ. ಕೃಷಿ ಪ್ರಧಾನ ಕುಟುಂಬದಲ್ಲಿ ಬೆಳೆದವರಿಗೆ ಕೃಷಿ ಬಿಟ್ಟು ಬೇರೆ ಉದ್ಯೋಗದಲ್ಲಿ 'ಗತಿ' ಇಲ್ಲ. ಸಾವಿರಾರು ಹೆಕ್ಟೇರ್ ಕೃಷಿಯೋಗ್ಯ ಪಾಳುಭೂಮಿ ಇದ್ದರೂ ಸರ್ಕಾರ ಬಡವರಿಗೆ ಕೃಷಿಕೂಲಿಕಾರರಿಗೆ ಭೂಮಿಯನ್ನು ಒದಗಿಸುತ್ತಿಲ್ಲ.

ಪ್ರತಿಯೊಬ್ಬರಿಗೂ ತುಂಡು ಭೂಮಿ, ವಾಸಕ್ಕೊಂದು ಮನೆ, ಊಟಕ್ಕೆ ಅನ್ನ ಕೊಡುವುದಾಗಿ ಭರವಸೆ ಕೊಡುತ್ತಾ ವಿವಿಧ ಯೋಜನೆ ಪ್ರಕಟಿಸಿ ಪ್ರಚಾರ ಗಿಟ್ಟಿಸಿಕೊಳ್ಳುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೂರಾರು ವರ್ಷಗಳಿಂದ ಖಾಲಿ ಬಿದ್ದ ಭೂಮಿಯಲ್ಲಿ ಸ್ವಂತ ಪರಿಶ್ರಮದಿಂದ ಮನೆ ಮಾಡಿಕೊಂಡ ನಮ್ಮನ್ನೇ ಒಕ್ಕಲೆಬ್ಬಿಸಲು ಮುಂದಾಗಿರುವುದು ನಮ್ಮ ಬದುಕಿನ ಹಕ್ಕನ್ನೇ ಕಸಿದುಕೊಂಡಂತಾಗುವುದಿಲ್ಲವೆ? ಭೂಮಾಲಿಕರ ಕೈಯಲ್ಲಿ ಸಾವಿರಾರು ಎಕ್ರೆ ಭೂಮಿ ಬಿಟ್ಟಿರುವ ಸರ್ಕಾರ, ಬಹುರಾಷ್ಟ್ರೀಯ ಕಂಪನಿಗಳಿಗೆ ಸಾವಿರಾರು ಎಕ್ರೆ ಭೂಮಿಯನ್ನು ಹಂಚುವ ಸರ್ಕಾರ ಬಡ ರೈತರ ಭೂಮಿ ಕಸಿದುಕೊಂಡು ನಿರಾಶ್ರಿತರನ್ನಾಗಿ ಮಾಡುವುದೇಕೆ? ಮಕ್ಕಳಂತೆ ಸಾಕಿ ಬೆಳೆಸಿದ ಅಡಿಕೆ, ತೆಂಗು, ಬಾಳೆ, ಗೇರು ಮರಗಳನ್ನು ಕಡಿದು ನಾಶ ಮಾಡುತ್ತಿರುವುದನ್ನು ನೋಡುತ್ತಿರುವುದಕ್ಕಿಂತ ಪ್ರತಿಭಟಿಸಿ ಜೈಲು

ವಿಠ್ಠಲ ಭಂಡಾರಿ

ಸೇರುವುದೇ ಉತ್ತಮವಲ್ಲವೇ? ಎಂದು ಕೇಳುತ್ತಿದ್ದಾರೆ ಬಡ ಅತಿಕ್ರಮಣದಾರ ಸಾಗುವಳಿದಾರರು. ಒಂದು ವೇಳೆ ಸುಪ್ರೀಂ ಕೋರ್ಟಿನ ಆದೇಶದ ಹಿನ್ನೆಲೆಯಲ್ಲಿ ಇವರನ್ನು ಒಕ್ಕಲೆಬ್ಬಿಸಿದರೆ ಅಕ್ಷರಶಃ ಇವರಿಗೆ ಬೀದಿಯೇ ಗತಿ; ಭಿಕ್ಷೆ ಬೇಡಬೇಕು ಅಷ್ಟೆ.

ಯಾಕೆ ಈ ಸಮಸ್ಯೆ?

9.05.2002ರಂದು ಸುಪ್ರೀಂ ಕೋರ್ಟ್ ಹೊರಡಿಸಿದ ಆದೇಶದ ಹಿನ್ನೆಲೆಯಲ್ಲಿ 27.04.1978ರ ನಂತರ ದೇಶದ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಅತಿಕ್ರಮಣ ಮಾಡಿದ ಎಲ್ಲಾ ಭೂಮಿಯನ್ನ ತೆರವುಗೊಳಿಸುವಂತೆ ಕೇಂದ್ರದ ಅರಣ್ಯ ಮತ್ತು ಪರಿಸರ ಇಲಾಖೆಯ ಕಾರ್ಯದರ್ಶಿ ಎಲ್ಲ ರಾಜ್ಯ ಸರ್ಕಾರಗಳಿಗೆ ಆದೇಶ ಮಾಡಿದರು. ಈ ಸಂದರ್ಭದಲ್ಲಿ ಸುಪ್ರೀಂ ಕೋರ್ಟಿನ ಆದೇಶದಿಂದ ಜನರಿಗೆ ಆಗುವ ತೊಂದರೆಯ ಬಗ್ಗೆ ಚರ್ಚಿಸುವ ಬದಲು ವಾಜಪೇಯಿ ನೇತೃತ್ವದ ಎನ್.ಡಿ.ಎ. ಸರ್ಕಾರ ಬಡ ಅತಿಕ್ರಮಣದಾರರನ್ನು ಒಕ್ಕಲೆಬ್ಬಿಸಲು ಮುಂದಾಗಿದ್ದು ಒಂದು ದುರಂತ.

1996ರಲ್ಲಿ ಗೋವವರ್ಮನ್ ತಿರುಮಲಪಾದ ಎನ್ನುವವರು ಅರಣ್ಯನಾಶವನ್ನು ತಡೆಯಬೇಕೆಂದು ಸುಪ್ರೀಂಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಿದ ಹಿನ್ನೆಲೆಯಲ್ಲಿ ನ್ಯಾಯಾಲಯ ಕೊಟ್ಟ ಈ ತೀರ್ಮಾನ ಲಕ್ಷಾಂತರ ಕುಟುಂಬವನ್ನು ಅತಂತ್ರಗೊಳಿಸಿದೆ. ಆದರೆ ರೈತರೆಂದೂ ಅರಣ್ಯ ನಾಶ ಮಾಡುವುದಿಲ್ಲ ಮತ್ತು ಅವರು ಬೆಳೆದ ಮರ ಮಟ್ಟುಗಳೆಲ್ಲ ವರ್ಷವಿಡೀ ಹಸಿರಿನಿಂದ ಕೂಡಿರುವುದೇ ಆಗಿವೆ.

ಕರ್ನಾಟಕದಲ್ಲಿ ಸುಮಾರು 91,000 ಹೆಕ್ಟೇರ್ ಭೂಮಿಯನ್ನು ಸಾಗುವಳಿಗಾಗಿ ಮತ್ತು ಮನೆ

ಪುಟ 11 ಕ್ಕೆ

ವೃತ್ತಿಶಿಕ್ಷಣ : ಸುಪ್ರಿಂಕೋರ್ಟ್ ಸಾರುತ್ತಿರುವ ಅರಣ್ಯ ನ್ಯಾಯ

ಸುಪ್ರಿಂ ಕೋರ್ಟ್‌ನ 7 ಜನ ನ್ಯಾಯಾದೀಶರ ಪೀಠವು ಇತ್ತೀಚೆಗೆ ವೃತ್ತಿಶಿಕ್ಷಣ ಬಿಕ್ಕಟ್ಟಿನ ಕುರಿತು ತೀರ್ಪು ನೀಡಿದೆ. ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಪ್ರವೇಶನೀತಿ ಶುಲ್ಕ ಸ್ವರೂಪವನ್ನು ನಿಯಂತ್ರಿಸಲು ಕೇಂದ್ರ ಸರ್ಕಾರಕ್ಕೆ ಆಗಲಿ ಅಥವಾ ರಾಜ್ಯ ಸರ್ಕಾರಕ್ಕೆ ಆಗಲಿ ಅಧಿಕಾರವಿಲ್ಲ. ಮತ್ತು ಈ ಸಂಸ್ಥೆಗಳಲ್ಲಿ ಯಾವುದೇ ಬಗೆಯ ಮೀಸಲಾತಿ ನೀತಿಯನ್ನು ಪಾಲಿಸಬೇಕಿಲ್ಲ ಎಂಬುದು ತೀರ್ಪಿನ ಸಾರ. 2002ರ ಅಕ್ಟೋಬರ್‌ನಲ್ಲಿ ಟಿ.ಎಂ.ಎ.ಪೈ ಫೌಂಡೇಷನ್ ಪ್ರಕರಣದಲ್ಲಿ 11 ಜನ ನ್ಯಾಯಾದೀಶರ ಪೀಠವು ನೀಡಿದ ತೀರ್ಪನ್ನೇ ಈ ತೀರ್ಪು ಸಹ ಧೃಢೀಕರಿಸಿ ಎತ್ತಿಹಿಡಿದಿದೆ. ಇದರಿಂದಾಗಿ ಶೇ.50:50 ಸೀಟು ಹಂಚಿಕೆ ನೀತಿ ಮತ್ತು ಪರಿಶಿಷ್ಟ ಜಾತಿ ಪಂಗಡ ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯತಿ ಮೀಸಲಾತಿ ನೀಡಬೇಕೆಂಬ 5 ಜನ ನ್ಯಾಯಾದೀಶರ ಇತ್ತೀಚಿನ ತೀರ್ಪು ರದ್ದಾಗಿದೆ. ಶಿಕ್ಷಣರಂಗದಲ್ಲಿರುವ ಅಲ್ಪಸ್ವಲ್ಪ ಸಾಮಾಜಿಕ ನ್ಯಾಯದ ವ್ಯವಸ್ಥೆಯನ್ನು ಧ್ವಂಸ ಮಾಡಿ ಕುರುಡು ಕಾಂಚಾಣದ ಕ್ರೂರ ನೃತ್ಯಕ್ಕೆ ಅವಕಾಶ ನೀಡುವ ಸುಪ್ರಿಂ ಕೋರ್ಟಿನ ಸರಣಿ ತೀರ್ಪುಗಳು. ಇದರಿಂದಾಗಿ ಉದ್ಭವಿಸಿರುವ ಗಂಭೀರ ಬಿಕ್ಕಟ್ಟಿನ ಕುರಿತು ಹಾಗೂ ಸಮಸ್ಯೆಗೆ ಶಾಶ್ವತ ಪರಿಹಾರದ ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಆರ್.ರಾಮಕೃಷ್ಣ

ಲಹೋಟಿ ನೇತೃತ್ವದ 7 ಜನ ನ್ಯಾಯಾದೀಶರ ಸುಪ್ರಿಂ ಕೋರ್ಟಿನ ಪೀಠವು 'ಸರ್ಕಾರಗಳಿಂದ ಅನುದಾನರಹಿತ ವೃತ್ತಿಶಿಕ್ಷಣ ಸಂಸ್ಥೆಗಳ ಹತೋಟಿ ಸಲ್ಲದು' ಎಂದು ತೀರ್ಪು ನೀಡಿದೆ. ದಲಿತ-ಹಿಂದುಳಿದ ಮುಂತಾದ ವಿಭಾಗದ ವಿದ್ಯಾರ್ಥಿಗಳಿಗೆ ನೀಡಲಾಗುವ ಮೀಸಲಾತಿ ನೀತಿಯನ್ನು ಈ ಸಂಸ್ಥೆಗಳು ಪಾಲಿಸಬೇಕಿಲ್ಲ ಎಂದಿರುವ ನ್ಯಾಯಾಲಯವು ಶೇ.15ರಷ್ಟು ಸೀಟುಗಳನ್ನು ಮಾತ್ರ ಅನಿವಾಸಿ ಭಾರತೀಯರೆಂಬ ಕುಬೇರ ಪುತ್ರ (ಪುತ್ರಿ)ರಿಗೆ ಮೀಸಲಿಡಬೇಕೆಂದು ಆದೇಶಿಸಿರುವ ಅಂಶವೊಂದೇ ಇಡೀ ತೀರ್ಪಿನ ಸಾರ ಏನೆಂದು ಸಾರಿ ಸಾರಿ ಹೇಳುತ್ತಿದೆ.

ವೈದ್ಯಕೀಯ ಸೀಟು ಸಿಗದೆಂಬ ಹತಾಶೆಯಲ್ಲಿ ನೇಣು ಬಿಗಿದುಕೊಂಡ ಪ್ರತಿಭಾ, ಮಮತಾ, ವೈದ್ಯಕೀಯ ಶಿಕ್ಷಣದ ಶುಲ್ಕ ಕಟ್ಟಲಾರದೇ ಎಂಟಂತಸ್ತಿನ ಮಹಡಿಯಿಂದ ಕೆಳಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡ ರಜನಿ ಇನ್ನೂ ಸಹ ಜನರ ಮನಸ್ಸಿನಿಂದ ಮರೆಯಾಗಿಲ್ಲ. ಇಂತಹ ಅನಾಹುತ ಪರಂಪರೆಯು ಮುಂದುವರಿಕೆಗೆ ಸರ್ವತಾ ಅವಕಾಶವಿಲ್ಲವೆಂದು ವಿದ್ಯಾರ್ಥಿ ಚಳುವಳಿ ಸರ್ಕಾರದ ವಿರುದ್ಧ ಮತ್ತೊಂದು ಸರಣಿ ಸಂಘರ್ಷಕ್ಕೆ ಸಜ್ಜಾಗುತ್ತಿದೆ.

ತಮಿಳುನಾಡು ಸರ್ಕಾರವು ಈ ತೀರ್ಪಿನ ವಿರುದ್ಧ ಮೇಲ್ಮನವಿ ಹೋಗುವುದಾಗಿ ಪ್ರಕಟಿಸಿದೆ. ಕರ್ನಾಟಕ ಸರ್ಕಾರವೂ ಸಹ ಇದೇ ರೀತಿ ಮೇಲ್ಮನವಿ ಹೋಗಬೇಕೆಂದು ಹಲವರು ಸಲಹೆ ನೀಡುತ್ತಿದ್ದಾರೆ. ಇಂತಹ ಕ್ರಮ -ಸರ್ಕಾರಗಳು ಇನ್ನಷ್ಟು ಕಾಲಹರಣ ಮಾಡಲು ಮತ್ತು ಚಳುವಳಿಯ 'ಬೀಸುವ ದೊಣ್ಣೆ'ಯಿಂದ ತಪ್ಪಿಸಿಕೊಳ್ಳುವ ಉಪಾಯಗಳಾಗಬಹುದಷ್ಟೆ.

ವೃತ್ತಿಶಿಕ್ಷಣದ ಸಮಸ್ಯೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು - ನಮ್ಮ ರಾಜ್ಯದಲ್ಲೂ ದೇಶದಲ್ಲೂ ವೃತ್ತಿಶಿಕ್ಷಣ ಕ್ಷೇತ್ರದಲ್ಲಿ ಇತ್ತೀಚಿನ ದಶಕಗಳಲ್ಲಿ ಆಗಿರುವ ಬದಲಾವಣೆಗಳೇನು-ಟಿ.ಎಂ.ಎ ಪೈ ಪ್ರಕರಣದ ಸುಪ್ರಿಂ ಕೋರ್ಟ್ ತೀರ್ಪಿನ ಸಾರವೇನೆಂದು ತಿಳಿದುಕೊಳ್ಳುವುದು ಮುಖ್ಯ.

80ರ ದಶಕದಲ್ಲಿ ಕರ್ನಾಟಕವೂ ಸೇರಿದಂತೆ ದೇಶದ ಅನೇಕ ರಾಜ್ಯಗಳಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಅದರಲ್ಲೂ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳು ಶಿಕ್ಷಣವನ್ನು ಮನಸೋಇಚ್ಛೆ ಮಾರಾಟ ಮಾಡುತ್ತಿದ್ದವು. ಅವುಗಳ ಪ್ರವೇಶ ನೀತಿ, ಮೀಸಲಾತಿ, ಶುಲ್ಕ, ಡೊನೇಷನ್ ಕುರಿತಂತೆ ಸರ್ಕಾರಕ್ಕೆ ಯಾವುದೇ ಆಡಳಿತಾತ್ಮಕ ನಿಯಂತ್ರಣವಿರಲಿಲ್ಲ. ಈ ಮುಕ್ತ ಸನ್ನಿವೇಶವನ್ನು ಸಂಪೂರ್ಣವಾಗಿ ಬಳಸಿಕೊಳ್ಳುತ್ತಿದ್ದ ಖಾಸಗಿ ಶಿಕ್ಷಣ ಸಂಸ್ಥೆಗಳು ಜನರನ್ನು ಲೂಟಿ ಮಾಡಿದ್ದಕ್ಕೆ ಮಿತಿಯೇ ಇಲ್ಲ. ಕೇವಲ ಬೆರಳೆಣಿಕೆಯಷ್ಟಿದ್ದ ಸರ್ಕಾರಿ ತಾಂತ್ರಿಕ-ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಷ್ಟೇ ಸಮಾಜದ ಆರ್ಥಿಕ- ಸಾಮಾಜಿಕ ಪರಿಸ್ಥಿತಿಗಳ ಪರಿಗಣನೆ ಮತ್ತು ಸಾಮಾಜಿಕ ನ್ಯಾಯಕ್ಕೆ ಮಾನ್ಯತೆಯಿದ್ದದ್ದು.

ಜನರ ಬೆಳೆಯುತ್ತಿರುವ ಶಿಕ್ಷಣಾಕಾಂಕ್ಷೆಯನ್ನೇ ಬಂಡವಾಳ ಮಾಡಿಕೊಳ್ಳಲು ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳು ಹತ್ತಾರು ಹೊಸ



ತಾಂತ್ರಿಕ-ವೈದ್ಯಕೀಯ ಕಾಲೇಜುಗಳನ್ನು ಆರಂಭಿಸಿ ವೃತ್ತಿಶಿಕ್ಷಣದ ವ್ಯಾಪಾರವನ್ನು ಭರ್ಜರಿಗೊಳಿಸಿವೆ. ಕರ್ನಾಟಕವೂ ಇಂತಹ ಒಂದು ದೊಡ್ಡ ವ್ಯಾಪಾರೀ ಕೇಂದ್ರ. ಈ ಅರಾಜಕ ಸನ್ನಿವೇಶವನ್ನು ಕೊನೆಗಾಣಿಸಬೇಕೆಂದು ಎಸ್.ಎಫ್.ಐ ಸೇರಿದಂತೆ ಅನೇಕ ಪ್ರಗತಿಪರ ಸಂಘಟನೆಗಳು ನಿರಂತರವಾಗಿ ಹೋರಾಡಿವೆ. ಇಂತಹ ಸಂದರ್ಭದಲ್ಲಿ ತುಮಕೂರಿನ ಸಿದ್ದಾರ್ಥ ಕಾಲೇಜಿನ ವಿದ್ಯಾರ್ಥಿನಿ ಮೋಹಿನಿ ಜೈನ್ ಮತ್ತು ಕೆ.ಪಿ.ಉನ್ನಿಕೃಷ್ಣನ್ ಎಂಬುವವರು ಸುಪ್ರೀಂ ಕೋರ್ಟಿನಲ್ಲಿ ಹೂಡಿದ ಮೊಕದ್ದಮೆ ಪರಿಣಾಮವಾಗಿ 1993ರಲ್ಲಿ 'ಕೆ.ಪಿ.ಉನ್ನಿಕೃಷ್ಣನ್' ಪ್ರಕರಣ ಎಂದೇ ಖ್ಯಾತವಾದ ತೀರ್ಪು ಬಂತು. ಈ ತೀರ್ಪು ವೃತ್ತಿ ಶಿಕ್ಷಣದಲ್ಲಿ ಅಲ್ಲಿಯವರೆಗೆ ತಂಡವವಾಡುತ್ತಿದ್ದ ಅರಾಜಕತೆಗೆ-ವಂತಿಗೆ ಸುಲಿಗೆಗೆ ಅಲ್ಪಸ್ವಲ್ಪವಾದರೂ ತಡೆಯೊಡ್ಡಿ ಪ್ರತಿಭೆ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯಿತು. ಅನಿಯಂತ್ರಿತ ವ್ಯಾಪಾರೀಕರಣವನ್ನು ತಡೆಗಟ್ಟಬೇಕು, ಉಚಿತ ಸೀಟುಗಳೆಷ್ಟು, ಪಾವತಿ ಸೀಟುಗಳೆಷ್ಟು, ಡೊನೇಷನ್ ಎಷ್ಟಿರಬೇಕು, ಆಡಳಿತ ಮಂಡಳಿಗಳಿಗೆ



ವಿವೇಚನಾ ಕೋಟ ಏನಿರಬೇಕು ಎಂಬುದರ ಕುರಿತು ತಕ್ಷಣವೇ ರಾಜ್ಯ ಸರ್ಕಾರಗಳು ನೀತಿಗಳನ್ನು ರೂಪಿಸಬೇಕೆಂದು ತನ್ನ ತೀರ್ಪಿನಲ್ಲಿ ಸುಪ್ರಿಂ ಕೋರ್ಟು ತಿಳಿಸಿತು. ಸುಪ್ರಿಂ ಕೋರ್ಟಿನ ಅಂದಿನ ತೀರ್ಪನ್ನು ಜಾರಿ ಮಾಡುವ ನಿಟ್ಟಿನಲ್ಲಿ ಬೇರೆ, ಬೇರೆ ಸರ್ಕಾರಗಳು ವಿವಿಧ ರೀತಿಯ ನಿಯಮಾವಳಿಗಳನ್ನು ರೂಪಿಸಿಕೊಂಡವು. ಅದರಂತೆ ಕರ್ನಾಟಕ ಸರ್ಕಾರವೂ ಸಹಾ ಖಾಸಗಿ ಸಂಸ್ಥೆಗಳ ಶಿಕ್ಷಣದ ವ್ಯಾಪಾರೀ ಧೋರಣೆಯನ್ನು ಹತೋಟಿಗೆ ತರಲು ನಿಯಮಗಳನ್ನು ರೂಪಿಸಿತು.

ಯಾವುದೇ ಅಡೆತಡೆಯಿಲ್ಲದೆ ವಂತಿಗೆ ಸುಲಿಗೆಗೆ ಒಗ್ಗಿಹೋಗಿದ್ದ ಖಾಸಗಿ ಆಡಳಿತ ಮಂಡಳಿಗಳು ಅಂದೂ ಸಹ ಶುಲ್ಕ ನಿಗದಿ ಮತ್ತು ಪ್ರವೇಶ ನೀತಿಯಲ್ಲಿ ಸರ್ಕಾರದ ನಿಯಂತ್ರಣವನ್ನು ಒಪ್ಪುವುದಿಲ್ಲವೆಂದು ಪಟ್ಟು ಹಿಡಿದಿದ್ದರು. ಆ ತೀರ್ಪಿನ ನಂತರ ಜಾರಿಗೆ ಬಂದ ಉಚಿತ ಸೀಟು/ಪಾವತಿ ಸೀಟು ನೀತಿಯನ್ನು ಒಪ್ಪುವುದಿಲ್ಲ ಎಂದೇ ಹಠ ಹಿಡಿದಿದ್ದರು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದಿಲ್ಲ........ ಕಾಲೇಜು ನಡೆಸುವುದು ಸಾಧ್ಯವೇ ಇಲ್ಲ.......ಕಾಲೇಜುಗಳನ್ನೇ ಮುಚ್ಚಿಬಿಡುತ್ತೇವೆ ಎಂದೆಲ್ಲಾ ಗುಟುರು ಹಾಕಿದ್ದರು. ಹಲವು ಬಗ್ಗೆಯ ತಿಕ್ಕಾಟ ಜಗ್ಗಾಟಗಳ ನಂತರ ಅಂತಿಮವಾಗಿ ಶೇ.85 ಸೀಟುಗಳಿಗೆ ಸಿಇಟಿ ಮೂಲಕ ಪ್ರವೇಶ, ಶೇ.15 ಆಡಳಿತ ಮಂಡಳಿ ಸೀಟುಗಳು ಹಾಗೂ ಒಟ್ಟು ಸೀಟುಗಳಲ್ಲಿ ಶೇ.50 ಉಚಿತ ಸೀಟು (ಕಡಿಮೆ ಶುಲ್ಕ) ಎಂದು ತೀರ್ಮಾನವಾಯಿತು. ಶೇ 85 ರ ಸರ್ಕಾರಿ ಕೋಟಾ ಸೀಟುಗಳನ್ನು ತುಂಬಲು ದೇಶದಲ್ಲೇ ಅತ್ಯಂತ ಉತ್ತಮವೆಂದು ಹೆಸರು ಪಡೆದಿದ್ದ ಸಿಇಟಿ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು.

ಅಡ್ಡ ಸಹಾಯಧನ -ಸಾಮಾಜಿಕ ನ್ಯಾಯದ ಪರಿಕಲ್ಪನೆ

ವೃತ್ತಿಶಿಕ್ಷಣ ಅಥವಾ ಯಾವುದೇ ಶಿಕ್ಷಣ ಇರಲಿ ಹಣವುಳ್ಳ ಶ್ರೀಮಂತರಿಗೆ ಮಾತ್ರ ಪ್ರವೇಶ ಎಂಬುದು ಅರಣ್ಯ ನ್ಯಾಯವಾಗುತ್ತದೆ. ಹೆಚ್ಚು ಶುಲ್ಕ ತೆರಲು ಸಾಮರ್ಥ್ಯವುಳ್ಳವರು ಹೆಚ್ಚುಶುಲ್ಕ ತೆರಬೇಕು. ಸಾಮಾಜಿಕವಾಗಿ-ಆರ್ಥಿಕವಾಗಿ ದುರ್ಬಲರಾದ ಅವಕಾಶವಂಚಿತ ವಿಭಾಗದ ವಿದ್ಯಾರ್ಥಿಗಳಿಗೆ ಶುಲ್ಕದ ಹೊರೆಯಿಂದ ವಿನಾಯತಿ ನೀಡಬೇಕೆಂಬ ಅಡ್ಡ ಸಹಾಯಧನ (cross subsidy) ಕಲ್ಪನೆ ಆಧಾರದಲ್ಲಿ ಈ ಉಚಿತ-ಪಾವತಿ ಸೀಟು ಪದ್ಧತಿ ಆರಂಭವಾಯಿತು. ತಡೆ ಇಲ್ಲದೆ 9 ವರ್ಷಗಳ ಕಾಲ ಜಾರಿಯಲ್ಲಿದ್ದ ಈ ವ್ಯವಸ್ಥೆಯಿಂದ ಸಾವಿರಾರು ಪ್ರತಿಭಾನ್ವಿತ, ಬಡ, ದಲಿತ, ಹಿಂದುಳಿದ ಕುಟುಂಬಗಳ ವಿದ್ಯಾರ್ಥಿಗಳು ವೃತ್ತಿಶಿಕ್ಷಣವನ್ನು ಪಡೆದಿದ್ದಾರೆ. ಪ್ರತಿಭೆ ಮತ್ತು ಸಾಮಾಜಿಕ ನ್ಯಾಯಕ್ಕೆ ಸ್ವಲ್ಪವಾದರೂ ನ್ಯಾಯ ಸಂದಿದೆ.

ನಾಯಿಕೊಡೆಗಳಂತೆ ಬೆಳೆದ ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳು

90ರ ದಶಕದಲ್ಲಿ ಆರಂಭಗೊಂಡ ಜಾಗತೀಕರಣ ನೀತಿಗಳಿಂದ ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣ ತೀವ್ರಗೊಂಡಿತು. ಕೈಬೆರಳೆಣಿಕೆಯಷ್ಟಿದ್ದ ವೃತ್ತಿಶಿಕ್ಷಣ ಸಂಸ್ಥೆಗಳ ಸಂಖ್ಯೆ ನೂರರ ಗಡಿದಾಟಿ ಬೆಳೆಯಿತು.

ಟಿ.ಎಂ.ಎ.ಪೈ.ಫೌಡೇಷನ್ ಪ್ರಕರಣದ ತೀರ್ಪು

ನ್ಯಾಯಾಲಯಗಳು ಉಳ್ಳವರ ಪರವಾಗಿ ವಕಾಲತ್ತು ನಡೆಸುತ್ತಿರುವ ಈ ಸಂದರ್ಭದಲ್ಲಿ ಮಂಗಳೂರಿನ ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ ಟಿ.ಎಂ.ಪೈ.ಫೌಂಡೇಷನ್ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಹಕ್ಕನ್ನು ಪ್ರತಿಪಾದಿಸಿ ಸುಪ್ರಿಂ ಕೋರ್ಟಿಗೆ ಮೊರೆ ಹೋಯಿತು. ಪ್ರವೇಶ ನೀತಿ ಮತ್ತು ಶುಲ್ಕ ನಿಗದಿಯಂತಹ ಸರ್ಕಾರದ ಕ್ರಮಗಳಿಂದ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಸಂವಿಧಾನದತ್ತ ಹಕ್ಕಿಗೆ ಧಕ್ಕೆಯಾಗಿದೆ ಎಂಬುದು ಪೈ ಸಂಸ್ಥೆಯ ವಾದದ ಸಾರ.

ಯಾವುದೇ ನಾಗರೀಕ ಸಮಾಜ, ಸರ್ಕಾರ ಅಲ್ಪಸಂಖ್ಯಾತ ಸಮುದಾಯವು ಶೈಕ್ಷಣಿಕ ಹಕ್ಕುಗಳು ಸೇರಿದಂತೆ ವಿಶೇಷ ಹಕ್ಕುಗಳನ್ನು ಗೌರವಿಸಬೇಕಾಗುತ್ತದೆ. ಇದು ಪ್ರಜಾಪ್ರಭುತ್ವ ಮತ್ತು ಧರ್ಮ ನಿರಪೇಕ್ಷತೆಯ ಅಂತರ್ಗತ ಮೌಲ್ಯವಾಗಿದೆ. ಆದರೆ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ತಮ್ಮ ಸಮುದಾಯದ ವಿದ್ಯಾರ್ಥಿಗಳ ಹಿತಕ್ಕಾಗಿ ಈ ಹಕ್ಕನ್ನು ಬಳಸಬೇಕು. ಶಿಕ್ಷಣದಲ್ಲಿ ವ್ಯಾಪಾರೀ ಮನೋಭಾವ ಸಲ್ಲದು. ಈ ನಿಟ್ಟಿನಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೂ ಸೇರಿದಂತೆ ಖಾಸಗಿ ಸಂಸ್ಥೆಗಳಿಗೆ ಸಾಮಾಜಿಕ ಹೊಣೆಗಾರಿಕೆ ಮತ್ತು ಸಾಮಾಜಿಕ ನಿಯಂತ್ರಣ ಅನಿವಾರ್ಯವಾಗಿದೆ.

ಸುಪ್ರಿಂಕೋರ್ಟ್ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಹಕ್ಕಿನ ಪ್ರಶ್ನೆಯ ಕುರಿತು ಮಾತ್ರವೇ ತನ್ನ ತೀರ್ಪನ್ನು ಸೀಮಿತಗೊಳಿಸಿಕೊಳ್ಳಲು ಅವಕಾಶವಿತ್ತು. ಆದರೆ ಸುಪ್ರಿಂ ಕೋರ್ಟ್ ಆ ವ್ಯಾಪ್ತಿಯನ್ನು ಮೀರಿ ಅನುಧಾನರಹಿತ ಶಿಕ್ಷಣ ಸಂಸ್ಥೆಗಳ ಹಕ್ಕನ್ನು ಕುರಿತು ಸಹ ತಾನೇ ಚರ್ಚಿಸಿ ತೀರ್ಪಿತ್ತಿದೆ. ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳು ಸರ್ಕಾರದ ಅನುದಾನ ಪಡೆಯದಿರುವುದರಿಂದ ಸರ್ಕಾರಕ್ಕೆ ಆ ಸಂಸ್ಥೆಗಳ ಪ್ರವೇಶ ನೀತಿ ಹಾಗೂ ಶುಲ್ಕ ಸ್ವರೂಪವನ್ನು ನಿಯಂತ್ರಿಸುವ ಹಕ್ಕಿಲ್ಲವೆಂಬುದು ತೀರ್ಪಿನ ಒಂದು ಮುಖ್ಯ ಅಂಶ. ಈ ತೀರ್ಪು ಚುನಾಯಿತ ಸರ್ಕಾರಗಳ ಸಂವಿಧಾನಬದ್ಧ ಅಧಿಕಾರವನ್ನೇ ಪ್ರಶ್ನೆ ಮಾಡುತ್ತದೆ.

ಕೆ.ಪಿ.ಕೃಷ್ಣನ್ ಪ್ರಕರಣದಲ್ಲಿ ತಾನೇ ನೀಡಿದ್ದ ತೀರ್ಪನ್ನು ಸಂಪೂರ್ಣ ತಿರಸ್ಕರಿಸಿರುವ ಸುಪ್ರಿಂ ಕೋರ್ಟ್ ಬದಲಾಗಿರುವ ಸನ್ನಿವೇಶದಲ್ಲಿ ಉನ್ನಿಕೃಷ್ಣನ್ ತೀರ್ಪನ್ನು ಸಂಪೂರ್ಣವಾಗಿ ಪರಿಷ್ಕರಿಸಬೇಕು ಎಂದು ಹೇಳಿದೆ. ಹಿಂದಿನ ತೀರ್ಪಿನ ಮಹತ್ವವನ್ನೇ ಅಲ್ಲಗಳೆದಿದೆ. ಉನ್ನಿಕೃಷ್ಣನ್ ಪ್ರಕರಣದ ತೀರ್ಪಿನ ಸಕಾರಾತ್ಮಕ ಅಂಶಗಳು, ಪರಿಣಾಮಗಳೆಲ್ಲವೂ ಇಂದು ಇಲ್ಲವಾಗಿದೆ. ವೃತ್ತಿಶಿಕ್ಷಣದಲ್ಲಿ ಮತ್ತೆ ಕುರುಡು ಕಾಂಚಾಣದ ಆರ್ಭಟವೇ ವಿಜೃಂಭಿಸಲಿದೆ. ನ್ಯಾಯಾಲಯದ ತೀರ್ಪುಗಳು ಮತ್ತು ನ್ಯಾಯಾಧೀಶರು ಕೂಡ ಆಳುವ ವರ್ಗದ ಸೈದ್ಧಾಂತಿಕ ಪರಿಧಿಯಿಂದ ಹೊರಗಿದ್ದು ತೀರ್ಪು ನೀಡಲು ಸಾಧ್ಯವಿಲ್ಲ ಎಂಬುದನ್ನು ಈ ಪ್ರಕರಣ ತೋರಿಸಿದೆ. ವ್ಯಾಪಾರೀಕರಣಗೊಳ್ಳುತ್ತಿರುವ ಸಾಮಾಜಿಕ ಮೌಲ್ಯಗಳು, ಸಾಮ್ರಾಜ್ಯಶಾಹಿಪರ ಚಿಂತನೆಗಳು, ಸ್ಥಾಪಿತ ಹಿತಾಸಕ್ತಿಗಳನ್ನು ರಕ್ಷಿಸುವ ನಮ್ಮ ಶೋಷಕ ವ್ಯವಸ್ಥೆಯ ಗುಣವನ್ನು ಮೀರುವುದು ನ್ಯಾಯಾಲಯಗಳಿಗೂ ಸಾಧ್ಯವಿಲ್ಲ ಎಂಬುದನ್ನು ಈ ತೀರ್ಪು ನಿರೂಪಿಸಿದೆ.


2002ರ ಟಿ.ಎಂ.ಎ.ಪೈ ಪ್ರಕರಣದ


→

ವೃತ್ತಿಶಿಕ್ಷಣ ಸಮಸ್ಯೆಗೆ ಶಾಶ್ವತ ಪರಿಹಾರ

ವೃತ್ತಿಶಿಕ್ಷಣ ಬಿಕ್ಕಟ್ಟಿಗೆ ಶಾಸನಾತ್ಮಕ ಪರಿಹಾರ ಒಂದು ಸೀಮಿತ ಪರಿಹಾರವಷ್ಟೆ. ಸಮಾಜದ ಅಗತ್ಯಕ್ಕೆ ತಕ್ಕಂತೆ ಸರ್ಕಾರಿ ತಾಂತ್ರಿಕ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸುವುದೇ ಸಮಸ್ಯೆಗೆ ಶಾಶ್ವತವಾದ ಪರಿಹಾರ. ಯಾವ ಸಂಘಟನೆಯೂ ಈ ಬಗ್ಗೆ ದನಿ ಎತ್ತದಿರುವಾಗ ಎಸ್‌ಎಫ್‌ಐ ಈ ಬಗ್ಗೆ ಸರ್ಕಾರವನ್ನು ಆಗ್ರಹಿಸಿತ್ತು. ವಿದ್ಯಾರ್ಥಿ ಚಳುವಳಿಯ ಒತ್ತಡಕ್ಕೆ ಮಣಿದ ರಾಜ್ಯ ಸರ್ಕಾರ ಮೊದಲು 5 ಸರ್ಕಾರ ವೈದ್ಯಕೀಯ ಕಾಲೇಜು ಆರಂಭಿಸುವುದಾಗಿ ಘೋಷಿಸಿತು. ನಂತರ ಈ ಸಂಖ್ಯೆ 8,10,11ಕ್ಕೆ ತಲುಪಿತು. ಗಾಣಗಿತ್ತಿ ಅಯ್ಯೋ ಎಂದರೆ ನೆತ್ತಿ ತಣ್ಣಗಾಗುತ್ತದೆಯೇ? ಸರ್ಕಾರ ಈ ಕಾಲೇಜು ಸ್ಥಾಪನೆಗೆ ಅಗತ್ಯವಾದ ಹಣಕಾಸು ನೀಡದೆ ಈ ಯೋಜನೆಗಳು 'ಬಾಲಗ್ರಹ' ಪೀಡಿತವಾಗಿವೆ. ಸೂಕ್ತ ಸೌಕರ್ಯಗಳಿಲ್ಲದ ಕಾರಣ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ (ಎಂ.ಸಿ.ಐ) ಈ ಸರ್ಕಾರಿ ಕಾಲೇಜುಗಳ ಆರಂಭಕ್ಕೆ ಅನುಮತಿಯನ್ನೇ ನೀಡಲಿಲ್ಲ. 'ಬೀಸೋ ದೊಣ್ಣೆ ತಪ್ಪಿಸಿಕೊಂಡರೆ ನೂರು ವರ್ಷ ಆಯಸ್ಸು' ಎಂಬ ಭಾವನೆಯಲ್ಲಿ ಸರ್ಕಾರ ಮುಂದುವರಿಯಲು ಚಳುವಳಿ ಅವಕಾಶ ನೀಡಬಾರದು.

ಸುಪ್ರಿಂಕೋರ್ಟು ತೀರ್ಪು ಶುಲ್ಕವನ್ನು ತೆರಲು ಶಕ್ತನಾದ ಹಣವುಳ್ಳ ವಿದ್ಯಾರ್ಥಿಯಿಂದ ದುರ್ಬಲ ವರ್ಗಗಳ ವಿದ್ಯಾರ್ಥಿಯ ಶುಲ್ಕವನ್ನು ಭರಿಸುವುದು ಅಸಮರ್ಥನೀಯ ಎಂದಿದೆ. ಅಂತಹ ಪರಿಕಲ್ಪನೆಯನ್ನೇ ತಿರಸ್ಕರಿಸಿದೆ. ಇಂತಹ ನೀತಿಯಿಂದಾಗಿ ಬಹುತೇಕ ನಗರಗಳ ಸಿರಿವಂತ ವಿಭಾಗದ ವಿದ್ಯಾರ್ಥಿಗಳಿಗೆ ಗ್ರಾಮೀಣ ಪ್ರದೇಶದ ಬಡವಿದ್ಯಾರ್ಥಿಗಳು ಶಿಕ್ಷಣ ವೆಚ್ಚವನ್ನು ತೆರುವಂತಾಗಿದೆ ಎಂದು ಕೋರ್ಟು ಅಭಿಪ್ರಾಯಪಟ್ಟಿದೆ. ಉಚಿತ ಸೀಟುಗಳು ನಗರದ ಶ್ರೀಮಂತ ವಿಭಾಗದ ವಿದ್ಯಾರ್ಥಿಗಳಿಗೆ ಹೋಗುತ್ತಿವೆ ಎಂಬುದು ನ್ಯಾಯಾಲಯದ ನಿಜವಾದ ಕಾಳಜಿಯಾಗಿದ್ದರೆ ಉಚಿತ ಸೀಟುಗಳನ್ನು ಪಡೆಯಲು ಒಂದು ಕಟ್ಟುನಿಟ್ಟಿನ ಆದಾಯ ಮಿತಿಯನ್ನು ಹೇರಿ ಬಡ, ಮಧ್ಯಮ ವರ್ಗದ ಜನತೆಯ ಹಿತವನ್ನು ಕಾಪಾಡಬಹುದಿತ್ತು.


ಜಾಲಪ್ಪ


ಶಿವ ಮಂಜುನಾಥ

ಬಂದ ಮುಕ್ತವಾಗಿ ಹಿರಿ ಹಿರಿ ಹಿಗ್ಗಿದ ಖಾಸಗಿ ಶಿಕ್ಷಣ ಸಂಸ್ಥೆಗಳು

ಇಂತಹ ತೀರ್ಪೊಂದು ಹೊರಬಂದ ಕೂಡಲೇ ಸಂತಸದ ಸುಗ್ಗಿಯಲ್ಲಿ ಹಿಗ್ಗಿ ಹೋದವರು ಖಾಸಗಿ ಆಡಳಿತ ಮಂಡಳಿಯ ಒಡೆಯರುಗಳು. ಈ ತೀರ್ಪಿನಿಂದ ಹುರುಪುಗೊಂಡಿರುವ ಅವರು ಎಲ್ಲಾ ನಿಯಮಗಳನ್ನೂ ಗಾಳಿಗೆ ತೂರುತ್ತಿದ್ದಾರೆ. ಮನಸ್ಸೋಇಚ್ಛೆ ಶುಲ್ಕ ಕೇಳುತ್ತಿದ್ದಾರೆ.

ಸುಪ್ರಿಂ ಕೋರ್ಟ್‌ನ ತೀರ್ಪುಗಳು ಹಾಗೆ ಯತಾವತ್ ಜಾರಿಯಾದರೆ, ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿರುವ ಕೆಲವೇ ಸೀಟುಗಳು ಮಾತ್ರ ಪ್ರತಿಭಾವಂತರಿಗೆ ಸಿಗುತ್ತದೆ. ಖಾಸಗಿ ಸಂಸ್ಥೆಗಳಲ್ಲಿ ಲಕ್ಷಾಂತರ ರೂ.ಶುಲ್ಕ ನಿಗದಿಯಾಗುವುದರಿಂದ ಅಡ್ಡ ಸಹಾಯಧನದ ಪ್ರಶ್ನೆ ಇಲ್ಲದಿರುವುದರಿಂದ ಹಣವುಳ್ಳವರಿಗೆ ಮಾತ್ರ ವೃತ್ತಿಶಿಕ್ಷಣದಲ್ಲಿ ಪ್ರವೇಶ ಸಿಗುತ್ತದೆ. ಸೀಟು ಪಡೆಯುವಲ್ಲಿ ಹಣವೇ ಪ್ರಧಾನ ಪಾತ್ರ ವಹಿಸುವುದರಿಂದ ಪ್ರತಿಭೆ ಪ್ರಧಾನವಾಗುವುದು ಸಾಧ್ಯವೇ ಇಲ್ಲ.

ಎನ್.ಡಿ.ಎ. ಬಗೆದ ದ್ರೋಹ

ಟಿ.ಎಂ.ಎ.ಪೈ ಪ್ರಕರಣದ ತೀರ್ಪಿನ ನಂತರ ದೇಶದಲ್ಲೆಲ್ಲಾ ಅಲ್ಲೋಲಕಲ್ಲೋಲವಾದರೂ ಅಂದು ಅಧಿಕಾರದಲ್ಲಿದ್ದ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರವು ತೀರ್ಪು ಬಂದ ಮೇಲೆ ಒಂದೂವರೆ ವರ್ಷ ಅಧಿಕಾರದಲ್ಲಿದ್ದರೂ ಕೇಂದ್ರೀಯ ಶಾಸನದ ಬಗ್ಗೆ ತುಟಿ ಬಿಚ್ಚಲಿಲ್ಲ. ಆದರೆ ಬಿಜೆಪಿಯ ಬಾಲಂಗೋಚಿಯಾದ ಎಬಿವಿಪಿಯು ಜನರ ಸಿಟ್ಟನ್ನು ಕೇವಲ ರಾಜ್ಯ ಸರ್ಕಾರದ ವಿರುದ್ಧ ತಿರುಗಿಸುವ ಪ್ರಯತ್ನ ಮಾಡಿತು. ಒಂದು ಕೇಂದ್ರೀಯ ಶಾಸನ ಅಥವಾ ಸುಗ್ರೀವಾಜ್ಞೆಯ ಮೂಲಕ ವಿದ್ಯಾರ್ಥಿ-ಪೋಷಕರ ಹಿತ ರಕ್ಷಿಸಬೇಕಾದ ಕೇಂದ್ರ ಸರ್ಕಾರ ಉಳ್ಳವ, ಬಡವ, ದಲಿತ, ಶ್ರೀಮಂತ ಎಲ್ಲರಿಗೂ ಒಂದೇ ಸ್ವರೂಪದ ಶುಲ್ಕ ಎಂದು ರಾಜ್ಯ ಸರ್ಕಾರಕ್ಕೆ ಆದೇಶದ ಮೂಲಕ ನಿರ್ದೇಶನ ನೀಡಿತು. ಖಾಸಗಿ ಆಡಳಿತ ಸಂಸ್ಥೆಗಳ ವಿರಾಟ ಸ್ವರೂಪದ ವಂತಿಗೆ ಲಾಭಿಯನ್ನು ಮಣಿಸಿ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವ ಉದ್ದೇಶ ಮತ್ತು ರಾಜಕೀಯ ಇಚ್ಛಾಶಕ್ತಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ತೋರಿಕೆಗಾದರೂ ಇರಲಿಲ್ಲ ಎಂಬುದು ಸಾಬೀತಾಯಿತು.

ಹೊಸ ಸಂಚಲನ ಮೂಡಿಸಿದ ವಿದ್ಯಾರ್ಥಿ ಆಂದೋಲನ

ತೀವ್ರಗೊಂಡ ಬಿಕ್ಕಟ್ಟಿನ ಸಂದರ್ಭದಲ್ಲಿ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಎದ್ದುಬಂದ ವಿದ್ಯಾರ್ಥಿ ಚಳುವಳಿ ರಾಷ್ಟ್ರಾದ್ಯಂತ ಒಂದು ಹೊಸ ಸಂಚಲನವನ್ನು ಮೂಡಿಸಿತು.

ಇಂತಹ ವ್ಯಾಪಕ ಪ್ರತಿರೋಧದ ರಭಸಕ್ಕೆ ಬೆದರಿದಂತೆ 2004ರಲ್ಲಿ 5 ಜನ ನ್ಯಾಯಾಧೀಶರ ಪೀಠ ಮತ್ತೊಂದು ತೀರ್ಪು ನೀಡಿತು. 11 ಜನ ನ್ಯಾಯಾದೀಶರ ಪೀಠದ ತೀರ್ಪನ್ನೇ ನಿರ್ದಿಷ್ಟಗೊಳಿಸುವುದಾಗಿ ಹೇಳಿದ ತೀರ್ಪು ಅನುದಾನರಹಿತ ಕಾಲೇಜುಗಳಲ್ಲಿ ಶೇ.50ರಷ್ಟು ಸೀಟುಗಳನ್ನು ಸರ್ಕಾರಿ ಸಿಇಟಿ ಮೂಲಕ ತುಂಬಬೇಕೆಂದೂ ಸೂಚಿಸಿತು. ಇದರಿಂದಾಗಿ ಪರಿಶಿಷ್ಟ ಜಾತಿ ಪಂಗಡ ಹಿಂದುಳಿದ ವರ್ಗ ಇತ್ಯಾದಿ ಸಾಮಾಜಿಕ ವಿಭಾಗಗಳಿಗೆ ಮೀಸಲಾತಿ ದೊರೆಯುವಂತಾಯಿತು. ಪರಿಶಿಷ್ಟ ಜಾತಿ-ಪಂಗಡದ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲರಿಗೂ ಏಕ ಸ್ವರೂಪದ ಶುಲ್ಕ ನಿಗದಿಪಡಿಸಬೇಕೆಂದೂ ಮತ್ತು ಶುಲ್ಕ ಸ್ವರೂಪವನ್ನು ನಿಗದಿಪಡಿಸಲು ನಿವೃತ್ತ ನ್ಯಾಯಾದೀಶರ ನೇತೃತ್ವದಲ್ಲಿ ಸಮಿತಿ ರಚಿಸಬೇಕೆಂದೂ ತೀರ್ಪು ತಿಳಿಸಿತು.

ಸ್ಫೋಟಿಸುತ್ತಿರುವ ವಿದ್ಯಾರ್ಥಿ- ಪೋಷಕರ ಅತೃಪ್ತಿಯನ್ನು ಎದುರಿಸುವ ಒಂದು ತೇಪೆ ತಂತ್ರವಾಗಿ ಬಂದ ಈ ತೀರ್ಪನ್ನು ಹಿಮ್ಮೆಟ್ಟಿಸುವಷ್ಟು ಪ್ರಬಲವಾಗಿತ್ತು ಚಳುವಳಿಯ ಒತ್ತಡ. ಹೀಗಾಗಿ ಕಳೆದ ಶೈಕ್ಷಣಿಕ ವರ್ಷದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಒಕ್ಕೂಟ (ಕಾಮೆಡ್ ಕೆ) ಮತ್ತು ಸರ್ಕಾರಗಳು ನ್ಯಾಯಾಲಯದ ಪರಿಧಿಯ ಹೊರಗೆ ಒಮ್ಮತಕ್ಕೆ ಬಂದು ಸುಪ್ರಿಂಕೋರ್ಟಿಗೆ ಪ್ರಮಾಣ ಪತ್ರ ಸಲ್ಲಿಸಿದವು.

ಇದರಿಂದಾಗಿ ತಾಂತ್ರಿಕ ವಿಭಾಗದ ಶೇ.75 ಮತ್ತು ವೈದ್ಯಕೀಯ ವಿಭಾಗದಲ್ಲಿ ಶೇ.60ರಷ್ಟು ಸೀಟುಗಳನ್ನು ಸರ್ಕಾರಿ ಸಿಇಟಿ ಮೂಲಕ ತುಂಬಲಾಯಿತು.

ಶುಲ್ಕಗಳು ಸ್ವಲ್ಪ ಹೆಚ್ಚಿದರೂ ತಾಂತ್ರಿಕ ವೈದ್ಯಕೀಯ ಎರಡೂ ವಿಭಾಗಗಳಲ್ಲಿ ತಲಾ ಶೇ.30ರಷ್ಟು ಉಚಿತ ಸೀಟುಗಳು ಲಭ್ಯವಾದವು.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಚಳುವಳಿಯ ಕಾವು ಕಡಿಮೆಯಾಗಿದೆ ಎಂದು ಭಾವಿಸಿದ ಕಾಮೆಡ್ ಕೆ ಮತ್ತು ರಾಜ್ಯ ಸರ್ಕಾರಗಳು ಕಳೆದ ವರ್ಷದ ಒಪ್ಪಂದ ಮುರಿದು ತಾಂತ್ರಿಕ ವಿಭಾಗದಲ್ಲಿ ಶೇ.65:35 ಹಾಗೂ ವೈದ್ಯಕೀಯದಲ್ಲಿ ಶೇ.50:50 ಸೀಟು ಹಂಚಿಕೆ ಒಪ್ಪಂದ ಮಾಡಿಕೊಂಡವು. ಇದರ ಜೊತೆಗೆ ಖಾಸಗಿ ಶಿಕ್ಷಣ ಸಂಸ್ಥೆಗಳು ತಮ್ಮ ಮೇಲಿನ ನಿಯಂತ್ರಣಗಳನ್ನು ಕಿತ್ತೆಸೆಯುವ ಸಂಬಂಧ ನ್ಯಾಯಾಲಯದಲ್ಲಿ ಕಾನೂನು ಸಮರ ನಡೆಸುತ್ತಲೇ ಇದ್ದವು. ಸುಪ್ರಿಂ ಕೋರ್ಟಿನ ಈ ತೀರ್ಪಿನ ಮೂಲಕ ನ್ಯಾಯ ದೇವತೆಯ ತಕ್ಕಡಿಯನ್ನು ಕೋಟಿ ಕೋಟಿ ವಂತಿಗೆ ಸುಲಿಯುವ ಶಿಕ್ಷಣೋದ್ಯಮಿಗಳ ಕಡೆಗೆ ವಾಲಿಸಲಾಗಿದೆ. ಎಷ್ಟೆ ಮೇಲ್ಮನವಿ ಸಲ್ಲಿಸಿದರೂ ತಕ್ಕಡಿ ಆ ಕಡೆಯೇ ವಾಲುತ್ತದೆ ಎಂಬ ಬಗೆಗೆ ಯಾರಿಗೂ ಅನುಮಾನ ವೇನೂ ಬೇಕಿಲ್ಲ. ಇನ್ನು ಬಾಕಿ ಉಳಿದಿರುದೊಂದೇ ಜನತಾ ನ್ಯಾಯಾಲಯ. ಈ ಜನತಾ ನ್ಯಾಯಾಲಯವು ಶಿಕ್ಷಣದ್ರೋಹಿ ಬಿಜೆಪಿ ನೇತೃತ್ವದ ಎನ್.ಡಿ.ಎ.ಗೆ ಈಗಾಗಲೇ ಸರಿಯಾದ ಜಾಗ ತೋರಿಸಿದೆ.

ಕಾಂಗ್ರೆಸ್ ನೇತೃತ್ವದ ಯುಪಿಎಯ ಸೆಳೆತವೂ ಅದೇ ದಿಕ್ಕಿನತ್ತಲೇ ಇದೆ. ಜನಾದೇಶದ ಒತ್ತಡ ಎಡಪಕ್ಷಗಳ ಒತ್ತಾಯದಿಂದ ಈಗಿನ ಕೇಂದ್ರ ಸರ್ಕಾರ ಮಾದರಿ ಕೇಂದ್ರೀಯ ಶಾಸನವೊಂದನ್ನು ರಚಿಸಿ ರಾಜ್ಯ ಸರ್ಕಾರಗಳ ಪರಿಶೀಲನೆಗೆ ಕಳುಹಿಸಿದೆ. ಡಿಸೆಂಬರ್-2,2004 ರಂದು ಎಸ್.ಎಫ್.ಐ. ನೇತೃತ್ವದಲ್ಲಿ ಎಡ ವಿದ್ಯಾರ್ಥಿ ಸಂಘಟನೆಗಳು ನಡೆಸಿದ ಪಾರ್ಲಿಮೆಂಟ್ ಚಲೋ ಹಿನ್ನೆಲೆಯಲ್ಲಿ ಜನವರಿ 10,2005 ರಂದು ಬೆಂಗಳೂರಿನಲ್ಲಿ ರಾಜ್ಯ ಶಿಕ್ಷಣ ಸಚಿವರುಗಳ ಸಮ್ಮೇಳನ ನಡೆಸಿ ಈ ಬಗ್ಗೆ ಚರ್ಚಿಸಲಾಯಿತು. ಈಗಲೂ ಅಗಸ್ಟ್ 27 ರಂದು ರಾಜ್ಯ ಶಿಕ್ಷಣ ಸಚಿವರುಗಳ ಸಮ್ಮೇಳನ ಕರೆಯಲಾಗಿದೆ. ಸಂಘಟನೆ ರೂಪಿಸಿ ಸರ್ಕಾರಕ್ಕೆ ಸಲ್ಲಿಸಿದ 'ಮಾದರಿ ಶಾಸನ'ದಲ್ಲಿನ ಹಲವು ಅಂಶಗಳನ್ನು ತಿರುಚಿ ಶಾಸನವನ್ನು ದುರ್ಬಲಗೊಳಿಸಲಾಗಿದೆಯೆಂಬ ವರದಿಗಳಿವೆ.

ದೇಶದ ಸಂವಿಧಾನದ ಆಶಯಗಳನ್ನು ಸಾಮಾಜಿಕ ನ್ಯಾಯವನ್ನು ಕಾಪಾಡಬೇಕಾದ ನ್ಯಾಯಾಲಯಗಳೇ "ಪಾಶ್ಚಿಮಾತ್ಯ ದೇಶಗಳಲ್ಲಿರುವಂತೆ ಭಾರತದಲ್ಲಿ ಇನ್ನೂ ಶಿಕ್ಷಣವನ್ನು ಒಂದು ಲಾಭದಾಯಕ ಉದ್ದಿಮೆಯೆಂದು ಪರಿಗಣಿಸಲಾಗಿಲ್ಲ" ಎಂದು ತಮ್ಮ ತೀರ್ಪಿನಲ್ಲಿ ಅತೀವ ದುಃಖ ತೋಡಿಕೊಳ್ಳುತ್ತಿರುವಾಗ, "ಶಿಕ್ಷಣ ಸಂಸ್ಥೆಯ ವೆಚ್ಚವನ್ನು ಹಾಗೂ ಸಂಸ್ಥೆಯ ಭವಿಷ್ಯದ ಯೋಜನೆಯನ್ನು ಆಧರಿಸಿ ಆ ಸಂಸ್ಥೆಯು ತನ್ನ ಕಾಲೇಜಿನ ಶುಲ್ಕವನ್ನು ತಾನೇ ನಿಗದಿಗೊಳಿಸಿಕೊಳ್ಳಬಹುದು -ತಕ್ಕಮಟ್ಟಿಗಿನ ಲಾಭವನ್ನು ಮಾಡಿಕೊಳ್ಳಬಹುದು" ಎಂದು ಅಮೋಘ ತೀರ್ಪು ನೀಡುತ್ತಿರುವಾಗ ಬಂಡವಾಳಶಾಹಿಗಳ ಹಿತಕಾಯಲು ಕಟಿಬದ್ಧವಾದ ಸರ್ಕಾರವೊಂದರಿಂದ ಏನನ್ನು ತಾನೇ ನಿರೀಕ್ಷಿಸಲು ಸಾಧ್ಯ.

ಸುಪ್ರಿಂಕೋರ್ಟ್ ತೀರ್ಪು ತಮ್ಮ ಪರವಾಗಿದ್ದರೂ ರಾಜ್ಯದಲ್ಲಿ ದಲಿತ-ಗ್ರಾಮೀಣ ಇತರೆ ವಿಭಾಗದ ವಿದ್ಯಾರ್ಥಿಗಳಿಗೆ ಶೇ 25 ರಷ್ಟು ಮೀಸಲಾತಿ ನೀಡುವುದಾಗಿ ಇತ್ತೀಚಿಗೆ ಕಾಮೆಡ್-ಕೆ ತಿಳಿಸಿದೆ. ಚಳುವಳಿಯ ಭಯ- ತಮಗೂ ಜನರ ಬಗೆಗೆ ಕಾಳಜಿ ಇದೆ ಎಂದು ತೋರಿಸಿಕೊಳ್ಳುವ ತಂತ್ರವಾಗಿರುವುದರ ಜೊತೆಗೆ ಇದು, ಉಳಿದ ಶೇ. 75 ಸೀಟುಗಳಲ್ಲಿ ನಮ್ಮ ತಂಟೆಗೆ ಯಾರೂ ಬರಬೇಡಿ-ಎಂಬ ಸಂದೇಶವನ್ನು ನೀಡುತ್ತಿದೆ. ಮಾತ್ರವಲ್ಲ ಶೇ. 25 ಸೀಟುಗಳ ಶುಲ್ಕ ಸ್ವರೂಪದ ಬಗ್ಗೆ ಇವರು ತುಟಿ ಬಿಚ್ಚಿಲ್ಲ ಎಂಬುದನ್ನು ಗಮನಿಸಬೇಕು.

ಜನಪರ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವಲ್ಲಿ ವಿಫಲವಾಗಿರುವ ರಾಜಕೀಯ ವ್ಯವಸ್ಥೆಯನ್ನು ಕಾರ್ಯಾಂಗ-ಶಾಸಕಾಂಗದ ಸ್ಥಾನವನ್ನು ಆಕ್ರಮಿಸುತ್ತಾ ನಿರಂತರವಾಗಿ ಶಿಕ್ಷಣ ವ್ಯಾಪಾರೀಕರಣಕ್ಕೆ ಕುಮ್ಮಕ್ಕು



ವಿದ್ಯಾರ್ಥಿಗಳ ಪ್ರತಿಭಟನೆ

ನೀಡುವಂತಹ ತೀರ್ಪು ನೀಡುತ್ತಿರುವ ನ್ಯಾಯಾಂಗ ವ್ಯವಸ್ಥೆಯನ್ನು ಅವುಗಳ ಕಿವಿ ಹಿಂಡಿ ಸರಿದಾರಿಗೆ ತರುವ ಪರಮಾಧಿಕಾರವಿರುವುದು ಈ ದೇಶದ ಜನತಾ ನ್ಯಾಯಾಲಯಕ್ಕೆ ಅಂದರೆ ಜನಾಂದೋಲನಕ್ಕೆ ಮಾತ್ರ. ಶಿಕ್ಷಣಪ್ರೇಮಿ ಜನತೆ ತುರ್ತಾಗಿ ಈ ಕೆಲಸ ಮಾಡಬೇಕಿದೆ.

○

ಮಣಿಯವರಿಗೆ ಭಾವಪೂರ್ಣ ಶ್ರದ್ಧಾಂಜಲಿ

ಪುಟ 2 ರಿಂದ

ಹಾಗೂ ವಿದ್ಯಾರ್ಥಿಗಳಿಗಾಗಿ ಅವರಿಂದ ನಿರ್ಮಾಣವಾದ ವಿದ್ಯಾರ್ಥಿ ನಿಲಯಗಳು ಇವೆಲ್ಲವುಗಳನ್ನು ನೆನಪಿಸಿದರು.

ಜೆ.ಡಿ.ಎಸ್.ನ ಕೆ.ರಾಜೇಂದ್ರನ್ ಹಾಗೂ ಕಾಂಗ್ರೆಸ್‌ನ ಸಂಪತ್ ಕುಮಾರ್‌ರವರು ಅವರ ಸರಳ ಜೀವನದ ಬಗ್ಗೆ ಮಾತಾಡಿದರು. ಸಂಪತ್‌ರವರು ಕಾಂ. ಟಿ.ಎಸ್.ಅವರ ಸರಳ ಜೀವನವನ್ನು ತ್ರಿಪುರಾದ ದಿ. ಕಾಂ. ನೃಪೇನ್ ಚಕ್ರವರ್ತಿಯವರಿಗೆ ಹೋಲಿಸಿದರು.

ಸಿಐಟಿಯು ರಾಜ್ಯ ಮುಖಂಡರಾದ ಕಾಂ. ವರಲಕ್ಷ್ಮಿಯವರು ಕಾಂ. ಟಿ.ಎಸ್.ರವರ ಸಾಧನೆಯ ಹಿಂದೆ ಅವರ ಪತ್ನಿ ಹಾಗೂ ಮಗಳ ಪಾತ್ರದ ಬಗ್ಗೆ ಹೇಳಿದರು. ಮುಂಬರುವ ಹೋರಾಟಗಳನ್ನು ಕೆ.ಜಿ.ಎಫ್.ನಲ್ಲಿ ಯಶಸ್ವಿಗೊಳಿಸುವುದೇ ಕಾಂ. ಟಿ.ಎಸ್.ರವರಿಗೆ ನಿಜವಾಗಿಯೂ ನಾವು ಅರ್ಪಿಸುವ ಶ್ರದ್ಧಾಂಜಲಿಯಾಗಿದೆ ಎಂದರು.

ಸ್ಥಳೀಯ ಶಾಸಕರಾದ ಎಸ್.ರಾಜೇಂದ್ರನ್‌ರವರು ಯಾರೂ ಕೂಡಾ ಬೆರಳೆತ್ತಿ ಏನೂ ಹೇಳಲು ಸಾಧ್ಯವಿಲ್ಲದ ಸರಳ, ಧೀಮಂತ ವ್ಯಕ್ತಿ ಕಾಂ. ಟಿ.ಎಸ್. ಮಣಿಯವರು. ಅವರ ನಿಧನದಿಂದ ಕೆ.ಜಿ.ಎಫ್.ಗೆ ತುಂಬಲಾರದ ನಷ್ಟವಾಗಿದೆ.. ಒಬ್ಬ ಒಳ್ಳೆಯ ಮಾರ್ಗದರ್ಶಕನನ್ನು ನಾವು ಕಳೆದುಕೊಂಡಿದ್ದೇವೆಂದರು.

ಕಾಂ. ಗಾಂಧೀನಗರ ನಾರಾಯಣಸ್ವಾಮಿಯವರು ವಯಸ್ಸಿನಲ್ಲಿ ಕಿರಿಯವನಾಗಿದ್ದರೂ ಕಾಂ. ಮಣಿಯವರೊಂದಿಗೆ ತಮಗಿದ್ದ ಅನ್ಯೋನ್ಯತೆಯ ಬಗ್ಗೆ ಮಾತಾಡಿದರು. ಪಕ್ಷವನ್ನು ಬಲಿಷ್ಟವಾಗಿ ಕಟ್ಟುವುದೇ ಅವರಿಗೆ ಅರ್ಪಿಸುವ ನಿಜವಾದ ಶ್ರದ್ಧಾಂಜಲಿ ಎಂದರು.

ಬಿ.ಇ.ಎಂ.ಎಲ್.ನ ಜೆ.ಎ.ಸಿ. ಮುಖಂಡ ಕಾಂ. ಸಿ.ವೇಣುಗೋಪಾಲನ್ ಮಾತಾಡಿ ಬಿ.ಇ.ಎಂ.ಎಲ್. ಕಾರ್ಮಿಕರ ಸಂಘಟನೆಗೆ ಆರಂಭದಿಂದಲೂ ಕಾಂ.ಟಿ.ಎಸ್.ಮಣಿಯವರು ಬೆಂಬಲ ಮತ್ತು ಮಾರ್ಗದರ್ಶನಗಳನ್ನು ನೀಡುತ್ತಾ ಬಂದಿದ್ದಾರೆ. 1973ರಲ್ಲಿ ನಡೆದ ಗೋಲಿಬಾರ್‌ನಲ್ಲಿ ಒಬ್ಬ ಸಂಗಾತಿ ಮಡಿದು ಹಲವಾರು ಸಂಗಾತಿಗಳು ಬಂಧನಕ್ಕೊಳಗಾದಾಗ ಕಾಂ. ಟಿ.ಎಸ್.ಮಣಿಯವರು ನಮ್ಮನ್ನು ಬಿಡುಗಡೆಗೊಳಿಸಲು ಶ್ರಮಿಸಿದರು. ಇಂದು ಸಾರ್ವಜನಿಕ ಉದ್ದಿಮೆಗಳ ಮೇಲೆ ಧಾಳಿ ನಡೆಯುತಿರುವ ಸಂದರ್ಭದಲ್ಲಿ ಎಡ ಪಕ್ಷಗಳೇ ಆಶಾಕಿರಣ, ಸಿಪಿಐ(ಎಂ) ಪಕ್ಷವನ್ನು ಬೆಳೆಸುವುದರ ಮೂಲಕ ಕಾಂ. ಟಿ.ಎಸ್.ಮಣಿಯವರ ಆಶಯಗಳನ್ನು ಮುಂದಕ್ಕೊಯ್ಯಬೇಕೆಂದರು.

ಮಾಜೀ ಶಾಸಕ ಎಂ. ಭಕ್ತವತ್ಸಲಂ ರವರು ಕಾಂ. ಟಿ.ಎಸ್.ಮಣಿಯವರಿಂದ ಹಲವಾರು ಮಾರ್ಗದರ್ಶನಗಳನ್ನು, ಅನುಭವಗಳನ್ನು ನಾನು ಪಡೆದಿದ್ದೇನೆ. ಕೆಜಿಎಫ್‌ನಲ್ಲಿ ಭಾಷೆಯ ಸಮಸ್ಯೆ ಭುಗಿಲೆದ್ದಾಗ ಕಾಂ. ಟಿ.ಎಸ್.ಮಣಿಯವರು ತುಂಬಾ ಮುತುವರ್ಜಿಯಿಂದ ಅದನ್ನು ಬಗೆಹರಿಸುವ ದಿಕ್ಕಿನಲ್ಲಿ ಉತ್ತಮ ಕಾರ್ಯ ನಿರ್ವಹಿಸಿದ್ದಾರೆ. ಅವರು ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗುವಾಗ ನಾನು ಜೊತೆಯಲ್ಲಿದ್ದೆ. ಕೆ.ಜಿ.ಎಫ್. ನಗರಸಭೆ ವ್ಯಾಪ್ತಿಯಲ್ಲಿ ಬರುವ ಯಾವುದಾದರೂ ಒಂದು ರಸ್ತೆಗೆ ಕಾಂ. ಟಿ.ಎಸ್.ಮಣಿಯವರ ಹೆಸರನ್ನು ಇಡಲು ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು.

ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ, ಶಾಸಕ ಕಾಂ. ಜಿ.ವಿ.ಶ್ರೀರಾಮರೆಡ್ಡಿಯವರು ಮಾತಾಡಿ ಕಾಂ. ಮಣಿಯವರು ಕಮ್ಯೂನಿಸ್ಟ್ ಪಕ್ಷದ ಮುಖಂಡರಾಗಿ ಬೆಳೆದು ನಿಂತವರು. ಸಿಪಿಐ(ಎಂ)ನ ಮುಖಂಡನಾಗುವುದೆಂದರೆ ಸುಲಭದ ವಿಷಯವಲ್ಲ. ತ್ಯಾಗ ಬಲಿದಾನಗಳಿಗೆ ಸಿದ್ಧವಿರುವವರು ಮಾತ್ರ ಇಲ್ಲಿ ಮುಖಂಡರಾಗುತ್ತಾರೆ. ಕಾಂ. ಟಿ.ಎಸ್.ಮಣಿಯವರು ತಮ್ಮ ಮನೆ, ಹೆಂಡತಿ ಮಕ್ಕಳ ಬಗ್ಗೆ ಎಂದೂ ಯೋಚನೆ ಮಾಡಿದವರಲ್ಲ. ಅವರು ಶೋಷಿತರ ಬಗ್ಗೆ ಆಲೋಚಿಸುತ್ತಿದ್ದರು. ಹಲವಾರು ಸಮರಧೀರ ಹೋರಾಟಗಳನ್ನು ನಡೆಸಿ ಹತ್ತಾರು ವರ್ಷಗಳ ಕಾಲ ಜೈಲುವಾಸ ಅನುಭವಿಸಿದ ಇತಿಹಾಸ ಇರುವುದು ಕಮ್ಯುನಿಸ್ಟ್ ಪಕ್ಷದ ಮುಖಂಡರಿಗೆ ಮಾತ್ರ. ಕಾಂ. ಟಿ.ಎಸ್.ಮಣಿಯವರಿಗೆ ಕೆ.ಜಿ.ಎಫ್.ನಲ್ಲಿ ಪಕ್ಷದ ಸ್ವಂತ ಕಛೇರಿಯನ್ನು ಕಟ್ಟಬೇಕೆಂಬ ಆಸೆಯಿತ್ತು. ಅದನ್ನು ನೆರವೇರಿಸಲು ಎಲ್ಲರೂ ಪಣ ತೊಡಬೇಕೆಂದರು.

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ. ಜಿ.ಎನ್.ನಾಗರಾಜ್ ಮಾತಾಡಿ, ಕೆ.ಜಿ.ಎಫ್. ಚಿನ್ನದ. ಗಣಿಯ ಚರಿತ್ರೆ ಹಾಗೂ ಕೆಂಬಾವುಟ ಹೋರಾಟಗಳ ಚರಿತ್ರೆಯನ್ನು ಹೇಳುತ್ತಾ ಹಲವಾರು ಸಂಗಾತಿಗಳು ಪೋಲೀಸರ ಗುಂಡೇಟಿಗೆ ಬಲಿಯಾದ, ವಿರೋಧಿಗಳಿಂದ ಕೊಲೆಯಾದ ನೆಲವಿದು, ಇಂತಹ ಪರಂಪರೆಯಿರುವ ಇಲ್ಲಿನ ಚಿನ್ನದ ಗಣಿಯನ್ನು ಪುನರಾರಂಭಿಸಲು ಕೆ.ಜಿ.ಎಫ್.ನ್ನು ಉಳಿಸಿ ಎಂಬ ಹೋರಾಟ ಭುಗಿಲೇಳಲಿ. ಇಂತಹ ಹೋರಾಟಗಳನ್ನು ಕೈಗೆತ್ತಿಕೊಳ್ಳುವುದರ ಮೂಲಕ ಮಣಿಯವರಿಗೆ ಶ್ರದ್ಧಾಂಜಲಿ ಅರ್ಪಿಸೋಣ. ಕೆ.ಜಿ.ಎಫ್. ಪ್ರದೇಶದ ಜನತೆಯ ಏಳಿಗೆಗಾಗಿ ದುಡಿದ ಕಾಂ. ಟಿ.ಎಸ್.ಮಣಿಯವರ ಕುಟುಂಬಕ್ಕೆ ಇಲ್ಲಿನ ಕಾರ್ಮಿಕ ವರ್ಗ ಆಸರೆಯಾಗಿ ನಿಲ್ಲಬೇಕೆಂದರು.

ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಕಾಂ. ಪಿ.ಆನಂದರಾಜ್‌ರವರು ಸ್ವಾಗತ ಬಯಸಿದರು. ಕಾರ್ಯ ಕಲಾಪಗಳನ್ನು ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಜಿ.ಅರ್ಜುನನ್‌ರವರು ನಡೆಸಿಕೊಟ್ಟರು.

ಸಭೆಯ ಆರಂಭದಲ್ಲಿ ಕಾಂ. ವೈ.ಚಂದ್ರನ್, ಶ್ರೀಮತಿ ಕೃಪಾವತಿಯವರು ತಮಿಳಿನಲ್ಲಿ ಹಾಗೂ ಕಾಂ. ಎಲ್.ರಾಮಚಂದ್ರ ಕನ್ನಡದಲ್ಲಿ ಶ್ರದ್ಧಾಂಜಲಿ ಗೀತೆಗಳನ್ನು ಹಾಡಿದರು.

ಶ್ರದ್ಧಾಂಜಲಿ ಕಾರ್ಯಕ್ರಮದ ಕೊನೆಯಲ್ಲಿ ಪಕ್ಷದ ತಾಲೂಕು ಸಮಿತಿ ಸದಸ್ಯರಾದ ಕಾಂ. ಎ.ಆರ್.ಬಾಬುರವರು ವಂದನಾರ್ಪಣೆ ಮಾಡಿದರು.

○

IMF-WB-WTOಗಳ ಜಾಗತೀಕರಣ ಲೀಲೆ

ಬಡ ಆಫ್ರಿಕಾ ದೇಶಗಳಿಗೆ ಸಾಲ ಮನ್ನಾ- ಹರಕೆ ಕುರಿಯ ಕೊರಳಿಗೆ ಬಿದ್ದಿದೆ ಹೂಮಾಲೆ

ಜಗತ್ತಿನ ಯಾವುದಾದರೂ ಬಡ ದೇಶದ ಸಾಲ ಸಂಪೂರ್ಣ ಮನ್ನಾ ಆದರೆ ಸಂತೋಷ ಪಡಬೇಕೆ? ಇಲ್ಲಾ ದುಃಖ ಪಡಬೇಕೆ? ಜಾಗತೀಕರಣದ ದುಷ್ಟ ಹುನ್ನಾರಗಳನ್ನು ಬಲ್ಲವರು ಈ ಬಗ್ಗೆ ಸಂತಸಪಡುವುದು ಸಾಧ್ಯವಿಲ್ಲ. 'ಇದು ಜಾಗತೀಕರಣದ ವಿನಾಶ ಲೀಲೆ - ಬಡ ಆಫ್ರಿಕಾ ದೇಶಗಳ ಸಾಲ ಮನ್ನಾ ಮೂಲಕ ಹರಕೆ ಕುರಿಯ ಕೊರಳಿಗೆ ಬಿದ್ದಂತಾಗಿದೆ ಹೂಮಾಲೆ' ಎನ್ನುತ್ತಿದೆ ತಜ್ಞರ ವಿಶ್ಲೇಷಣೆ. ಈ ವಿಶ್ಲೇಷಣೆಯ ವಿವರ - ಮಾಹಿತಿ ಇಲ್ಲಿದೆ.

ಇದೀಗ ತೀವ್ರಗೊಂಡಿದೆ ಐಎಂಎಫ್-ವಿಶ್ವಬ್ಯಾಂಕ್-ಡಬ್ಲ್ಯುಟಿಒಗಳ ಜಾಗತೀಕರಣ ಲೀಲೆ. ಬಹುತೇಕ ಆಫ್ರಿಕಾ ಖಂಡಕ್ಕೆ ಸೇರಿದ ಕಡು ಬಡದೇಶಗಳ ಸಾಲಗಳನ್ನು ಮನ್ನಾ ಮಾಡಲಾಗುವುದಂತೆ! ಜಿ-8 ಗುಂಪಿಗೆ ಸೇರಿದ ಬಂಡವಾಳಶಾಹಿ ದೇಶಗಳು ಇತ್ತೀಚೆಗೆ ಇಂಗ್ಲೆಂಡಿನಲ್ಲಿ ಸಭೆ ಸೇರಿದ್ದ ಸಂದರ್ಭದಲ್ಲಿ ಈ ಕುರಿತು ತೀರ್ಮಾನಕ್ಕೆ ಬಂದಿವೆ.

ಇಂಥ ಪ್ರಸ್ತಾಪವೊಂದು ಬಂದದ್ದೆ ತಡ ಜಗತ್ತಿನ ಸಮೂಹ ಮಾಧ್ಯಮಗಳಲ್ಲಿ ಸುದ್ದಿಯೋ ಸುದ್ದಿ. ಪ್ರಚಾರದ ಅಬ್ಬರ. 'ಅಂತರ ರಾಷ್ಟ್ರೀಯ ರಾಜಕಾರಣದಲ್ಲಿ ಸಾಮಾಜಿಕ ನ್ಯಾಯದ ಹೊಸ ಶಕೆಯೇ ಆರಂಭಗೊಂಡಿದೆ' ಎಂಬಂತಹ ಭ್ರಮೆಗಳನ್ನು ಬಿತ್ತರಿಸಲಾಗುತ್ತಿದೆ. "ಮೇಕ್ ಪಾವರ್ಟಿ ಹಿಸ್ಟರಿ (ಎಂಪಿಹೆಚ್) ಕೊ-ಅಲಿಷನ್ ಆಫ್ ನಾನ್ ಗವರ್ನಮೆಂಟಲ್ ಆರ್ಗನೈಸೇಷನ್' ಎಂಬ ಒಕ್ಕೂಟದ ಪ್ರಮುಖ ಶಕ್ತಿಯಾಗಿರುವ 'ಓಕ್ಸ್ ಫಾಮ್' ಮತ್ತು 'ಬಾಬ್ ಗೆಲ್ಡೊಫ್' ಮತ್ತು 'ಬೋನೋ' ಮುಂತಾದ ಹಲವು ಅಂತರರಾಷ್ಟ್ರೀಯ ಸ್ವಯಂ ಸೇವಾ ಸಂಘಟನೆಗಳು ಇಂತಹ ಆಸೆಗಳಿಗೆ ರೆಕ್ಕೆಪುಕ್ಕ ಹಚ್ಚುತ್ತಿವೆ.

ಇಂದು ಬಡತನದ ಬೇಗೆಯಲ್ಲಿ ಬೇಯುತ್ತಿರುವ ಆಫ್ರಿಕಾ ದೇಶಗಳ ಸಾಲ ಮನ್ನಾ ಮಾಡುವುದನ್ನು ವಿರೋಧಿಸಬೇಕಾಗಿಲ್ಲ. ಆದರೆ ಸಾಲ ಮನ್ನಾ ಆಗಿದೆ ಎಂಬ ಬಗ್ಗೆ ಸಂಭ್ರಮ ಪಡಬೇಕಾದ ಪರಿಸ್ಥಿತಿ ಇದೆಯೇ ಎಂಬುದು ಮುಖ್ಯವಾದ ಪ್ರಶ್ನೆ.

ಬಡತನ-ಹಸಿವು-ಸಾವು ಭಾರತದಲ್ಲಿಯೂ ಇವೆ. ಆದರೆ ಆಫ್ರಿಕಾ ದೇಶಗಳ ಬಡತನದ ಸ್ವರೂಪ ಮತ್ತೂ ಭೀಕರವಾದದ್ದು. ಎದೆ ಬತ್ತಿಹೋದ ಲಕ್ಷ ಲಕ್ಷ ತಾಯಂದಿರು. ತಿನ್ನಲು ಅನ್ನವಿಲ್ಲದೆ ಅಸ್ಥಿಪಂಜರವೇ ಆಗಿ ಸಾವಿನ ಮನೆಯ ಕದ ತಟ್ಟುತ್ತಾ ಬಿದ್ದಿರುವ ಸಾಲುಸಾಲು ಮನುಷ್ಯ ದೇಹಗಳು. ಅಲ್ಲಿಯ ಬಡವರ ಮಕ್ಕಳೋ! ಅಪೌಷ್ಟಿಕತೆ, ಹಸಿವಿನಿಂದ ಸೀಗೆ ಕಡ್ಡಿಯಂತಾಗಿರುವ ಕೈಕಾಲುಗಳು, ಸೋರೆ ಬುರುಡೆಯಂತೆ ಊದಿಕೊಂಡ ಹೊಟ್ಟೆ, ಕರುಣಾಜನಕ ಚಿತ್ರ. ಕರುಳು ಹಿಂಡುವ ಇಂತಹ ಚಿತ್ರಗಳನ್ನು ಇಥಿಯೋಪಿಯಾ, ಸೋಮಾಲಿಯಾ, ರುವಾಂಡ ಮುಂತಾದ ದೇಶಗಳ ಜನರ ಭೀಕರ ಬವಣೆಗಳನ್ನು ಕಂಡವರಿಗೆ ಕೂಡ ಆಫ್ರಿಕಾ ದೇಶಗಳಿಗೆ ಸಾಲ ಮನ್ನಾ ಮಾಡುವ ಈ ಜಿ-8 ರಾಷ್ಟ್ರಗಳ ಪ್ರಸ್ತಾವನೆಗಳಿಂದ ಭಾರಿ ಸಂತಸ ಪ್ರಡುವಂತಹದ್ದೇನಿಲ್ಲ ಎಂಬುದು ಮನವರಿಕೆಯಾಗಬೇಕಾಗಿದೆ. ಈಗಾಗಲೇ ಇಂತಹ ಘೋರ ಸ್ಥಿತಿಯನ್ನು ತಲುಪಿರುವ ಆಫ್ರಿಕಾ ದೇಶಗಳ ಜನತೆ 'ಸಾಲ ಮನ್ನಾ' ಎಂಬ ಹೊಸ ಔದಾರ್ಯದ ಉರುಳಿಗೆ ಸಿಕ್ಕಿ ಬೀಳಿಕೊಳ್ಳಬೇಕಾಗಿರುವ ಇನ್ನಷ್ಟು "ಉದಾರಕರಣ" ಬಲು ಘೋರವಾಗಲಿದೆ.

ಆಫ್ರಿಕಾದ ನೆಲದ ಮೇಲೆ ಈಗಾಗಲೇ ಪ್ರೇತ ನೃತ್ಯ ನಡೆಸಿರುವ ಈ ಜಾಗತೀಕರಣ ಉದಾರೀಕರಣ ಈಗ ಇನ್ನಷ್ಟು ತೀವ್ರಗೊಂಡು ಈ ದೇಶಗಳೊಳಗೆ ಎಂತೆಂತಹ ಆಕ್ರಂದನಗಳನ್ನು ಸೃಷ್ಟಿಸಲಿದೆಯೋ ಎಂದು ಆತಂಕ ಪಡಬೇಕಾಗಿದೆ ಅಷ್ಟೆ.

ಬ್ರಿಟನ್‌ನ ಉಪ ಪ್ರಧಾನಿ (ಗೋರ್ಡೊನ್ ಬ್ರೋನ್) "ಜಗತ್ತಿನ ಶ್ರೀಮಂತ ಮತ್ತು ಬಡದೇಶಗಳ ನಡುವೆ ಹೊಸದಾದ ಮತ್ತು ಉತ್ತಮ ಸಂಬಂಧ ಹೊಂದುವ ಜಗತ್ತಿನ ನಾಯಕರ ಉದ್ದೇಶ"ದ ಕುರಿತು ಹೇಳಿರುವ ಮಾತನ್ನು ದೇಶ-ದೇಶಗಳನ್ನೇ ಇಡಿಯಾಗಿ ಹಿಡಿದು ಹಿಂಡಿ ಹಿಪ್ಪೆ ಮಾಡುವ ಸಾಮ್ರಾಜ್ಯಶಾಹಿಯ ಬಗೆಗೆ ಕನಿಷ್ಟ ಪ್ರಜ್ಞೆ ಇರುವವರಾದರೂ ನಂಬುವುದು ಸಾಧ್ಯವಿಲ್ಲ. ಈ ಶ್ರೀಮಂತ ರಾಷ್ಟ್ರಗಳು ತಾವು ಶ್ರೀಮಂತರಾಗಿರುವುದು- ಈ ಆಫ್ರಿಕಾ-ಏಷ್ಯಾದಂತಹ ದೇಶಗಳ ಮೇಲೆ ತಮ್ಮ ಗುಲಾಮಗಿರಿಯನ್ನು ಹೇರುವ ಮೂಲಕ. ಈ ದೇಶಗಳು ಬಡ ದೇಶಗಳಾಗಿರುವುದೇ ಆ ದೇಶಗಳು ಶ್ರೀಮಂತ ದೇಶಗಳಾಗುವುದಕ್ಕೆ ಇರುವ ಪ್ರಮುಖ ಕಾರಣ ಎಂಬ ಜಗತ್ತಿನ ಚರಿತ್ರೆ ಮತ್ತು ವಸಾಹತುಶಾಹಿ ಸುಲಿಗೆಯ ಬಗೆಗೆ ಗೊತ್ತಿದ್ದವರಿಗಂತೂ ಇದರಲ್ಲಿ ಸಂತಸ ಪಡುವುದೇನಿದೆ? ಹರಕೆ ಕುರಿಯ ಕಿವಿಗೆ ಹೂ ಮುಡಿಸಿ -ತಲೆ ಮೇಲೆ ನೀರು ಚಿಮುಕಿಸಿದಂತೆ ಕಾಣುತ್ತಿದೆ ಈಗಿನ ಪರಿಸ್ಥಿತಿ.

ಈ "ಮೇಕ್ ಪಾವರ್ಟಿ ಹಿಸ್ಟರಿ" ಒಕ್ಕೂಟವು ಆಫ್ರಿಕಾದ ದೇಶಗಳಿಗೆ 'ಸಾಲ ಮನ್ನಾ' ಮಾಡಲು ಮತ್ತು ಮತ್ತಷ್ಟು ಉತ್ತಮ ಸಹಾಯ ಮಾಡಲು ಹಾಗೂ ಶ್ರೀಮಂತ ದೇಶಗಳು ಹಾಗೂ ಬಡದೇಶಗಳ ನಡುವೆ ನಡೆಯುವ ವ್ಯಾಪಾರದಲ್ಲಿ 'ವ್ಯಾಪಾರ ನ್ಯಾಯ' ಅನುಸರಿಸಲು ಒತ್ತಾಯಿಸುತ್ತಿದೆ.

ಈ ಎಂ.ಪಿ.ಹೆಚ್. ಒಕ್ಕೂಟ ಪೂರ್ಣ ಸಾಲ ಮನ್ನಾ ಜೊತೆಗೆ ಸಾಲ ಮನ್ನಾ ಷರತ್ತು ಮುಕ್ತವಾಗಿರಬೇಕು ಎಂದು ಒತ್ತಾಯಿಸಿದೆ. ಆದರೆ ಈ ಸ್ವಯಂ ಸೇವಾ ಸಂಘಟನೆಗಳೇ ಗುರುತಿಸಿರುವಂತೆ ಈಗಿನ ಸಾಲ ಮನ್ನಾ ಎಂಬುದು ಷರತ್ತು ರಹಿತವಾಗಿಲ್ಲ. ಬದಲಿಗೆ ಆಫ್ರಿಕಾದ ಬಡ ದೇಶಗಳೂ ಎಂದೆಂದಿಗೂ ಬಡದೇಶಗಳೇ ಆಗಿ ಉಳಿಯಬೇಕಾದಂತಹ ದೊಡ್ಡ ಸಂಚಿನ ಷರತ್ತುಗಳಿಂದ ಕೂಡಿವೆ. ಈ ಸಾಲ ಮನ್ನಾದ ಷರತ್ತುಗಳಾಗಿ ಈ ಆಫ್ರಿಕಾದ ಬಡದೇಶಗಳು ತಮ್ಮ ದೇಶದಲ್ಲಿ ಜನರ ಮೂಲಭೂತ ಅಗತ್ಯಗಳಾದ ವಿದ್ಯುತ್, ನೀರು, ಸಾರಿಗೆ, ದೂರಸಂಪರ್ಕ ಇತ್ಯಾದಿ ಎಲ್ಲ ಸೇವೆಗಳನ್ನು ಖಾಸಗೀಕರಿಸಬೇಕಾಗಿದೆ. ಈ ಸಾಲ ಮನ್ನಾದ ಕೃಪೆ ಆಫ್ರಿಕಾ ದೇಶಗಳಿಗೆ ದೊರೆಯಬೇಕಾದರೆ ಈ ದೇಶಗಳು ತಮ್ಮ ಬಜೆಟ್‌ನಲ್ಲಿ ಶಿಕ್ಷಣಕ್ಕೆ - ಆರೋಗ್ಯಕ್ಕೆ ಹಣವನ್ನು - ಬಜೆಟ್‌ನ ಹಣಕಾಸು ಬೆಂಬಲವನ್ನು ಕಡಿತ ಮಾಡಬೇಕಾಗಿದೆ. ಸ್ಥಳೀಯ ಮತ್ತು ವಿದೇಶಿ ಖಾಸಗಿ ಬಂಡವಾಳಕ್ಕೆ ಇರುವ ಎಲ್ಲಾ ಅಡೆತಡೆ ನಿವಾರಿಸಿ ಮುಕ್ತ ಅವಕಾಶಗಳನ್ನು ನಿರ್ಮಿಸಿ ಕೊಡಬೇಕಿದೆ. ಇದೇ 'ಸಾಲ ಮನ್ನಾ'ಕ್ಕೆ ಬೇಕಾದ ಅರ್ಹತೆ.



ಇತ್ತ ಬಹಳಷ್ಟು ಸ್ವಯಂ ಸೇವಾ ಸಂಘಟನೆಗಳು ಈ ಸಾಲ ಮನ್ನಾವನ್ನು ಐತಿಹಾಸಿಕ -ಅಭೂತಪೂರ್ವ ಎಂದೆಲ್ಲಾ ಕೊಂಡಾಡುತ್ತಿದ್ದರೆ ಅತ್ತ ಶ್ರೀಮಂತ ದೇಶಗಳು ತಮಗೆ ಅಪ್ಯಾಯಮಾನವಾದ 'ವ್ಯಾಪಾರೀ ಉದಾರೀಕರಣ' ವನ್ನು ಹೇರಿ ಆಫ್ರಿಕಾ ದೇಶಗಳಲ್ಲಿ ಅಳುದುಳಿದಿರುವ ಬಡವರನ್ನೂ ಹೇಗೆ ನಿರ್ಮೂಲನ ಮಾಡಬಹುದೆಂದು ಬಾಯಿ ಚಪ್ಪರಿಸುತ್ತಿವೆ.

ಈಗ ಯುರೋಪಿನ ಒಕ್ಕೂಟವು ಆಫ್ರಿಕ - ಕೆರಿಬಿಯ ಮತ್ತು ಫೆಸಿಫಿಕ್ (ಎಸಿಪಿ)ನ ಒಟ್ಟು 77 ದೇಶಗಳೊಂದಿಗೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ಹೊಂದಿದೆ. ಈ ಒಪ್ಪಂದದ ಪ್ರಕಾರ ಈ ಶ್ರೀಮಂತ ದೇಶಗಳು ಈ ಎಸಿಪಿ ದೇಶಗಳ ಉತ್ಪನ್ನಗಳಿಗೂ ಸಹ ತಮ್ಮ ದೇಶದ ಮಾರುಕಟ್ಟೆಗೆ ಬರಲು ಅವಕಾಶ ನೀಡಬೇಕು. ಆದ್ಯತೆ ನೀಡಬೇಕು. ಆದರೆ ಈಗ ಈ ಒಪ್ಪಂದದ ಬದಲು ಆ ಜಾಗದಲ್ಲಿ ಹೊಸ 'ಮುಕ್ತ ವ್ಯಾಪಾರ'ದ ಒಪ್ಪಂದ ಜಾರಿಗೆ ಬರಲಿದೆ. ಅಂದರೆ ಈ ಬಡದೇಶಗಳ ಪರವಾಗಿ ಇದ್ದ ಅಲ್ಪಸ್ವಲ್ಪ ರಕ್ಷಣಾತ್ಮಕ ಅವಕಾಶಗಳು ಕೈತಪ್ಪಿಹೋಗುತ್ತಿವೆ. ನೂರಾರು ವರ್ಷಗಳ ವಸಾಹತುಶಾಹಿ ಸುಲಿಗೆಯಿಂದ ಮತ್ತು ತಮ್ಮ ತಮ್ಮ ದೇಶಗಳ ದುಡಿಯುವ ವರ್ಗಗಳ ಶೋಷಣೆಯಿಂದ ಕೊಬ್ಬಿ ಕೆನೆಯುತ್ತಿರುವ ಈ ಶ್ರೀಮಂತ ಬಂಡವಾಳಶಾಹಿ ದೇಶಗಳ ಉದ್ದಿಮೆದಾರರು ರಫ್ತುದಾರರು ಆಳುವ ಸರ್ಕಾರಗಳಿಂದಲೂ ಅಪಾರ ಪ್ರಮಾಣದ ಸಬ್ಸಿಡಿಗಳನ್ನು ಕಬಳಿಸಿಕೊಂಡು, ಸರ್ಕಾರದ ರಕ್ಷಣೆಯನ್ನು ಪಡೆದುಕೊಂಡು, ನುಗ್ಗಿ ಮುಗಿಬೀಳಲು ಎಲ್ಲಿದೆ ಅವಕಾಶ ಎಂದು ತುದಿಗಾಲ ಮೇಲೆ ತೊಯ್ದಾಡುತ್ತಾ ನಿಂತಿದ್ದಾರೆ. ಇಂತಹ ಬಲಾಢ್ಯ ಉದ್ದಿಮೆಗಳ ಉತ್ಪನ್ನಗಳು ಈ ಆಫ್ರಿಕಾದ ಬಡ ದೇಶಗಳ ಮಾರುಕಟ್ಟೆಗೆ ನುಗ್ಗಿದರೆ ಬಾಳೆಯ ತೋಟಕ್ಕೆ ಆನೆಯು ನುಗ್ಗಿದಂತಾಗುತ್ತದಷ್ಟೆ. ಶ್ರೀಮಂತ ದೇಶಗಳ ಉತ್ಪನ್ನಗಳ ವೈವಿಧ್ಯಮಯತೆ ಪ್ರಚಾರ ತಂತ್ರಗಳ ಎದುರು ಸ್ಥಳೀಯ ಉತ್ಪನ್ನಗಳು ಹಾಗೂ ಉದ್ದಿಮೆ - ಕೈಗಾರಿಕೆಗಳು ಬಿರುಗಾಳಿಗೆ ಸಿಕ್ಕ ತರಗೆಲೆಗಳಂತೆ ಉದುರಿ ನೆಲಕಚ್ಚುವ ಸಾಧ್ಯತೆಯೇ ಅಧಿಕ. ಇಂತಹ ಸಾಧ್ಯತೆಗಳ ಬಗೆಗೆ 'ಕ್ರಿಶ್ಚಿಯನ್ ಎಯ್ಡ್' ಎಂಬ ಸಂಸ್ಥೆಯೊಂದು ಖಚಿತ ಅಧ್ಯಯನ ಮತ್ತು ಸಮೀಕ್ಷೆಯ ಆಧಾರದಲ್ಲಿ ಎಚ್ಚರಿಕೆ ನೀಡಿದೆ.



ಈ ಮಧ್ಯೆ ಅಮೇರಿಕಾ ದೇಶವೂ ಸಹ ತನ್ನ ದೇಶದ ಕಾರ್ಪೋರೇಟ್ ಸಂಸ್ಥೆಗಳನ್ನು ಈ ಆಫ್ರಿಕಾದ ಮಾರುಕಟ್ಟೆಗೆ ನುಗ್ಗಿಸುವುದಕ್ಕೆ ಪೂರಕವಾಗಿ ಆಫ್ರಿಕಾ ದೇಶಗಳೊಂದಿಗೆ ದ್ವಿಪಕ್ಷಿಯ ಒಪ್ಪಂದಕ್ಕೆ ಮುಂದಾಗಿದೆ.

ಆಫ್ರಿಕಾ ಮತ್ತು ಆ ರೀತಿಯ ಬಡದೇಶಗಳು ಮತ್ತು ಮೂರನೇ ಜಗತ್ತಿನ ದೇಶಗಳು ಎಂದೆಂದಿಗೂ ಸ್ವಾವಲಂಬಿ ಗಳಾಗಬಾರದು, ಅವು ಎಂದೂ ಸಹ ಈ ಶ್ರೀಮಂತ ದೇಶಗಳ ಮೇಲೆಯೇ ಪರಾವಲಂಬಿಗಳಾಗಿರಬೇಕು ಎಂಬುದೇ ಶ್ರೀಮಂತ ಬಂಡವಾಳಶಾಹಿ ದೇಶಗಳ ಹುನ್ನಾರ. ತಾವು ಉತ್ಪಾದಿಸಿದ ಮಾಲುಗಳನ್ನು ಬಡ ದೇಶಗಳ ಮಾರುಕಟ್ಟೆಯಲ್ಲಿ ಅತ್ಯಂತ ಅಗ್ಗದ ಬೆಲೆಯಲ್ಲಿ (ಉತ್ಪಾದನಾ ವೆಚ್ಚಕ್ಕಿಂತಲೂ ಭಾರಿ ಅಗ್ಗದ ಬೆಲೆಯಲ್ಲಿ) ತಂದು 'ಸುರಿ'ಯಲು ಶ್ರೀಮಂತ ದೇಶಗಳ ಬಂಡವಾಳದಾರರಿಗೇನು ತಲೆ ಕೆಟ್ಟಿಲ್ಲ. ಹಾಗೇ ಮಾಡಿದರೆ ಅವರಿಗೆ ಸಿಗುವ ಲಾಭವಾದರೂ ಏನು?

ಇರಾಕ್-ಆಫ್ಘಾನಿಸ್ತಾನ ದೇಶಗಳ ಮೇಲೆ ಬಾಂಬ್‌ಗಳನ್ನು ಸುರಿದಂತಹ ಶಕ್ತಿಗಳೇ ಆಫ್ರಿಕಾದಂತಹ ಬಡದೇಶಗ ಳೊಳಗೆ ತಮ್ಮ ಅಗ್ಗದ ಉತ್ಪನ್ನಗಳನ್ನು ತಂದು ಸುರಿಯುತ್ತವೆ.

ಇದು ಕೇವಲ ವ್ಯಾಪಾರ- ವ್ಯವಹಾರದ ವಿಚಾರವಲ್ಲ. ಇದರ ಹಿಂದೆ ಗಂಭೀರ ರಾಜಕೀಯ-ಆರ್ಥಿಕ ಹುನ್ನಾರಗಳು ಅಡಗಿವೆ. ಬಡದೇಶಗಳ ಇರುವ ಅಲ್ಪಸ್ವಲ್ಪ ರಾಜಕೀಯ ಸಾರ್ವಭೌಮತೆಯನ್ನು ಆರ್ಥಿಕತೆಯನ್ನು ನಾಶಗೈದು ಅವುಗಳು ತಮ್ಮನ್ನೇ ಅವಲಂಬಿಸುವಂತೆ ಮಾಡುವ ಸ್ಪಷ್ಟ ರಾಜಕೀಯ ಹುನ್ನಾರಗಳು ಶ್ರೀಮಂತ ದೇಶಗಳದ್ದು. ಹೀಗಾಗಿ ಅಗ್ಗದ ಉತ್ಪನ್ನಗಳ ಜೊತೆಗೆ ಬಡದೇಶಗಳ ಮಾರುಕಟ್ಟೆಗೆ ದಾಂಗುಡಿ ಇಡಲು ಈ ಬಂಡವಾಳಶಾಹಿ ದೇಶಗಳ ಸರ್ಕಾರಗಳು ತಮ್ಮ ದೇಶದ ಉತ್ಪಾದಕರಿಗೆ ಉದ್ದಿಮೆದಾರರಿಗೆ - ರಫ್ತುದಾರರಿಗೆ ಲಕ್ಷಾಂತರ ಕೋಟಿ- ಬಿಲಿಯನ್ ಡಾಲರ್ ಗಟ್ಟಲೆ ಹಣವನ್ನು ಸಬ್ಸಿಡಿಯಾಗಿ ನೀಡುತ್ತದೆ. ಆಧರೆ ತಮ್ಮ ಊಟದ ಎಲೆಯ ಮೇಲೆ ಸತ್ತುಬಿದ್ದಿರುವ ಹೆಗ್ಗಣವನ್ನು ಮರೆಮಾಚಿಕೊಂಡು ಇತರರ ಎಲೆಗಳ ಮೇಲೆ ಬಿದ್ದಿರುವ ನೊಣವನ್ನು ತೋರಿಸಿದಂತೆ ಈ ದೇಶಗಳು ಬಡದೇಶಗಳ ಸರ್ಕಾರಗಳು ತಮ್ಮ ಉತ್ಪನ್ನಗಳಿಗೆ ಸಹಾಯಧನ ನೀಡಬಾರದೆಂದು ಆಗ್ರಹಿಸುತ್ತವೆ.

ಈ ಮುಂದಿನ ಅಂಕಿಸಂಖ್ಯೆಗಳು - ಮಾಹಿತಿಗಳು ಬಂಡವಾಳಶಾಹಿ ದೇಶಗಳ ವಂಚನೆಯ ವಿರಾಟ ಸ್ವರೂಪಕ್ಕೆ ಸಾಕ್ಷಿಯಾಗಿದ್ದು ಸಾಮ್ರಾಜ್ಯಶಾಹಿಯ ಈ ತಣ್ಣನೆಯ ಕ್ರೌರ್ಯ- ಸುಲಿಗೆಯ ಪರಿಚಯವಿಲ್ಲದ ಮುಗ್ದರನ್ನು ದಂಗು ಬಡಿಸುತ್ತವೆ.

- ಯುರೋಪಿಯನ್ ದೇಶದ ಪ್ರತಿಯೊಂದು ಹಸು ದಿನವೊಂದಕ್ಕೆ ತನ್ನ ದೇಶದ ಸರ್ಕಾರದಿಂದ ತಲಾ 3 ಡಾಲರ್ ಸಹಾಯಧನ (ಸಬ್ಸಿಡಿ) ಪಡೆಯುತ್ತದೆ. ಆದರೆ ಆಫ್ರಿಕಾ ದೇಶದಲ್ಲಿ ಜನರು ದಿನವೊಂದಕ್ಕೆ ಒಂದು ಡಾಲರ್‌ಗಿಂತಲೂ ಕಡಿಮೆ ಹಣದಲ್ಲಿ ಬದುಕು ದೂಡಬೇಕಾಗಿದೆ.
- ಶ್ರೀಮಂತ ದೇಶಗಳಿಂದ ಆಫ್ರಿಕಾಗೆ ನೀಡಲಾಗಿರುವ ಒಟ್ಟು ಸಹಾಯಧನ (ಎಯ್ಡ್) 22 ಬಿಲಿಯನ್ ಅಮೇರಿಕನ್ ಡಾಲರ್. ಆದರೆ ಬಲಾಢ್ಯ 30 ದೇಶಗಳ ಒಕ್ಕೂಟ (ಒಇಸಿಡಿ)ದ ದೇಶಗಳು ತಮ್ಮ ದೇಶದ ಉತ್ಪನ್ನಗಳ ರಫ್ತಿಗೆ ನೀಡಿದ ಸಹಾಯಧನ 350 ಬಿಲಿಯನ್ ಡಾಲರ್.
- ಅಮೇರಿಕಾ ಮಾತ್ರವೇ 2002ರಲ್ಲಿ 307 ಬಿಲಿಯನ್ ಡಾಲರ್‌ಗಳನ್ನು ತನ್ನ ದೇಶದ ಹತ್ತಿ ಕೃಷಿ ವ್ಯಾಪಾರಿಗಳಿಗೆ ನೀಡಿದೆ. ಅಮೇರಿಕಾ ಆಗ ಆಫ್ರಿಕಾಗೆ ನೀಡಿದ ಸಹಾಯಧನಕ್ಕಿಂತ ಇದು ಮೂರು ಪಟ್ಟು ಹೆಚ್ಚಾಗಿದೆ. ಈ ರೀತಿಯ ಸಹಾಯಧನ ದಿಂದಾಗಿ ಆಫ್ರಿಕನ್ ದೇಶಗಳಾದ ಬೆನಿನ್, ಬರ್ಕಿನಾ, ಫಾಸೋ, ಚಾಡ್, ಟೋಗೋ, ಕೀನ್ಯಾ-ಮಾಲಿ

ದೇಶಗಳು 2004ರಲ್ಲಿ 400 ಮಿಲಿಯನ್ ಡಾಲರ್‌ನಷ್ಟು ರಷ್ಟು ಆದಾಯವನ್ನು ಕಳೆದುಕೊಂಡಿವೆಯೆಂದು ಅಂದಾಜು ಮಾಡಲಾಗಿದೆ.

● ಜೂನ್ ತಿಂಗಳಿನಲ್ಲಿ ಪ್ರಕಟವಾದ Financial Times ಪತ್ರಿಕೆಯ ವರದಿಯೊಂದು ಹೀಗಿದೆ. ಆಫ್ರಿಕಾದ ಒಂದು ದೇಶವಾದ ಮೊಜಾಂಬಿಕಾದಲ್ಲಿನ 26 ಸಾವಿರ ಜನರಿಗೆ ಉದ್ಯೋಗ ನೀಡಿರುವ ಸಕ್ಕರೆ ಉದ್ದಿಮೆ ಕುಸಿಯಿತು. ಈ ದೇಶದಲ್ಲಿ ಕಬ್ಬಿನಿಂದ ಉತ್ಪಾದಿಸುವ ಸಕ್ಕರೆಗೆ ಟನ್‌ಗೆ 108ರಿಂದ 104 ಡಾಲರ್ ಬೇಕಿತ್ತು. ಆದರೆ ಯುರೋಪಿನಲ್ಲಿ ಇದೇ ರೀತಿ ಬೀಟ್‌ರೂಟ್ ಗಡ್ಡೆಯಿಂದ ಒಂದು ಟನ್ ಸಕ್ಕರೆ ಉತ್ಪಾದನೆಗೆ 577 ಡಾಲರ್ ಬೇಕು. ಆದರೂ ಮೊಜಾಂಬಿಕ್ ಸಕ್ಕರೆ ಯುರೋಪಿನ ಸಕ್ಕರೆಯೊಂದಿಗೆ ಸ್ಪರ್ಧಿಸಲಾಗಲಿಲ್ಲ. ಏಕೆಂದರೆ ಯುರೋಪಿನ ಸರ್ಕಾರ ಈ ಸಕ್ಕರೆಗೆ ವರ್ಷಕ್ಕೆ 990 ಮಿಲಿಯನ್ ಡಾಲರ್ ಸಹಾಯಧನ ನೀಡುತ್ತಿತ್ತು.

● ಹೊರಗಿನಿಂದ ತನ್ನ ದೇಶದೊಳಕ್ಕೆ ಬರುವ ಉತ್ಪನ್ನಗಳ ಮೇಲೆ ಯುರೋಪಿಯನ್ ಒಕ್ಕೂಟ ಶೇ.200 ರಷ್ಟು ಆಮದು ಸುಂಕ ವಿಧಿಸುತ್ತದೆ. ಇದು ಮೊಜಾಂಬಿಕ್, ಇಥಿಯೊಪಿಯಾ, ಮಾಲವಿ, ಜಾಂಬಿಯಾ ಮುಂತಾದ ಸಕ್ಕರೆ ಉತ್ಪಾದಿಸುವ ದೇಶಗಳಿಗೆ ಸಾಕಷ್ಟು ಹಾನಿ ಮಾಡುತ್ತಿದೆ. 2001ರ ಒಪ್ಪಂದದಲ್ಲಿ ಕೊಂಡುಕೊಳ್ಳಬೇಕೆಂಬ ಷರತ್ತಿದ್ದರೂ ಸಹ ಅದರಲ್ಲಿ ಸಕ್ಕರೆಯನ್ನು ಹೆಚ್ಚಿನ ಪ್ರಮಾಣದಲ್ಲೇನು ಯುರೋಪ್ ಒಕ್ಕೂಟ ಕೊಳ್ಳಲಿಲ್ಲ. ಅತ್ಯಲ್ಪ ಪ್ರಮಾಣದಲ್ಲಿ ಮಾತ್ರ ಖರೀದಿಸಿ 'ಷರತ್ತು ಪೂರೈಸಿತು'.

● 1990ರಲ್ಲಿ ಸೆನೆಗಲ್ ದೇಶದ ರೈತರು ಟೊಮೆಟೊ ಬೆಳೆದು ಉತ್ತಮ ಲಾಭ ಗಳಿಸಿದರು. ಆದರೆ ಮುಕ್ತ ಮಾರುಕಟ್ಟೆಯನ್ನು ಪರಿಚಯಿಸಿದ ನಂತರ ಸೆನೆಗಲ್‌ನ ಟೊಮೆಟೋ ಉತ್ಪಾದನೆ ತೀವ್ರವಾಗಿ ಕುಸಿದು 73,000 ಟನ್ನುಗಳಿಂದ 20,000 ಟನ್ನಿಗೆ ಬಂದಿತು ಮತ್ತು ಸೆನೆಗಲ್ ಮಾರುಕಟ್ಟೆಯ ತುಂಬೆಲ್ಲಾ ಯುರೋಪಿನ ಅಗ್ಗದ ಟೊಮೆಟೊ ಉತ್ಪನ್ನಗಳಿಂದ ತುಂಬಿಹೋದವು. ಸ್ಥಳೀಯ ಟೊಮೆಟೋ ಉತ್ಪನ್ನಗಳ ಉದ್ದಿಮೆಯ ಘಟಕಗಳು ಮುಚ್ಚಿಹೋದವು.

● ಘಾನ ದೇಶದಲ್ಲಿ ಕೋಳಿ ಸಾಗಾಣಿಕೆ ಉದ್ದಿಮೆಯು ಅದನ್ನೆ ನಂಬಿದ್ದ 4 ಲಕ್ಷ ಜನರನ್ನು ದಟ್ಟ ದಾರಿದ್ರ್ಯಕ್ಕೆ ನೂಕಿ ಕುಸಿದುಹೋಯಿತು. ಯುರೋಪಿನ ಸಬ್ಸಿಡಿ ದರದ ಕೋಳಿ ಮಾಂಸ ಸ್ಥಳೀಯ ಬೆಲೆಯ ಅರ್ಧ ಬೆಲೆಯಲ್ಲಿ ಘಾನಾದ ಮಾರುಕಟ್ಟೆಗೆ ಲಗ್ಗೆಯಿಟ್ಟಿತು. 1992ರಲ್ಲಿ ಘಾನಾದ



ಅಗತ್ಯದಲ್ಲಿ ಸ್ಥಳೀಯರು ಶೇ.92 ಪಾಲನ್ನು ಪೂರೈಸುತ್ತಿದ್ದರು. ಅದು 2001ರಲ್ಲಿ ಶೇ.11ಕ್ಕೆ ಕುಸಿಯಿತು. ಈ 'ಘಾನ'ವು ಈ ಹೊರಗಿನ ಉತ್ಪನ್ನಗಳನ್ನು ತಂದು 'ಸುರಿ'ಯುವ ನೀತಿಯ ವಿರುದ್ಧ ಆಮದು ಸುಂಕ ಹೆಚ್ಚಳದ ಮೂಲಕ ನಿರ್ಬಂಧ ಹೇರಲು ಪ್ರಯತ್ನಿಸಿತು. ಆದರೆ ಐಎಂಎಫ್-ಡಬ್ಲ್ಯುಟಿಒಗಳು ಘಾನಾದ ಕೈಗಳನ್ನು ಕಟ್ಟಿ ಹಾಕಿದ್ದವು. ಏನೂ ಮಾಡಲಾಗಲಿಲ್ಲ. ಯುರೋಪಿಯನ್ ಒಕ್ಕೂಟವು ವಾರ್ಷಿಕ 52 ಬಿಲಿಯನ್ ಡಾಲರ್ ಸಹಾಯಧನವನ್ನು ತನ್ನ ಕೋಳಿ ಸಾಕಣೆದಾರರಿಗೆ ನೀಡುತ್ತದೆ. ಕಾಮರೂನ್ ಮತ್ತು ಸೆನೆಗಲ್ ದೇಶವು ಇಂತಹದ್ದೆ ತೊಂದರೆಗಳನ್ನು ಅನುಭವಿಸಿವೆ.

ಮುಕ್ತ ವ್ಯಾಪಾರದ ನೈಜ ಬೆಲೆ

ಕ್ರಿಶ್ಚಿಯನ್ ಏಯ್ಡ್ ಎಂಬ ಸಂಸ್ಥೆಯು ಇತ್ತೀಚಿಗೆ ನಡೆಸಿದ ಸಮೀಕ್ಷೆಯು ಬೆಚ್ಚಿ ಬೀಳಿಸುವ ಅಂಶಗಳನ್ನು ತಿಳಿಸಿದೆ. ಕಳೆದ 20 ವರ್ಷಗಳಲ್ಲಿ ಸಬ್-ಸಹಾರಾನ್ ದೇಶಗಳಲ್ಲಿ ಉದಾರೀಕರಣ ಸಹಾಯದ 'ಷರತ್ತು ಸಾಲ' ಮತ್ತು ಸಾಲ ಪರಿಹಾರಗಳಿಂದ 272 ಬಿಲಿಯನ್ ಡಾಲರ್ ಆದಾಯ 'ನಷ್ಟ'ವಾಗಿದೆಯೆಂದು ಅಂದಾಜು. ತಮ್ಮ ದೇಶದ ಸರ್ಕಾರಗಳಿಂದ ಹೇರಳ ಸಬ್ಸಿಡಿ ಪಡೆಯುವ ಶ್ರೀಮಂತ ರಾಷ್ಟ್ರಗಳ ಉತ್ಪನ್ನಗಳಿಂದಾಗಿ ಈ ಹಾನಿಯಾಗಿದೆ.

ಸಬ್‌ಸಹಾರಾನ್ ಆಫ್ರಿಕಾವು ಸಾಲ ಮನ್ನಾ ಮೂಲಕ ಗಳಿಸಿದ ಮೊತ್ತವು ಸಹ ಹೆಚ್ಚು ಕಡಿಮೆ ಇಷ್ಟೇ ಆಗಿದೆ. ಹೀಗೆ ಹಾನಿಯಾಗಿರುವ ಮೊತ್ತದಿಂದ ಈ ದೇಶಗಳ ಎಲ್ಲ ಮಕ್ಕಳನ್ನೂ ಸರ್ಕಾರ ಶಾಲೆಗೆ ತರಲು ಸಾಧ್ಯವಿತ್ತು- ಇಲ್ಲವೇ ದೇಶದ ಮಕ್ಕಳನ್ನು ಕಾಡುತ್ತಿರುವ ಪ್ರಮುಖ ಕಾಯಿಲೆಯ ವಿರುದ್ಧ ಸಾರ್ವತ್ರಿಕವಾಗಿ 'ವ್ಯಾಕ್ಸಿನ್'ಗಳನ್ನು ಹಾಕಲು ಅವಕಾಶವಿತ್ತು ಎಂದು ಸಂಸ್ಥೆ ಅಂದಾಜು ಮಾಡಿದೆ.

● 2000ರಲ್ಲಿ ಮಾತ್ರವೇ ಈ ಸಬ್ ಸಹರಾನ್ ಆಫ್ರಿಕಾ ದೇಶಗಳು 28 ಬಿಲಿಯನ್ ಡಾಲರ್ ನಷ್ಟ ಅನುಭವಿಸಿವೆ. ಈ ವ್ಯಾಪಾರ ಉದಾರೀಕರಣ ನೀತಿಯಿಂದಾಗಿ ಈ ದೇಶಗಳ ಪ್ರತಿಯೊಬ್ಬ ಪ್ರಜೆ ತಲಾ 45 ಡಾಲರ್ ಸರಾಸರಿ ನಷ್ಟ ಅನುಭವಿಸಿದ್ದರೆ ಶ್ರೀಮಂತ ದೇಶಗಳಿಂದ ಸಿಕ್ಕ ಸಹಾಯವನ್ನು ಹಂಚಿದರೆ ಒಬ್ಬೊಬ್ಬರಿಗೆ ತಲೆಗೆ ಕೇವಲ 20 ಡಾಲರ್ ಮಾತ್ರ ದೊರೆಯುತ್ತದೆ.

ಆಫ್ರಿಕಾದ ದೇಶಗಳು ವಾಣಿಜ್ಯ ಬೆಳೆಗಳನ್ನು, ಕಚ್ಚಾವಸ್ತುಗಳನ್ನು, ಖನಿಜಗಳನ್ನು ರಫ್ತು ಮಾಡಬೇಕೆಂಬ ಒತ್ತಡಗಳು ನಿರಂತರವಾಗಿವೆ. ಈಗ ಈ ಒತ್ತಡ ಇನ್ನೂ ಹೆಚ್ಚಲಿವೆ. ತಮ್ಮ ದೇಶದ ರಫ್ತಿನಲ್ಲಿ ಏನೇ ಹೆಚ್ಚಳವಾಗುತ್ತಿದ್ದರೂ ಬೆಲೆಕುಸಿತದ ಸಮಸ್ಯೆಯಿಂದಾಗಿ ಇದರ ಲಾಭ ಈ ಬಡ ದೇಶಗಳಿಗೆ ದಕ್ಕುತ್ತಿಲ್ಲ.

1980-2000, ನಡುವೆ ಸಕ್ಕರೆಯ ಬೆಲೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ 77 ರಷ್ಟು ಕುಸಿದಿದೆ. ಕೋಕಾ ಶೇ.71ರಷ್ಟು ಕುಸಿದಿದೆ. ಕಾಫಿ-ಶೇ.63, ಹತ್ತಿ ಶೇ.47ರಷ್ಟು ಕುಸಿದಿದೆ. ಇದರ ಒಟ್ಟು ಪರಿಣಾಮ ಎಂದರೆ ಉತ್ಪಾದನೆ ಕುಸಿತ. ಲಾಭಾಂಶ ಕುಸಿತ ಮತ್ತು ವಿದೇಶಿ ಸಾಲದ ಮೇಲೆ ಅವಲಂಬನೆ ಮತ್ತು ಆ ಮೂಲಕ ತಾವು ಗಳಿಸಿದ್ದಕ್ಕಿಂತ ಹೆಚ್ಚನ್ನು ಶ್ರೀಮಂತ ದೇಶಗಳ ಬಾಯಿಗೆ ಕಕ್ಕುವುದು ಇದರಿಂದಾಗಿ ಆಗುತ್ತಿದೆ.

● 14 ವರ್ಷಗಳ ಮುಕ್ತ ವ್ಯಾಪಾರದ ನಂತರ ಘಾನಾದ ಒಟ್ಟು ರಾಷ್ಟ್ರೀಯ ಉತ್ಪನ್ನ 2000ರಲ್ಲಿ 5 ಬಿಲಿಯನ್ ಡಾಲರ್. ಕ್ರಿಶ್ಚಿಯನ್ ಏಯ್ಡ್ ಸಮೀಕ್ಷೆ ಪ್ರಕಾರ ಮುಕ್ತ ವ್ಯಾಪಾರ ನೀತಿ ಇಲ್ಲದೇ ಹೋಗಿದ್ದರೆ ಈ ಜಿಡಿಪಿ ಇನ್ನೂ ಕನಿಷ್ಠ 850 ಮಿಲಿಯನ್ ಡಾಲರ್ ಹೆಚ್ಚಿರುತ್ತಿತ್ತು.

● ಉಗಾಂಡ ದೇಶಕ್ಕೆ 1991-2000ರ ನಡುವೆ 5 ಮಿಲಿಯನ್ ಡಾಲರ್ ನಷ್ಟವಾಗಿದೆ. 2000ದಲ್ಲಿ ಈ ದೇಶದ ಜಿಡಿಪಿ 6 ಬಿಲಿಯನ್ ಡಾಲರ್. ಉದಾರೀಕರಣ ಇಲ್ಲದೇ ಹೋಗಿದ್ದಲ್ಲಿ ಈ ದೇಶದ ಜಿಡಿಪಿ ಇನ್ನು ಕನಿಷ್ಠ 735 ಮಿಲಿಯನ್ ಡಾಲರ್ ಹೆಚ್ಚಾಗಿರುತ್ತಿತ್ತು. 2000ದಲ್ಲಿ ಉಗಾಂಡ ದೇಶದ ಬಡಜನರಿಗೆ ತಲಾ 35 ಡಾಲರ್ ಸಹಾಯದ ರೂಪದಲ್ಲಿ ಬಂದಿದೆ. ಆದರೆ ಅದರಲ್ಲಿ ತಲಾ 32 ಡಾಲರ್‌ಗಳನ್ನು ಮುಕ್ತವ್ಯಾಪಾರ ಹೆಸರಿನಲ್ಲಿ ಕಳೆದುಕೊಂಡಿದ್ದಾರೆ. ಮಾಲಿ ದೇಶದ ಜಿಡಿಪಿ-2000ದಲ್ಲಿ 191 ಮಿಲಿಯನ್ ಡಾಲರ್ ಕಡಿತವಾಗಿದೆ. ಇದು (191 ಮಿ.ಡಾಲರ್) ಆರೋಗ್ಯ ಬಜೆಟ್. ಮಾಲಿಗೆ ಆದ ಒಟ್ಟು ನಷ್ಟ 1991ರಿಂದ 1.4 ಬಿಲಿಯನ್ ಡಾಲರ್‌ಗಳು ಎಂದು ಅಂದಾಜಿಸಲಾಗಿದೆ.

○

ಅರಣ್ಯ ಅತಿಕ್ರಮಣ.............

ಪುಟ 7 ರಿಂದ

ಕೊಳ್ಳಲು ಉಪಯೋಗಿಸಲಾಗಿದೆ. ಇದು ಕೇವಲ ಕರ್ನಾಟಕದ ಸಮಸ್ಯೆ ಮಾತ್ರವಲ್ಲ ಒಂದು ರಾಷ್ಟ್ರೀಯ ಸಮಸ್ಯೆ, ಆದಿವಾಸಿಗಳ, ಬುಡಕಟ್ಟು ಜನರ ಆರ್ಥಿಕ ಒರತೆಯನ್ನು ಬತ್ತಿಸುವ ಸಮಸ್ಯೆಯಾಗಿದೆ. ಮಧ್ಯ ಪ್ರದೇಶದಲ್ಲಿ 1,52,000 ಹೆಕ್ಟೇರ್, ಅಸ್ಸಾಂನಲ್ಲಿ 2,54,711 ಹೆ, ತಮಿಳುನಾಡಿನಲ್ಲಿ 18,600 ಹೆ, ಒರಿಸ್ಸಾ 47,300 ಹೆ, ಪಶ್ಚಿಮ ಬಂಗಾಳ 16,940 ಹೆ, ಮಹಾರಾಷ್ಟ್ರ 73,000 ಹೆ, ಚತ್ತೀಸಗಢ 62,270 ಹೆ.... ಹೀಗೆ ದೇಶದಲ್ಲಿ ಸುಮಾರು 7,25,861 ಹೆಕ್ಟೇರ್ ಭೂಮಿ ಸಾಗುವಳಿಗೆ ಒಳಪಟ್ಟಿದೆ. ಇದು ಅರಣ್ಯ ಇಲಾಖೆಯ ಆಡಳಿತದಲ್ಲಿರುವ ಭೂಮಿಯೇ ಹೊರತಾಗಿ ದಟ್ಟ ಕಾಡುಗಳಲ್ಲ ಎಂಬುದನ್ನು ಗಮನಿಸಬಹುದು. ಹಾಗೆಯೇ ಇವರಲ್ಲಿ ಗದ್ದೆ, ಹೊಲ, ತೋಟಗಳಷ್ಟೇ ಅಲ್ಲ, 3-4-5 ಗುಂಟೆ ಸ್ಥಳದಲ್ಲಿ ಮನೆ, ಕೊಟ್ಟಿಗೆ ಕಟ್ಟಿಕೊಂಡವರಿದ್ದಾರೆ. ಮಲೆನಾಡಿನಲ್ಲಿ ಗ್ರಾಮ ಪಂಚಾಯತ್, ಗ್ರಾಮ ಚಾವಡಿ ಇತ್ಯಾದಿ ಸರಕಾರಿ ಕಚೇರಿಗಳೂ ಹಲವೆಡೆ ಅರಣ್ಯ ಅತಿಕ್ರಮಣದ ಭುಮಿಯಲ್ಲಿಯೇ ಇದೆ. ಉ.ಕ. ಜಿಲ್ಲೆ, ದ.ಕ., ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅತಿ ಹೆಚ್ಚು ಅತಿಕ್ರಮಣ ಭೂಮಿ ಇವೆ. ಉತ್ತರ ಕನ್ನಡ ಜಿಲ್ಲೆಯೊಂದರಲ್ಲಿಯೇ 90 ಸಾವಿರ ಕುಟುಂಬಗಳು ಈ ಭೂಮಿಯನ್ನು ಅವಲಂಬಿಸಿವೆ.

ಅರಣ್ಯ ಮಂತ್ರಾಲಯದ ಬಡವರ ವಿರೋಧಿಯಾದ ಈ ಆದೇಶವನ್ನು ತ್ರಿಪುರ, ಪಶ್ಚಿಮ ಬಂಗಾಳ ಸರ್ಕಾರಗಳು ತಿರಸ್ಕರಿಸಿ ಜಾರಿ ಮಾಡುವುದಿಲ್ಲವೆಂದು, ಯಾವುದೇ ಕಾರಣಕ್ಕೆ ಜನರನ್ನು ಒಕ್ಕಲೆಬ್ಬಿಸುವುದಿಲ್ಲ ಎಂದು ಹೇಳಿವೆ. ಆದರೆ ಈ ಹಿಂದಿನ ಕಾಂಗ್ರೆಸ್ ನೇತೃತ್ವದ ಕರ್ನಾಟಕ ಸರ್ಕಾರ 1980ರ ಅರಣ್ಯ ಕಾಯ್ದೆ 64(ಎ) ದ ಅಡಿಯಲ್ಲಿ ಅತಿಕ್ರಮಣದಾರರ ಮೇಲೆ ಕ್ರಿಮಿನಲ್ ಗುನ್ಹೆ ದಾಖಲಿಸಿಕೊಂಡು ಹೊಟ್ಟೆಪಾಡಿಗಾಗಿ ತೋಟ ಬೆಳೆಸಿದ ರೈತರನ್ನು ಅಪರಾಧಿಗಳನ್ನಾಗಿಸುವ ಪ್ರಯತ್ನ ನಡೆಸಿತು. ಅರಣ್ಯ ಕಳ್ಳತನ ಮಾಡುವವರು, ನೂರಾರು ಎಕರೆ ಲೂಟಿ ಮಾಡುವವರು, ವಿವಿಧ ಯೋಜನೆಯ ಹೆಸರಿನಲ್ಲಿ ಭೂಮಿ ಲಪಟಾಯಿಸುವುವವರು ಈ ದೇಶದಲ್ಲಿ ಅಪರಾಧಿಗಳಲ್ಲ; 5-10 ಗುಂಟೆ ಜಾಗದಲ್ಲಿ ಮನೆ ಕಟ್ಟಿಕೊಂಡವರು, ಅರ್ಧ ಎಕರೆ, ಒಂದು ಎಕರೆ ಅಡಿಕೆ - ತೆಂಗು - ಗೋಡಂಬಿ ಬೆಳೆದು ಮಾನವಂತರಾಗಿ ಬದುಕಲು ಪ್ರಯತ್ನಿಸಿದವರು ಕ್ರಿಮಿನಲ್ ಅಪರಾಧಿಗಳಾಗುವ ವಿಪರ್ಯಾಸ ಇಲ್ಲಿಯದು.

ಅನೇಕ ವರ್ಷಗಳಿಂದ ಪ್ರಾಂತ ರೈತ ಸಂಘ (ಕೆ.ಪಿ.ಆರ್.ಎಸ್.) ಮತ್ತಿನ್ನಿತರ ಸಂಘಟನೆಗಳು ಅರಣ್ಯ ಭೂಮಿ ಸಕ್ರಮಕ್ಕೆ ಒತ್ತಾಯಿಸಿ ಹೋರಾಟ ನಡೆಸುತ್ತಲೇ ಬಂದಿವೆ. 1985 ಡಿಸೆಂಬರ್ ಒಳಗೆ ನಮೂನೆ 6ರಲ್ಲಿ, 1994ರಲ್ಲಿ ನಮೂನೆ 3 ರಲ್ಲಿ ಅರಣ್ಯ ಅತಿಕ್ರಮಣ ಸಾಗುವಳಿದಾರರಿಂದ ಸರ್ಕಾರ ಅರ್ಜಿ ತುಂಬಿಸಿಕೊಂಡಿತು. 1994-95ರಲ್ಲಿ ಅತಿಕ್ರಮಣದಾರರಿಂದ ದಾಖಲೆ ಪತ್ರ, ಹಿಡುವಳಿ ಪತ್ರ,ಉತ್ಪನ್ನ, ಅಫಿಡೆವಿಡ್ ಸಲ್ಲಿಸುವಂತೆ ಅರಣ್ಯಾಧಿಕಾರಿಗಳು ಕೇಳಿದಾಗ ಸಲ್ಲಿಸಲಾಯಿತು. ಆದರೂ ಇದರಿಂದೇನೂ ಪ್ರಯೋಜನ ಆಗಲಿಲ್ಲ. ಇದಕ್ಕೆ ಬದಲಾಗಿ 1985ರ ನಂತರ ಅರಣ್ಯ ಅತಿಕ್ರಮಣ ಆಗಿಲ್ಲವೆಂದು ಸರ್ಕಾರಕ್ಕೆ ಇಲಾಖೆ ಸುಳ್ಳು ವರದಿ ಸಲ್ಲಿಸುತ್ತಲೇ ಇದೆ.

ಇನ್ನೊಂದೆಡೆ ಕುಣಬಿ ಮರಾಠಿಗಳಂತಹ ಅತಿ ಹಿಂದುಳಿದ ಅರಣ್ಯವಾಸಿಗಳಿಗೆ ಸ್ವಾತಂತ್ರ್ಯ ಪೂರ್ವದಲ್ಲಿಯೇ ಕುಂಬ್ರಿ ಜಮೀನನ್ನು ಕೊಟ್ಟಿದ್ದರೂ ಇನ್ನೂವರೆಗೆ ಅವರಿಗೆ ಪಟ್ಟಾ ವಿತರಿಸಲಿಲ್ಲ. ಈ ಆದೇಶದಿಂದ ಅತಿ ಹೆಚ್ಚು ತೊಂದರೆಗೆ ಒಳಗಾಗುವವರು ಬುಡಕಟ್ಟಿನ ಜನ, ಕುಣಬಿಗಳು, ಸಿದ್ಧಿಗಳು, ದಲಿತರು, ಗೊಂಡರು, ಹಿಂದುಳಿದ ವರ್ಗದವರು. ಇವರೆಲ್ಲರ ಪರವಾಗಿ ಸರ್ಕಾರ ಸುಪ್ರಿಂಕೋರ್ಟಿಗೆ ವಾಸ್ತವವನ್ನು ತಿಳಿ ಹೇಳುವ ಮೇಲ್ಮನವಿಯನ್ನು ಸಲ್ಲಿಸಬಹುದಾಗಿತ್ತು. ಅರಣ್ಯ ಕಾಯ್ದೆಗೆ ಅಗತ್ಯ ತಿದ್ದುಪಡಿಯನ್ನು ತರಬೇಕಾಗಿತ್ತು. ಆದರೆ ಸರ್ಕಾರ ಇದಾವುದನ್ನು ಮಾಡದಿರುವುದು ಖಂಡನಾರ್ಹವಾಗಿದೆ.

ಹಲವು ಕುಟುಂಬಗಳು 1960-70ರ ಪೂರ್ವದಲ್ಲಿಯೇ ಅತಿಕ್ರಮಿಸಿಕೊಂಡಿದ್ದರೂ ಅರಣ್ಯ ಇಲಾಖೆ ಪಂಚನಾಮೆ, ದಂಡ ಇತ್ಯಾದಿ ಅಗತ್ಯ



ದಾಖಲೆ ಇಲ್ಲ. ಇದ್ದ ದಾಖಲೆಯನ್ನೂ ಕಳೆದುಕೊಂಡಿದ್ದಾರೆ. ಹಾಗಾಗಿ ಸರಕಾರ ಸ್ಥಳ ಪರಿಶೀಲಿಸಿ ಅಲ್ಲಿ ಬೆಳೆದ ಮರಮಟ್ಟುಗಳ ವರ್ಷವನ್ನು ಲೆಕ್ಕ ಹಾಕಬೇಕಾಗಿದೆ. ಉ.ಕ. ಶಿವಮೊಗ್ಗದಂತಹ ಮಲೆನಾಡಿನಲ್ಲಿ ಇರುವ ಭೂಮಿಯಲ್ಲಿ ಸಾಮಾನ್ಯ 70-80 ಶೇಕಡಾ ಅರಣ್ಯ ಭೂಮಿಯೇ ಆಗಿರುವುದರಿಂದ, ವಿವಿಧ ಬೃಹತ್ ಯೋಜನೆಗಳಲ್ಲಿ ಭೂಮಿ-ಮನೆ ಕಳೆದುಕೊಂಡವರು ದೊಡ್ಡ ಸಂಖ್ಯೆಯಲ್ಲಿರುವುದರಿಂದ ಈ ಭೂಮಿಯನ್ನು ಸಮ ಮಾಡದೆ ಬೇರೆ ಉಪಾಯವಿಲ್ಲ.

ಭೂಮಿ ಅಭಿವೃದ್ಧಿಯ ಮೂಲ ಆಧಾರವಾಗಿದೆ. ಕೃಷಿಯಿಂದ ಉತ್ಪಾದನೆ ಅಧಿಕಗೊಳ್ಳುತ್ತದೆ; ಆಹಾರಧಾನ್ಯದ ಬೆಳೆ ಈ ಭೂಮಿಯಿಂದಲೇ ಕೊಳ್ಳುವ ಶಕ್ತಿ ಹೆಚ್ಚುತ್ತದೆ. ಮಾರುಕಟ್ಟೆ ವಿಸ್ತಾರವಾಗುತ್ತದೆ. ಕೈಗಾರಿಕೀಕರಣ ಹೆಚ್ಚಿ ಉದ್ಯೋಗಾವಕಾಶ ಲಭಿಸುತ್ತದೆ. ಇಂತಹ ಭೂಮಿಯ ಅಭಿವೃದ್ಧಿ ಭೂಸುಧಾರಣೆಯಿಂದ ಸಾಧ್ಯ. ಆದರೆ ಸರ್ಕಾರ ಈ ಬಗ್ಗೆ ಆಸಕ್ತವಾಗಿಲ್ಲ. ಕೃಷಿಯೋಗ್ಯ ಭೂಮಿ ಭೂಮಾಲಕರ ಕೈಯಲ್ಲಿದೆ. ಅವರಿಂದ ಅದನ್ನು ವಶಪಡಿಸಿಕೊಳ್ಳುತ್ತಿಲ್ಲ. ಭೂಮಿತಿ ಹಾಕಿ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಳ್ಳುತ್ತಿಲ್ಲ. ಈ ದೇಶದಲ್ಲಿ ಸುಮಾರು 30 ಮಿಲಿಯ ಎಕರೆಯಷ್ಟು ಮಿಗುತೆ ಭೂಮಿ ಇದೆ. ಸರ್ಕಾರದ ಕೈಯಲ್ಲಿಯೇ ಇರುವ ಕೃಷಿ ಯೋಗ್ಯ ಭೂಮಿ ಬೀಳು ಬಿದ್ದಿದೆ; ಇನ್ನು ಕೆಲವು ಕಡೆ ಅತೀ ಅಕೇಶಿಯಾದಂತ ಮರ ಬೆಳೆಯಲಾಗುತ್ತಿದೆ. 90ರ ದಶಕದಲ್ಲಿ ಅರಂಭವಾದ ಉದಾರೀಕರಣದ ನೀತಿಯ ಪರಿಣಾಮವಾಗಿ ಭೂಸುಧಾರಣೆ ನೀತಿಯನ್ನು ದುರ್ಬಲಗೊಳಿಸಲಾಗಿದೆ. ರೈತರಿಗೆ ಭೂಮಿ ಕೊಡುವ ಬದಲು ಅವರನ್ನು ಒಕ್ಕಲೆಬ್ಬಿಸಿ ಶ್ರೀಮಂತರಿಗೆ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಲೀಸ್ ಮೇಲೆ ನೀಡಲು ಆರಂಭಿಸಲಾಗಿದೆ. ಉದಾಹರಣೆಗೆ ತಮಿಳುನಾಡು ಸರಕಾರ 50 ಲಕ್ಷ ಎಕರೆ ಸರ್ಕಾರಿ ಭೂಮಿಯನ್ನು ಬಹುರಾಷ್ಟ್ರೀಯ ಕಂಪನಿಗೆ ಹಸ್ತಾಂತರಿಸಿದೆ.

ಹಾಗಾಗಿ 1980ರ ಅರಣ್ಯ ಕಾಯ್ದೆ ತಿದ್ದುಪಡಿ ಮಾಡಿ ಅತಿಕ್ರಮಣ ಮಾಡಿಕೊಂಡಿರುವ ಎಲ್ಲಾ ಕೃಷಿ ಕೂಲಿಕಾರರು, ಬಡವರಿಗೆ ಭೂಮಿ ಪಟ್ಟಾ ಕೊಡಬೇಕು, ಅಲ್ಲಿಯವರೆಗೆ ಇಲಾಖೆಯ ಮೂಲಕ ಒಕ್ಕಲೆಬ್ಬಿಸುವುದನ್ನು ನಿಲ್ಲಿಸಬೇಕು. ಹೀಗೆ ಇಡೀ ಪ್ರಕರಣವನ್ನು ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ನೋಡಬೇಕಾಗಿದೆ.

ಯು.ಪಿ.ಎ. ಸರ್ಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಭೂಮಿಯ ಸಮಸ್ಯೆ ಬಗೆಹರಿಸುವ ಭರವಸೆ ಏನಿದೆ, ಅದನ್ನು ಜಾರಿಗೊಳಿಸಲು ರೈತರ ಹೋರಾಟ ನಡೆಸಿ ಒತ್ತಡ ಹೇರುವುದೊಂದೇ ಉಳಿದಿರುವ ಮಾರ್ಗ.

○

ನಕ್ಸಲ್ ವಾದದ ವಿರುದ್ಧ ಜನಜಾಗೃತಿಗೆ ಕರೆ

ಮಂಗಳೂರಿನಲ್ಲಿ ಇತ್ತೀಚೆಗೆ ನಕ್ಸಲ್‌ವಾದದ ಪರವಾದ ಮತ್ತು ನಕ್ಸಲ್‌ವಾದದ ನೈಜ ಮುಖವನ್ನು ಬಯಲು ಮಾಡುವ ಎರಡೂ ಬಗೆಯ ವಿಚಾರ ಸಂಕಿರಣಗಳು ನಡೆದಿವೆ. ಎರಡು ಬಗೆಯ ಚಿಂತನೆಗಳ ನಡುವಿನ ವ್ಯತ್ಯಾಸವನ್ನು ಅರಿಯದಂತೆ ಅಲ್ಲಿಯ ಜಿಲ್ಲಾಡಳಿತ ಬೇಜವಾಬ್ದಾರಿತನ ತೋರಿದೆ. ಈ ಒಟ್ಟು ವಿಚಾರಗಳ ಕುರಿತ ವರದಿ ಇಲ್ಲಿದೆ.

ಕರ್ನಾಟಕದಾದ್ಯಂತ ಕಾರ್ಯಾಚರಿಸುತ್ತಿರುವ ನಕ್ಸಲೀಯ ಗುಂಪುಗಳು ಮಾವೋವಾದಿ ಲೆನಿನ್ ವಾದಿ ಅಥವಾ ಮಾರ್ಕ್ಸ್‌ವಾದಿಗಳು ಖಂಡಿತಾ ಅಲ್ಲ. ಅವರು ಒಂದು ಕಾಲದಲ್ಲಿ ಚೀನದ ಅಭಿವೃದ್ಧಿ ಕುಂಠಿತಗೊಳ್ಳಲು ಕಾರಣನಾಗಿದ್ದ ಲಿನ್ ಪಿಯಾವೊ ಎಂಬ ವ್ಯಕ್ತಿಯ ವಾದದವರು. ಮಾವೋ, ಲೆನಿನ್ ಹಾಗೂ ಕಾರ್ಲ್‌ಮಾರ್ಕ್ಸ್‌ರವರ ತತ್ವಗಳಿಗೆ ವಿರುದ್ಧವಾಗಿಯೇ ವರ್ತಿಸುತ್ತಿರುವ ನಕ್ಸಲರು ತಾವು ಮಾವೋವಾದಿಗಳೆಂದು ಹೇಳುತ್ತಿದ್ದಾರೆ. ಆದರೆ ನಕ್ಸಲರು ಚೀನಾ ದೇಶದ ಅಭಿವೃದ್ಧಿ ಕುಂಠಿತಗೊಳ್ಳಲು ಕಾರಣನಾದ ಲಿನ್‌ಪಿಯಾವೊನ ವಿಚಾರಧಾರೆಯನ್ನೇ ಹೊಂದಿದ್ದಾರೆ ಎಂದು ಸಿಪಿಐಎಂನ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಹೇಳಿದರು.

ಅವರು ಮಾನವತಾ ವೇದಿಕೆಯ ವತಿಯಿಂದ ನಡೆದ 'ನಕ್ಸಲ್‌ವಾದ ಪ್ರಸ್ತುತವೇ' ಎಂಬ ವಿಚಾರಗೋಷ್ಠಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ನಕ್ಸಲೀಯ ಸಂಘಟನೆಗಳು ಎಡ ಪಂಥೀಯ ಚಳುವಳಿಗೆ ಹಾನಿ ಮಾಡಲು ಪ್ರಯತ್ನಿಸುತ್ತಿವೆ. ನಕ್ಸಲೀಯರಿಗೂ ಎಡ ಸಂಘಟನೆಗಳಿಗೂ ಯಾವುದೇ ಸಂಬಂಧವಿಲ್ಲ ಎಂದರು.

ದೇಶದ ವಿದ್ಯಾವಂತರೂ, ಬುದ್ಧಿಜೀವಿಗಳು, ದಲಿತರು, ಮಧ್ಯಮ ವರ್ಗದ ಯುವಕ, ಯುವತಿಯರಲ್ಲಿ ನಕ್ಸಲರು ಈ ಲಿನ್‌ಪಿಯಾವೋನ ವಿಚಾರವನ್ನೇ ಪ್ರಚಾರ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಯುವ ಸಮುದಾಯವನ್ನು ತಮ್ಮ ಕಡೆಗೆ ಸೆಳೆಯಲು ಪ್ರಯತ್ನಿಸುತ್ತಿದ್ದಾರೆ.

ನಕ್ಸಲರು ಮಾಡುತ್ತಿರುವ ವೈಯಕ್ತಿಕ ದ್ವೇಷದ ಹತ್ಯೆಗಳನ್ನು ಕ್ರಾಂತಿ ಎನ್ನಲಾಗುವುದಿಲ್ಲ. ಈ ರೀತಿಯ ಹೋರಾಟವನ್ನು ಮುಂದುವರಿಸಿದರೆ ದೇಶಾದ್ಯಂತ ರಕ್ತಸಿಕ್ತವಾದ ಹೋರಾಟ ಮಾತ್ರ ನಡೆಯುತ್ತದೆ.

ಈ ಕಾರಣಕ್ಕಾಗಿಯೇ ದೇಶದಲ್ಲಿ ವಿವಿದೆಡೆ ಕಾರ್ಯಾಚರಿಸುತ್ತಿರುವ ನಕ್ಸಲ್ ಗುಂಪುಗಳಿಂದಾಗುವ ಅಪಾಯದ ವಿರುದ್ಧ ಜನ ಜಾಗೃತಿ ಮೂಡಿಸು ವುದು ಅನಿವಾರ್ಯವಾಗಿದೆ ಎಂದೂ ನಾಗರಾಜ್‌ರವರು ಎಚ್ಚರಿಸಿದರು.



> ಪ್ರೀತಿ ಬಸಿದು
> ಬೆಳೆಯುತ್ತಿದೆ
> ಭಯೋತ್ಪಾದನೆ
> ಪ್ರೀತಿ ಬೆಸೆದು
> ಬೆಳೆಯುತ್ತಿದೆ
> ಸೌಹಾರ್ದ ಭಾವನೆ
>
> ಎನ್.ವಿ.ಸೌಮ್ಯರಾಣಿ
> ಬಳ್ಳಾರಿ

ನಕ್ಸಲ್ ಗುಂಪುಗಳು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಕಳೆದುಕೊಂಡು ಯುವಕ, ಯುವತಿಯರನ್ನು ಶಸ್ತ್ರ ಹಿಡಿಯಲು ಪ್ರೇರೇಪಿಸುತ್ತಿರುವುದರ ವಿರುದ್ಧ ನಾಡಿನ ಜನರಲ್ಲಿ ಜಾಗೃತಿ ಮೂಡಿಸಬೇಕಾಗಿದೆ ಎಂದೂ ಅವರು ಹೇಳಿದರು.

ಇನ್ನೋರ್ವ ಮುಖ್ಯ ಅತಿಥಿಯಾಗಿದ್ದ ಪ್ರಗತಿಪರ ಚಿಂತಕ ಆದಮಾರು ಶ್ರೀಪತಿ ಆಚಾರ್ಯ ಮಾತನಾಡುತ್ತ ನಕ್ಸಲ್ ಸಮಸ್ಯೆ ಹುಟ್ಟಿಕೊಂಡದ್ದೇ ಭೂಮಿಯ ವಿಷಯದಿಂದ, ನಕ್ಸಲ್ ಚಳುವಳಿ ಮೊದಲು ತಲೆ ಎತ್ತಿದ ಪಶ್ಚಿಮ ಬಂಗಾಳ, ಕೇರಳದಲ್ಲಿ ಭೂ ಸುಧಾರಣೆ ಆಗಿರುವ ಕಾರಣ. ಈಗ ಅಲ್ಲಿ ನಕ್ಸಲ್ ಚಳುವಳಿ ಸ್ಥಗಿತಗೊಂಡಿದೆ ಎಂದರು.

ನಕ್ಸಲೀಯರ ಕೆಂಬಾವುಟದಲ್ಲಿ ಕತ್ತಿ ಸುತ್ತಿಗೆಯ ಜೊತೆಗೆ ಒಂದು ಬಂದೂಕಿನ ಚಿಹ್ನೆಯೂ ಇದ್ದು, ಅವರು ಎಡ ಪಂಥೀಯ ಚಳುವಳಿಗೆ ವಿರುದ್ಧವಾಗಿ ಕಾರ್ಯಾಚರಿಸುತ್ತಿದ್ದಾರೆ. ದೇಶದ ಯಾವುದೇ ಎಡ ಸಂಘಟನೆಗಳ ಬಾವುಟದಲ್ಲಿ ಬಂದೂಕಿನ ಚಿಹ್ನೆ ಇಲ್ಲ ಅದು ನಕ್ಸಲೀಯರಲ್ಲಿ ಮಾತ್ರ ಇರುವುದು, ಆದ್ದರಿಂದ ಎಡ ಸಂಘಟನೆಗಳಿಗೂ, ನಕ್ಸಲ್ ಸಂಘಟನೆಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಮಾನವತಾ ವೇದಿಕೆಯ ಅಧ್ಯಕ್ಷ ಯಶವಂತ ಮರೋಳಿ ವಹಿಸಿದ್ದರು. ವೇದಿಕೆಯ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ ಸ್ವಾಗತಿಸಿದರು. ಚಿಂತಕ ವಾಸುದೇವ ಉಚ್ಚಿಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುನೀರ್ ಕಾಟಿಪಳ್ಳ ಧನ್ಯವಾದ ಅರ್ಪಿಸಿದರು.

ಕೃಷ್ಣಪ್ಪ ಕೊಂಚಾಡಿ.

ದಕ್ಷಿಣ ಕನ್ನಡ ಜಿಲ್ಲಾಡಳಿತದ ಅಜ್ಞಾನ ಮತ್ತು ಹೊಣೆಗೇಡಿತನ

'ಪಿಯುಸಿಎಲ್ ಮತ್ತು ಮಾನವ ಧರ್ಮ ಜಾಗೃತಿ' ಎಂಬ ಹೆಸರಿನಲ್ಲಿ ಕೈಬೆರಳೆಣಿಕೆಯ ಜನರ ಕೂಟವು ಮಂಗಳೂರಿನಲ್ಲಿ ಇತ್ತೀಚೆಗೆ 'ನಕ್ಸಲ್‌ವಾದ ಮತ್ತು ಮಾನವ ಹಕ್ಕುಗಳು' ಎಂಬ ಬಗ್ಗೆ ವಿಚಾರ ಸಂಕಿರಣ ನಡೆಸಿ ಮಾನವ ಹಕ್ಕುಗಳ ಹೆಸರಿನಲ್ಲಿ ನಕ್ಸಲ್‌ವಾದದ ತುತ್ತೂರಿ ಊದಿದ್ದಾರೆ. ಕವಿರಂಗ ಶಿವ ಸುಂದರ್, ಬೆಂಗಳೂರಿನ ವಕೀಲ ಬಿ.ಎನ್.ಜಗದೀಶ್ ಮುಂತಾದವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಜಿಲ್ಲಾ ಕಂದಾಯ ಭವನದಲ್ಲಿ ನಿಗದಿಯಾಗಿದ್ದ ಈ ಕಾರ್ಯಕ್ರಮವು ನಕ್ಸಲ್‌ಪರ ಎಂಬ ಕಾರಣಕ್ಕೆ ಕೊನೆಗಳಿಗೆಯಲ್ಲಿ ಜಿಲ್ಲಾಡಳಿತ ಅನುಮತಿ ನಿರಾಕರಿಸಿದ್ದರಿಂದ ಮಂಗಳೂರಿನ ಹೊರವಲಯದಲ್ಲಿ ನಡೆದಿದೆ.

ನಕ್ಸಲ್‌ವಾದದ ನೈಜ ಮುಖವನ್ನು ಅನಾವರಣಗೊಳಿಸುವ ಕಾರ್ಯಕ್ರಮವೊಂದನ್ನು ಮರುದಿನ ಇದೇ ಕಂದಾಯಭವನದಲ್ಲಿ 'ಮಂಗಳೂರಿನ ಮಾನವತಾ ವೇದಿಕೆ' ಯೋಜಿಸಿತ್ತು. ಜಿಲ್ಲಾಡಳಿತದ ಅಜ್ಞಾನ ಬೇಜವಾಬ್ದಾರಿತನ ಹೇಗಿದೆ ನೋಡಿ. ಕಂದಾಯ ಭವನದಲ್ಲಿ ಈ ಕಾರ್ಯಕ್ರಮ ನಡೆಸಲು ಕೊನೆಯ ಗಳಿಗೆಯಲ್ಲಿ ಫೋನ್ ಮಾಡಿ ಅನುಮತಿ ನಿರಾಕರಿಸಲಾಗಿದೆ ಎಂದು ತಿಳಿಸಿದರು. ಪೊಲೀಸರನ್ನು ಸಂಪರ್ಕಿಸಿದರೆ "ನಾವು ಒತ್ತಡ ಹಾಕಿಲ್ಲ" ಎನ್ನುತ್ತಾರೆ. ವೇದಿಕೆಯ ಪರವಾಗಿ ರಾತ್ರಿ 8ರ ಹೊತ್ತಿನಲ್ಲಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಸಂಘಟನೆಯ ಧೋರಣೆಯನ್ನು ಮನವರಿಕೆ ಮಾಡಿಕೊಟ್ಟಾಗ ಒಪ್ಪಿ ಆಪ್ತ ಸಹಾಯಕರಿಗೆ ಕಂದಾಯ ಭವನದ ಕೀ ಕೊಡಲು ಸೂಚಿಸಿದರು. ಮರುದಿನ ಬೆಳಿಗ್ಗೆ ಮತ್ತೆ 'ಕೀ' ಕೈಕೊಟ್ಟಿತು. ವಿಚಾರಿಸಿದಾಗ ತಿಳಿದಿದ್ದೇನೆಂದರೆ ಜಿಲ್ಲಾಧಿಕಾರಿಗಳು ಮತ್ತೆ ಆಪ್ತ ಸಹಾಯಕರನ್ನು ಕರೆದು ಕೀ ಕೊಡುವುದು ಬೇಡ ಎಂದು ಸೂಚಿದರಂತೆ!

"ನಕ್ಸಲ್‌ಪರ ಇರುವವರಿಗೆ ಹಾಲ್ ಕೊಡದಿರುವಾಗ ಇವರಿಗೂ ಕೊಡುವುದು ಬೇಡ" ಎಂಬುದೇ ಅಧಿಕಾರಿಗಳ ಅಮೋಘ ವಾದವಂತೆ. ಜವಾಬ್ದಾರಿ ಸ್ಥಾನದಲ್ಲಿರುವ ಅಧಿಕಾರಿಗಳ ಅಜ್ಞಾನ ಹೊಣೆಗೇಡಿತನಕ್ಕೆ ಒಂದು ಮಿತಿ ಬೇಡವೇ. ನಕ್ಸಲರ ಪರವಾಗಿರುವವರ ಮಧ್ಯೆಯೂ, ವಿರುದ್ಧವಿರುವ ಸಂಘಟನೆಯ ಮಧ್ಯೆಯೂ ವ್ಯತ್ಯಾಸವನ್ನು ಕಾಣಲು ವಿಫಲರಾದ ಆಡಳಿತಗಾರರು ಎಂತಹ ನ್ಯಾಯ, ಆಡಳಿತ ನೀಡಿಯಾರು?

ವಿಶ್ವವಿದ್ಯಾಲಯಗಳ ನೌಕರರ 9ನೇ ಅಖಿಲ ಭಾರತ ಯಶಸ್ವಿ ಸಮ್ಮೇಳನ

ಅಖಿಲ ಭಾರತ ವಿಶ್ವವಿದ್ಯಾಲಯಗಳ ನೌಕರರ ಕಾನ್‌ಫೆಡರೇಷನ್ನಿನ 9ನೇ ಸಮ್ಮೇಳನವು ಇತ್ತೀಚೆಗೆ ವಿಜಯವಾಡಾದ ಎನ್‌ಟಿಆರ್ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ನಡೆದಿದೆ.

ಸಮ್ಮೇಳನವನ್ನು ಅಖಿಲ ಭಾರತ ಸರಕಾರಿ ನೌಕರರ ಫೆಡರೇಷನ್ನಿನ ಪ್ರಧಾನ ಕಾರ್ಯದರ್ಶಿ ಕಾ.ಸುಕೊಮೋಲ್‌ಸೇನ್ ಉದ್ಘಾಟಿಸಿದರು. ಈ ಹಿಂದೆ ಎರಡು ಸಲ ಕೊಲ್ಕತ್ತಾದಲ್ಲಿ ನಡೆದ 6ನೇ ಮತ್ತು 8ನೇ ಸಮ್ಮೇಳನಗಳನ್ನು ಕ್ರಮವಾಗಿ ಕಾಂ|| ಜ್ಯೋತಿ ಬಸು ಹಾಗೂ ಕಾಂ|| ಬಿನೊಯ್ ಚೌಧರಿ ಉದ್ಘಾಟಿಸಿದ್ದರು. ಈ ಸಮ್ಮೇಳನದ ಉದ್ಘಾಟನೆಗೆ ಕಾಂ| ಸೋಮನಾಥ ಚಟರ್ಜಿ ಯವರನ್ನು ಆಹ್ವಾನಿಸಲಾಗಿತ್ತು. ಆದರೆ ಸಮಯದ ಅಭಾವದಿಂದಾಗಿ ಅವರು ಬರಲಿಕ್ಕಾಗಲಿಲ್ಲ. ಸಮ್ಮೇಳನದಲ್ಲಿ ಭ್ರಾತೃ ಪ್ರತಿನಿಧಿಯಾಗಿ ಅಖಿಲ ಭಾರತ ವಿಶ್ವವಿದ್ಯಾಲಯಗಳ ಶಿಕ್ಷಕರ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಕಾಂ|| ಪಿ.ವಿಜಯಕುಮಾರ್ ಭಾಗವಹಿಸಿದ್ದರು.

ಸಮ್ಮೇಳನದಲ್ಲಿ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾ, ಆಂಧ್ರ ಪ್ರದೇಶ, ತಮಿಳು ನಾಡು ಮತ್ತು ಕರ್ನಾಟಕ ಒಳಗೊಂಡು ಒಟ್ಟು 17 ರಾಜ್ಯಗಳ 82 ವಿಶ್ವವಿದ್ಯಾಲಯಗಳಿಂದ 296 ಪ್ರತಿನಿಧಿ ವೀಕ್ಷಕರು ಭಾಗವಹಿಸಿದ್ದರು.

ವಿಶ್ವವಿದ್ಯಾಲಯಗಳ ಕಾಯ್ದೆಗಳ ಪ್ರಜಾಪ್ರಭುತ್ವೀಕರಣಕ್ಕೆ ಒತ್ತಾಯಿಸಿ, ದೇಶದ ಆರ್ಥಿಕ ಪರಿಸ್ಥಿತಿ ಕುರಿತು, ಶಿಕ್ಷಣದಲ್ಲಿ ಖಾಸಗೀಕರಣ ಹಾಗೂ ವಿದೇಶಿ ವಿಶ್ವವಿದ್ಯಾಲಯಗಳ ನುಸುಳುವಿಕೆ ವಿರೋಧಿಸಿ, ಇರಾಕ್ ಮೇಲೆ ಅಮೇರಿಕಾದ ಯುದ್ಧ ಖಂಡಿಸಿ, ಮುಷ್ಕರದ ಹಕ್ಕು ಜಾರಿ ತರುವಂತೆ ಒತ್ತಾಯಿಸಿ ಮತ್ತಿನ್ನಿತರ ಮಹತ್ವದ ನಿರ್ಣಯಗಳನ್ನು ಕಾನ್‌ಫೆಡರೇಷನ್ನಿನ 9ನೇ ಸಮ್ಮೇಳನ ಅಂಗೀಕರಿಸಿದೆ ಎಂದು ವರದಿ ತಿಳಿಸಿದೆ.

ಕರ್ನಾಟಕದ ಈ ಆರು ಪ್ರಮುಖ ವಿಶ್ವವಿದ್ಯಾಲಯಗಳ ಪ್ರತಿನಿಧಿಗಳು - ವೀಕ್ಷಕರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಗುಲ್ಬರ್ಗಾ ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕೃಷಿ ವಿಶ್ವವಿದ್ಯಾಲಯ, ಧಾರವಾಡ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು .

ಮೈಸೂರು - ಬೆಂಗಳೂರು ವಿಶ್ವ ವಿದ್ಯಾಲಯಗಳ ಪ್ರತಿನಿಧಿಗಳು ಹಾಜರಾಗಿರಲಿಲ್ಲ. ಆದರೆ ಅವರು ಶುಭಾಶಯಗಳನ್ನು ಕಳುಹಿಸಿದ್ದರು.

ಸಮ್ಮೇಳನದ ಮಹತ್ವದ ಭಾಗವಾದ ಪದಾಧಿಕಾರಿಗಳ-ಕಾರ್ಯಕಾರಿ ಸದಸ್ಯರ ಚುನಾವಣೆ ಕೊನೆಯ ದಿನಾಂಕ 29.05.05 ರಂದು ನಡೆದು ಒಟ್ಟು 42 ಜನರ ಕಾರ್ಯಕಾರಿ ಪದಾಧಿಕಾರಿಗಳ ಸಮಿತಿಯನ್ನು ಚುನಾಯಿಸಲಾಯಿತು. ಗುಲಬರ್ಗಾ ವಿಶ್ವವಿದ್ಯಾಲಯದ ಕಾಂ| ಿ.ಬಿ. ಸಜ್ಜನ್ ಕಾನ್‌ಫೆಡರೇಷನ್ನಿನ ಸೆಕ್ರೆಟರಿ ಜನರಲ್ ಆಗಿ ಆಯ್ಕೆಯಾಗಿದ್ದಾರೆ. ಈ ಹುದ್ದೆಯನ್ನು ಇದಕ್ಕೂ ಮೊದಲು ಕೊಲ್ಕತ್ತಾ ವಿಶ್ವವಿದ್ಯಾಲಯದ ಕಾ.ಸುನೀಲ್ ದಾಸ್ ಗುಪ್ತಾ ವಹಿಸಿಕೊಂಡಿದ್ದರು. ರಾಷ್ಟ್ರೀಯ ಕಾರ್ಯಕಾರಿಣಿಗಳಿಗೆ ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಕಾಂ|| ಎಂ.ಆರ್.ಪಾಟೀಲ್ ಮತ್ತು ಮಂಗಳೂರು ವಿಶ್ವವಿದ್ಯಾಲಯದ ಕಾಂ|| ರಾಜೀವ್ ವಾಗ್ಲೆ ಆಯ್ಕೆಯಾಗಿದ್ದಾರೆ.

ಸಮ್ಮೇಳನದ ನಂತರ ಕರ್ನಾಟಕವೂ ಸೇರಿದಂತೆ ದೇಶದ ಬಹಳಷ್ಟು ವಿಶ್ವವಿದ್ಯಾಲಯಗಳ ಶಿಕ್ಷಕೇತರ ನೌಕರರ ಸಂಘಟನೆಗಳಿಗೆ ಹೊಸ ಹುರುಪು ಬಂದಿದೆ. ಬರುವ ಸೆಪ್ಟೆಂಬರ್ 19-20ರಂದು ಗೌಹಾತಿ ವಿಶ್ವವಿದ್ಯಾಲಯದಲ್ಲಿ ನಡೆಯಲಿರುವ ಕಾನ್‌ಫೆಡರೇಷನ್ನಿನ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಹೋರಾಟದ ಕರೆ ನೀಡುವ ನಿರೀಕ್ಷೆ ಇದೆ.

- ಗಂಗಾ

PRB DECR 319-79/79 AIKYARANGA WEEKLY Reg.No.17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹಮ್ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH